ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಅಕ್ಟೋಬರ್ 10 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 173 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಲಂಚ ಸ್ವೀಕರಿಸುತ್ತಿದ್ದ ಕೆಎಸ್‌ಆರ್‌ಟಿಸಿ ಅಧಿಕಾರಿ ಲೋಕಾ ಬಲೆಗೆ

ಮೈಸೂರು, ಅ. 9 (ಆರ್‌ಕೆ)– ಲಂಚ ಸ್ವೀಕರಿಸುತ್ತಿದ್ದಾಗ ಕೆಎಸ್‌ಆರ್‌ಟಿಸಿ ಮೈಸೂರು ಗ್ರಾಮಾಂತರ ವಿಭಾಗದ ಅಧಿಕಾರಿ ಲೋಕಾಯುಕ್ತ ಪೊಲೀಸರು ಹಣದ ಸಮೇತ ಬಂಧಿಸಿದ್ದಾರೆ.

ಕೆಎಸ್‌ಆರ್‌ಟಿಸಿ ಸಹಾಯಕ ಆಡಳಿತಾಧಿಕಾರಿ ಸಿ.ಟಿ.ಮಂಜುನಾಥ್, ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದವರು. ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಚನ್ನಪಿಳ್ಳೆಕೊಪ್ಪಲು ಗ್ರಾಮದ ಲೇಟ್ ಸಿದ್ದೇಗೌಡರ ಮಗ ಎಸ್. ಸಂತೋಷ್ ಕುಮಾರ್, ಅನುಕಂಪದ ಆಧಾರದಲ್ಲಿ ನೌಕರಿಗಾಗಿ ಅರ್ಜಿ ಸಲ್ಲಿಸಿದ್ದರು. ಅನುಮೋದಿಸಿ ಕಡತವನ್ನು ಕೆಎಸ್‌ಆರ್‌ಟಿಸಿ ಬೆಂಗಳೂರಿನ ಪ್ರಧಾನ ಕಛೇರಿಗೆ ಕಳುಹಿಸಿ ಕೊಡಲು ಮಂಜುನಾಥ್ 10,000 ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಇದರಿಂದ ಬೇಸತ್ತ ಸಂತೋಷ್ ಕುಮಾರ್ ಅವರು ಮೈಸೂರಿನ ಲೋಕಾಯುಕ್ತ ಎಸ್ಪಿ ಕಛೇರಿಗೆ ಲಿಖಿತ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಕಾರ್ಯಾಚರಣೆ ನಡೆಸಿ ಬುಧವಾರ 10,000 ರೂ. ಲಂಚ ಸ್ವೀಕರಿಸುತ್ತಿದ್ದಾಗ ಮಂಜುನಾಥ್‌ನನ್ನು ಬನ್ನಿಮಂಟಪದ ಕಚೇರಿಯಲ್ಲಿ ಬಂಧಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಲೋಕಾಯುಕ್ತ ಇನ್ಸ್‌ಪೆಕ್ಟರ್‌ಗಳಾದ ರವಿಕುಮಾರ್, ಶಶಿಕುಮಾರ್ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಅಭಿನಂದನೆ...



ಕರ್ನಾಟಕ ರಾಜ್ಯ ಭೋವಿ ನಿಗಮದ ಅಧ್ಯಕ್ಷರಾಗಿ ನೇಮಕಗೊಂಡ ರಾಮಪ್ಪ ಎಂ. ಅವರನ್ನು ಕಾಡಾ ಅಧ್ಯಕ್ಷ ಮರಿಸ್ವಾಮಿ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಕರ್ನಾಟಕ ರಾಜ್ಯ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ಮಾಜಿ ನಿರ್ದೇಶಕ ಎಸ್.ಆರ್.ರವಿಕುಮಾರ್ ಅಭಿನಂದಿಸಿದರು.

ಬಲೂನ್ ವ್ಯಾಪಾರಿ ಬಾಲಕಿ ಕೊಲೆ ಪ್ರಕರಣ

ಶೀಘ್ರ ತನಿಖೆಗೆ ಎಐಎಂಎಸ್‌ಎಸ್ ಆಗ್ರಹ

ಮೈಸೂರು,ಅ.9(ಜಿಎ)–ಮೈಸೂರಿಗೆ ಬಲೂನ್ ವ್ಯಾಪಾರಕ್ಕಾಗಿ ಬಂದಿದ್ದ ಬಾಲಕಿ ಕೊಲೆ ಪ್ರಕರಣದ ತನಿಖೆಯನ್ನು ಶೀಘ್ರವಾಗಿ ನಡೆಸಬೇಕು ಎಂದು (ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ) ಎಐಎಂಎಸ್‌ಎಸ್ ಒತ್ತಾಯಿಸಿದೆ.

ಪತ್ರಿಕೆಗಳಲ್ಲಿ ಪ್ರಕಟವಾದಂತೆ, ದೊಡ್ಡಕೆರೆ ಮೈದಾನದ ಸುತ್ತಲಿನ ರಸ್ತೆಯಲ್ಲಿ ದಸರಾ ವ್ಯಾಪಾರಕ್ಕಾಗಿ ಬಂದಿದ್ದ ವ್ಯಾಪಾರಿಗಳು ನೆಲೆಸಿದ್ದರು. ಜೀವನದಲ್ಲಿ ಯಾವುದೇ ಭದ್ರತೆ ಇಲ್ಲದಿರುವ ವಲಸೆ ಕಾರ್ಮಿಕರು, ಜೀವನಕೋಸ್ಕರ ಊರೂರು ಅಲೆಯುತ್ತಾರೆ. ಜೀವನೋಪಾಯಕ್ಕೆ ನಾಡಹಬ್ಬ ದಸರಾ ವೇಳೆ ಬಲೂನು ಮಾರಿ ಬದುಕಲು ಬಂದಿದ್ದ ಕುಟುಂಬದ ಹೆಣ್ಣು ಮಗುವನ್ನು ಬರ್ಬರವಾಗಿ ಹತ್ಯೆ ಮಾಡಿರುವುದು ಘೋರವಾದುದು ಎಂದಿದೆ.

ಸಾಂಸ್ಕೃತಿಕ ನಗರಿ, ವಿಶ್ರಾಂತನಗರ ಎಂದು ಹೆಸರುವಾಸಿಯಾಗಿರುವ ನಮ್ಮ ಮೈಸೂರು ನಗರದಲ್ಲಿ ಕೊಲೆ, ದರೋಡೆ, ಅತ್ಯಾಚಾರಗಳು, ಅಸಹಜ ಸಾವುಗಳ ಘಟನೆಗಳು ದಿನನಿತ್ಯ ವರದಿಯಾಗುತ್ತಿರುವುದು ನಿಜಕ್ಕೂ ಆತಂಕಕಾರಿ ವಿಷಯ. ಅಪರಾಧಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಮಗಳನ್ನು ಕಳೆದುಕೊಂಡ ಪೋಷಕರಿಗೆ ಪರಿಹಾರ ನೀಡಬೇಕು ಎಂದು ಎಐಎಂಎಸ್‌ಎಸ್ ಜಿಲ್ಲಾ ಕಾರ್ಯದರ್ಶಿ ಆಸಿಯಾ ಬೇಗಂ ಪ್ರಕಟಣೆ ಮೂಲಕ ಆಗ್ರಹಿಸಿದ್ದಾರೆ.

ಸಿಜೆಐ ಮೇಲೆ ಶೂ ತೂರಲೆತ್ನ ಖಂಡಿಸಿ

ಯುವ ಕಾಂಗ್ರೆಸ್ ಪ್ರತಿಭಟನೆ



ಸಿಜೆಐ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯಲೆತ್ನಿಸಿರುವುದನ್ನು ಖಂಡಿಸಿ ಯುವ ಕಾಂಗ್ರೆಸ್ ಜಿಲ್ಲಾ ಘಟಕದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಅ.9(ಎಂಟಿವೈ)– ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಮೇಲೆ ಶೂ ಎಸೆಯಲೆತ್ನಿಸಿದ್ದನ್ನು ಖಂಡಿಸಿ ಯುವ ಕಾಂಗ್ರೆಸ್ ಜಿಲ್ಲಾ ಘಟಕದ ಕಾರ್ಯಕರ್ತರು ಮೈಸೂರಲ್ಲಿ ಪ್ರತಿಭಟನೆ ನಡೆಸಿದರು.

ಮೈಸೂರಿನ ಡಾ.ಬಿ.ಆರ್.ಅಂಬೇಡ್ಕರ್(ಎಫ್‌ಟಿಎಸ್) ವೃತ್ತದ ಬಳಿ ಗುರುವಾರ ಬೆಳಗ್ಗೆ ಪ್ರತಿಭಟನೆ ನಡೆಸಿ, ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲೆತ್ನಿಸಿದ ವಕೀಲ ರಾಕೇಶ್ ಕಿಶೋರ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ದೇಶದ ಸಂವಿಧಾನದ ರಕ್ಷಣೆ ಮಾಡುವ ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯಲೆತ್ನಿಸಿರುವುದು ಖಂಡನೀಯ. ಈ ಕೃತ್ಯವನ್ನು ಎಸಗಿರುವ ವಕೀಲ ಡೋಂಗಿ ಸನಾತನಿ, ಮನುವಾದಿ ರಾಕೇಶ್ ಕಿಶೋರ್ ಅವರನ್ನು ಗಡಿಪಾರು ಮಾಡುವ ಮೂಲಕ ಕಾನೂನು ಕ್ರಮಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ದೀಪಕ್ ಶಿವಣ್ಣ, ಯುವ ಕಾಂಗ್ರೆಸ್ ಕಾರ್ಯದರ್ಶಿ ಅಬ್ರರ್ ಮೊಹಮ್ಮದ್, ಎನ್‌ಎಸ್‌ಯುಐ ರಾಜ್ಯ ಉಪಾಧ್ಯಕ್ಷ ರಫೀಕ್ ಅಲಿ, ಮೈಸೂರು ನಗರ ಯುವ ಕಾಂಗ್ರೆಸ್ ಉಪಾಧ್ಯಕ್ಷ ನವೀನ್ ಕೆಂಪಿ, ನಗರ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಪ್ರತಾಪ್.ಜೆ, ಇಮಾನ್ವಲ್ ಶರತ್, ನರಸಿಂಹರಾಜ ಯುವ ಕಾಂಗ್ರೆಸ್ ಉಪಾಧ್ಯಕ್ಷ ರಿಜ್ವಾನ್ ಪಾಷಾ, ಚಾಮರಾಜ ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್, ಪ್ರಧಾನ ಕಾರ್ಯದರ್ಶಿಗಳಾದ ಚಂದ್ರು ನರಸಿಂಹಮೂರ್ತಿ, ವಿಷ್ಣು ಪ್ರಿಯನ್, ಮಂಜೇಶ್, ವಿರಾಟ್‌ಗೌಡ, ಕೃಷ್ಣರಾಜ ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ರಾಕೇಶ್, ಪ್ರಧಾನ ಕಾರ್ಯದರ್ಶಿ ಮಲ್ಲೇಶ್ ಮಲ್ಲ, ರಾಜೇಂದ್ರ ಪ್ರಸಾದ್, ಇಂದಿರಾ ಗಾಂಧಿ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ವಿನಯ್ ಗೌಡ, ರಾಘವೇಂದ್ರ, ಅಲಿಂ ಪಾಶ, ರಾಕೇಶ್, ಎಂ.ವಿ.ವಿಕ್ರು, ಹೇಮಂತ್, ರವೀಶ್ ಗೌಡ, ಸುಹಾಸ್‌ಗೌಡ, ರವಿ, ಮಂಜು ಸೇರಿದಂತೆ ಹಲವರು ಭಾಗವಹಿಸಿದ್ದರು.

ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಮತ್ತೊಂದು ದರೋಡೆ

ತಮಿಳುನಾಡು ಎಸ್‌ಐ ಕುಟುಂಬ ಸುಲಿಗೆ ಮಾಡಿದ ದುಷ್ಕರ್ಮಿಗಳು

ಚನ್ನಪಟ್ಟಣ, ಅ.9– ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ 275 ರಲ್ಲಿ ತಮಿಳುನಾಡಿನ ನೀಲಗಿರಿಯ ಸಬ್ ಇನ್ಸ್‌ಪೆಕ್ಟರ್ ಅವರನ್ನು ಬೈಕ್‌ನಲ್ಲಿ ಬಂದ ಮೂವರು ಶಸ್ತ್ರಸಜ್ಜಿತ ವ್ಯಕ್ತಿಗಳು ದರೋಡೆ ಮಾಡಿದ್ದಾರೆ.

ನೀಲಗಿರಿಯ ಪುದುಕುಳಿ ಗ್ರಾಮದ ಪಿ.ಜೆ. ಶಾಜಿ(54) ನೀಲಗಿರಿಯ ಚೇರಂಬಾಡಿ ಪೊಲೀಸ್ ಠಾಣೆಯಲ್ಲಿ ವಿಶೇಷ ಸಬ್ ಇನ್ಸ್‌ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ. ಹಲಸೂರಿನಲ್ಲಿ ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಮುಗಿಸಿದ್ದ ತನ್ನ ಹಿರಿಯ ಮಗನನ್ನು ಕರೆದುಕೊಂಡು ಹೋಗಲು ಶಾಜಿ ತನ್ನ ಪತ್ನಿ ಮತ್ತು ಇಬ್ಬರು ಮಕ್ಕಳೊಂದಿಗೆ ಕಾರಿನಲ್ಲಿ ಬೆಂಗಳೂರಿಗೆ ತೆರಳುತ್ತಿದ್ದರು.

ನಿದ್ದೆ ಬಂದ ಕಾರಣ 1.45ರ ಸುಮಾರಿಗೆ ಚನ್ನಪಟ್ಟಣ ಬಳಿಯ ಲಂಬಾಣಿ ತಾಂಡ್ಯ ಬಳಿಯ ಸರ್ವಿಸ್ ರಸ್ತೆಯಲ್ಲಿ ಕಾರನ್ನು ನಿಲ್ಲಿಸಿ, ಮಲಗಿದ್ದಾರೆ. ಬೆಳಗಿನ ಜಾವ 2 ಗಂಟೆ ಸುಮಾರಿಗೆ ಆರೋಪಿಗಳು ಶಾಜಿ ಅವರ ಕುಟುಂಬ ಸದಸ್ಯರನ್ನು ಚಾಕು ತೋರಿಸಿ ಬೆದರಿಸಿ ಚಿನ್ನದ ಸರ ಮತ್ತು ಮೊಬೈಲ್ ಫೋನ್‌ಗಳನ್ನು ಸೇರಿದಂತೆ ಸುಮಾರು 1.35 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ದೋಚಿದ್ದಾರೆ. ಚನ್ನಪಟ್ಟಣ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ದುಷ್ಕರ್ಮಿಗಳು ಹೋದ ನಂತರ ಶಾಜಿ ಗಸ್ತು ತಿರುಗುತ್ತಿದ್ದ ಪೊಲೀಸರನ್ನು ಕಂಡು ಅವರ ಸಹಾಯ ಕೋರಿದರು. ಆರೋಪಿಗಳಿಗಾಗಿ ಹುಡುಕಾಟ ನಡೆಯುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ಸಂಬಂಧ ದರೋಡೆ ಪ್ರಕರಣ (ಬಿಎನ್‌ಎಸ್ 309(4)) ದಾಖಲಾಗಿದೆ.

ಕೇವಲ ಒಂದೇ ಒಂದು ಗಂಟೆಯ ಮಾಯದಂತಾ ಮಳೆಗೆ ಸುಭಾಷ್‌ನಗರ ತತ್ತರ

- ದೊಡ್ಡ ಮೋರಿ ಉಕ್ಕಿ ರಸ್ತೆಯಲ್ಲಿ ಹೊಳೆಯಂತೆ ಹರಿದ ಮಳೆ ನೀರು
- ಹಲವು ಮನೆಗಳಿಗೆ ನುಗ್ಗಿ ಅವಾಂತರ; ನಿವಾಸಿಗಳಿಂದ ಪಾಲಿಕೆ ಸಿಬ್ಬಂದಿ, ಗುತ್ತಿಗೆದಾರನಿಗೆ ಹಿಡಿಶಾಪ



ಸುಭಾಷ್‌ನಗರದ 3ನೇ ಅಡ್ಡರಸ್ತೆ ಜಲಾವೃತಗೊಂಡಿರುವುದು.



ದೊಡ್ಡ ಮೋರಿಯಲ್ಲಿ ಸಂಗ್ರಹವಾಗಿರುವ ಕಸದ ರಾಶಿ.



ಮನೆಯೊಳಗೆ ನುಗ್ಗಿದ ನೀರನ್ನು ಹೊರ ಹಾಕುತ್ತಿರುವ ನಿವಾಸಿಗಳು.

ಮೈಸೂರು, ಅ.9(ಎಂಕೆ)– ಕೇವಲ ಒಂದೇ ಒಂದು ಗಂಟೆ ಸುರಿದ ಧಾರಾಕಾರ ಮಳೆಗೆ ಮೈಸೂರಿನ ಸುಭಾಷ್‌ನಗರದಲ್ಲಿ ಅಲ್ಲೋಲ–ಕಲ್ಲೋಲವೇ ಸೃಷ್ಟಿಯಾಯಿತು...!

ಗುರುವಾರ ಬೆಳಗ್ಗೆ 8 ಗಂಟೆ ಸುಮಾರಿಗೆ ಸುರಿದ ಧಾರಾಕಾರ ಮಳೆಗೆ ಸುಭಾಷ್‌ನಗರದ ಮೂರನೇ ಅಡ್ಡ ರಸ್ತೆಯಲ್ಲಿರುವ ದೊಡ್ಡ ಮೋರಿ ತುಂಬಿ ಹರಿದಿದ್ದು, 10ಕ್ಕೂ ಹೆಚ್ಚು ಮನೆಗಳಿಗೆ ಕೊಳಚೆ ನೀರು ನುಗ್ಗಿ ಅವಾಂತರ ಸೃಷ್ಟಿಸಿದೆ.

ಇಲ್ಲಿನ ಕ್ವೆಸ್ಟ್ ಅಕಾಡೆಮಿ ಕಟ್ಟಡಕ್ಕೆ ಹೊಂದಿಕೊಂಡಂತಿರುವ ದೊಡ್ಡ ಮೋರಿ (4ನೇ ಅಡ್ಡರಸ್ತೆ ಸಂಪರ್ಕಕ್ಕಾಗಿ) ಮೇಲೆ ಆರ್‌ಸಿಸಿ ಕಾಂಕ್ರೀಟ್ ನಿರ್ಮಾಣಕ್ಕೆ ಅಳವಡಿಸಿದ್ದ ತಾತ್ಕಾಲಿಕ ಸೆಂಟ್ರಿಂಗ್ ನಡುವೆ ಸಂಗ್ರಹವಾಗಿದ್ದ ಭಾರೀ ಪ್ರಮಾಣದ ಕಸದಿಂದಾಗಿ ದೊಡ್ಡ ಮೋರಿಯಲ್ಲಿ ಹರಿಯಬೇಕಿದ್ದ ನೀರು, ರಸ್ತೆ ಮೇಲೆ ಹರಿದು ಸ್ಥಳಿಯ ನಿವಾಸಿಗಳು ಹೆಣಗಾಡುವಂತಾಯಿತು.

ಏಕಾಏಕಿ ಎಲ್ಲೆಂದರಲ್ಲಿ ನೀರು ನುಗ್ಗಿದ್ದರಿಂದ ಗಾಬರಿಗೊಂಡ ನಿವಾಸಿಗಳು, ಮನೆಯೊಳಗೆ ನುಗ್ಗಿದ ಕೊಳಚೆ ನೀರನ್ನು ಹೊರ ಹಾಕಲು ಹರಸಾಹಸ ಪಡುವಂತಾಯಿತು. ರಸ್ತೆಬದಿಯಲ್ಲಿ ನಿಲ್ಲಿಸಿದ್ದ ಕಾರುಗಳು, ಮನೆಯೊಳಗಿನ ಸಂಪು(ಟ್ಯಾಂಕ್)ಗಳಿಗೂ ಕೊಳಚೆ ನೀರು ತುಂಬಿದ್ದರಿಂದ ಪರದಾಡುವಂತಾಯಿತು.

ಇಡೀ ದಿನ ಕಾರ್ಯಾಚರಣೆ: ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ಪಾಲಿಕೆ ಅಭಯ ತಂಡ ಹಾಗೂ ಗುತ್ತಿಗೆ ಕಾರ್ಮಿಕರಿಂದ ಇಡೀ ದಿನ ಕಾರ್ಯಾಚರಣೆ ನಡೆಸಿ, ಐದಕ್ಕೂ ಹೆಚ್ಚು ಲಾರಿ ಲೋಡ್ ಕಸ ವಿಲೇವಾರಿ ಮಾಡಲಾಯಿತು. ಸೆಂಟ್ರಿಂಗ್ ನಡುವೆ ಸಂಗ್ರಹವಾಗಿದ್ದ ಕಸವನ್ನು ಎರಡು ಜೆಸಿಬಿ, ಒಂದು ಟ್ರ್ಯಾಕ್ಟರ್ ಮೂಲಕ ಹೊರ ತೆಗೆಯಲಾಯಿತು.

ಕಂಟ್ರ್ಯಾಕ್ಟರ್ ಎಡವಟ್ಟು, ಪರಿಹಾರಕ್ಕೆ ಆಗ್ರಹ: ದೊಡ್ಡ ಮೋರಿ ದಾಟಲು ಸುಮಾರು 5 ಕೋಟಿ ರೂ. ವೆಚ್ಚದಲ್ಲಿ ಆರ್‌ಸಿಸಿ ಕಾಂಕ್ರೀಟ್ ನಿರ್ಮಿಸಲಾಗುತ್ತಿದ್ದು, ಮೋರಿಯೊಳಗೆ ಅಳವಡಿಸಿದ್ದ ಸೆಂಟ್ರಿಂಗ್ ನಡುವೆ ಭಾರೀ ಪ್ರಮಾಣದ ಕಸ ಸಂಗ್ರಹಣೆಯಾಗಿದ್ದರಿಂದಲೇ ಇಷ್ಟೆಲ್ಲಾ ಅವಾಂತರಕ್ಕೆ ಕಾರಣವಾಗಿದೆ. ಇದಕ್ಕೆಲ್ಲಾ ಕಂಟ್ರ್ಯಾಕ್ಟರ್ ಬೇಜವಾಬ್ದಾರಿ ಕಾರಣವಾಗಿದ್ದು, ನಷ್ಟ ಪರಿಹಾರ ನೀಡಬೇಕು ಎಂದು ಸ್ಥಳೀಯ ನಿವಾಸಿಗಳು ಆಗ್ರಹಿಸಿದರು.

ಕಸದಿಂದ ಮೋರಿ ಕಟ್ಟಿಕೊಂಡಿದ್ದರಿಂದಲೇ ತೊಂದರೆ ಅನುಭವಿಸುವಂತಾಯಿತು ಎಂದು ಪಾಲಿಕೆ ಮಾಜಿ ಸದಸ್ಯ ಆರೀಫ್ ಹುಸೇನ್ ಹಾಗೂ ಪಾಲಿಕೆ ಸಿಬ್ಬಂದಿ ವಿರುದ್ಧ ಹರಿಹಾಯ್ದರು. ಕೇವಲ ಒಂದೇ ಒಂದು ಗಂಟೆ ಸುರಿದ ಮಳೆಯಿಂದಾಗಿ ಇಡೀ ರಸ್ತೆಯಲ್ಲಿನ ಮನೆಗಳಿಗೆಲ್ಲಾ ನೀರು ನುಗ್ಗಿದೆ ಎಂದು ಕಿಡಿಕಾರಿದರು.

ಇಡೀ ಮೋರಿ ಮುಚ್ಚುವ ಹುನ್ನಾರ ನಡೆದಿತ್ತು: ಕೇವಲ ಒಂದೇ ಒಂದು ಗಂಟೆ ಸುರಿದ ಮಳೆಗೆ ಇಡೀ ರಸ್ತೆಯೇ ಜಲಾವೃತವಾಗಿದೆ. ಅಚ್ಚರಿ ಸಂಗತಿ ಎಂದರೆ ಈ ಮೋರಿ ಕಟ್ಟಿಕೊಂಡು ಇಂದು ಅವಾಂತರ ಸೃಷ್ಟಿಯಾಗಿದೆ. ಆದರೆ, ಈ ಹಿಂದೆ ಇಡೀ ದೊಡ್ಡ ಮೋರಿಯನ್ನೇ ಮುಚ್ಚಲು ಕೆಲವರು ಮುಂದಾಗಿದ್ದರು. ಸ್ಥಳೀಯ ನಿವಾಸಿಗಳೆಲ್ಲಾ ಪ್ರತಿಭಟಿಸಿದ್ದರಿಂದ ಪೂರ್ಣ ಪ್ರಮಾಣದಲ್ಲಿ ದೊಡ್ಡ ಮೋರಿ ಮುಚ್ಚುವ ಕಾಮಗಾರಿ ಕೈ ಬಿಟ್ಟು, ಅಲ್ಲಲ್ಲಿ ಅವೈಜ್ಞಾನಿಕವಾಗಿ ಮೋರಿ ದಾಟಲು ಆರ್‌ಸಿಸಿ ಕಾಂಕ್ರೀಟ್ ಸೇತುವೆ ನಿರ್ಮಿಸಲಾಗಿದೆ. ಈಗಾಗಲೇ ಹಲವು ದಿನಗಳ ಹಿಂದೆಯೇ ಕಾಂಕ್ರೀಟ್ ಹಾಕಿದ್ದರೂ ಸೆಂಟ್ರಿಂಗ್ ತೆರವು ಮಾಡಿರಲಿಲ್ಲ. ಇದರಿಂದಾಗಿ ಮೋರಿಯಲ್ಲಿ ಬರುವ ಕಸವೆಲ್ಲಾ ಸಂಗ್ರಹವಾಗಿ ನಾವೆಲ್ಲಾ ಸಂಕಷ್ಟ ಅನುಭವಿಸುವಂತಾಯಿತು ಎಂದು ಮೈಸೂರು ಗ್ರಾಹಕರ ಪರಿಷತ್ (ಎಂಜಿಪಿ) ಸಂಚಾಲಕ ಭಾನು ಪ್ರಶಾಂತ್ 'ಮೈಸೂರು ಮಿತ್ರ'ನಲ್ಲಿ ದೂರಿದರು.

ಮೈಸೂರಿನ ವಿವಿಧೆಡೆಯೂ ಮಳೆ ಅವಾಂತರ...!

ಸುಭಾಷ್ ನಗರದ 3ನೇ ಕ್ರಾಸ್‌ನಲ್ಲಾದ ಮಳೆ ಅವಾಂತರದ ಜೊತೆಗೆ ಕ್ಯಾತಮಾರನಹಳ್ಳಿ, ಸಾತಗಳ್ಳಿ, ಜೆ.ಪಿ.ನಗರ, ನಾಚನಹಳ್ಳಿ ಪಾಳ್ಯದ ನವೋದಯ ಬಡಾವಣೆ, ಉದಯಗಿರಿಯ ಹಲವೆಡೆ ಯುಜಿಡಿ ಮ್ಯಾನ್‌ಹೋಲ್‌ಗಳು ಉಕ್ಕಿ ಹರಿದು ಹಲವು ಮನೆಗಳಿಗೆ ನೀರು ನುಗ್ಗಿದೆ. ಮಾಹಿತಿ ತಿಳಿಯುತ್ತಿದ್ದಂತೆ ಕಾರ್ಯಾಚರಣೆ ನಡೆಸಿದ ಪಾಲಿಕೆ ಸಿಬ್ಬಂದಿ ಮಧ್ಯಾಹ್ನದ ವೇಳೆ ಬಹುತೇಕ ಕಡೆಗಳಲ್ಲಿ ಸಮಸ್ಯೆ ಬಗೆಹರಿಸಿದರಾದರೂ ಸುಭಾಷ್ ನಗರದ 3ನೇ ಕ್ರಾಸ್ ದೊಡ್ಡ ಮೋರಿಯಲ್ಲಿ ಸಂಗ್ರಹವಾಗಿದ್ದ ಕಸ ವಿಲೇವಾರಿ ಮಾತ್ರ ಇಡೀ ದಿನ ನಡೆಯಿತು.


ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಗಾಗಿ ಅರ್ಜಿ ಆಹ್ವಾನ

ಮೈಸೂರು,ಅ.9–ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ.ನಿಶ್ಚಲಾನಂದನಾಥ ಸ್ವಾಮಿಜೀ ಅವರ (ಪೂರ್ವಾಶ್ರಮದಲ್ಲಿ ಡಾ.ಎಚ್.ಎಲ್.ನಾಗರಾಜ್ ಹಿರಿಯ ಕೆಎಎಸ್ ಅಧಿಕಾರಿಗಳು) ಮಾರ್ಗದರ್ಶನದಲ್ಲಿ ಜೈಸ್ ಸಂಸ್ಥೆ ಸಹಯೋಗದಲ್ಲಿ ಕೆಂಗೇರಿಯಲ್ಲಿರುವ ಶ್ರೀ ಮಠದ ಆವರಣದಲ್ಲಿ ಕೆಎಎಸ್, ಗ್ರೂಪ್–ಸಿ, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಪೊಲೀಸ್ ಕಾನ್‌ಸ್ಟೇಬಲ್ ಮತ್ತು ಇತರೆ ನೇಮಕಾತಿ ಪರೀಕ್ಷೆಗಳಿಗಾಗಿ ವಸತಿ ಸಹಿತ ಮತ್ತು ವಸತಿ ರಹಿತ ತರಬೇತಿಗೆ ಅರ್ಜಿ ಆಹ್ವಾನಿಸಿದ್ದು, ಅಭ್ಯರ್ಥಿಗಳನ್ನು ಪ್ರವೇಶ ಪರೀಕ್ಷೆಯ ಮೂಲಕ ಆಯ್ಕೆ ಮಾಡಿಕೊಳ್ಳಲಾಗುವುದು.

ಈ ತರಬೇತಿ ಕಾರ್ಯಕ್ರಮವು ಮಠದ ಆವರಣದಲ್ಲಿ ಧ್ಯಾನ ಮತ್ತು ಯೋಗ ಅಭ್ಯಾಸ, ಮಾನಸಿಕ ಸದೃಢತೆಗೆ ಆದ್ಯತೆ, ಸುಸಜ್ಜಿತ ತರಗತಿ ವ್ಯವಸ್ಥೆ, ಅನುಭವಿ ತರಬೇತುದಾರರಿಂದ ತರಬೇತಿ, ಮಾದರಿ ಪರೀಕ್ಷೆಗಳ ಆಯೋಜನೆ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ (PSI), ಪೊಲೀಸ್ ಕಾನ್‌ಸ್ಟೇಬಲ್ ಅಭ್ಯರ್ಥಿಗಳಿಗೆ ದೈಹಿಕ ತರಬೇತಿ, ಸುಸಜ್ಜಿತ ಗ್ರಂಥಾಲಯದ ವ್ಯವಸ್ಥೆ, ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಮತ್ತು ಈಗಾಗಲೇ ಯಶಸ್ಸು ಕಂಡಿರುವ ಸಾಧಕರೊಂದಿಗೆ ಸಂವಾದ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ.

ತರಬೇತಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಅಭ್ಯರ್ಥಿಯ ಶೈಕ್ಷಣಿಕ ಮತ್ತು ಆರ್ಥಿಕ ಹಿನ್ನೆಲೆಯ ಮಾಹಿತಿ, ರಾಜ್ಯ ಮಟ್ಟದ ಪ್ರವೇಶ ಪರೀಕ್ಷೆ, ಮತ್ತು ವೈಯಕ್ತಿಕ ಸಂದರ್ಶನ ನಡೆಸಿ ಕಠಿಣ ಶ್ರಮ ವಹಿಸುವ ಆಸಕ್ತಿಯುತ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗುವುದು. ಅಭ್ಯರ್ಥಿಗಳು ಈ ತರಬೇತಿಗೆ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನ ಅ.20, 2025. ಅಭ್ಯರ್ಥಿಗಳು ಆನ್‌ಲೈನ್ ನೋಂದಣಿಗಾಗಿ www.jiceias.com ಲಿಂಕ್‌ನ್ನು ಬಳಸಬಹುದು. ಮಾಹಿತಿಗೆ 7676167901/9035528526 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕೈಗಾರಿಕೆಗಳಿಗೆ ವಿದ್ಯುತ್ ದರ ಏರಿಕೆ; ಮೈಸೂರು ಕೈಗಾರಿಕೆಗಳ ಸಂಘ ಆಕ್ಷೇಪ



ಮೈಸೂರು,ಅ.9–ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ಹಾಗೂ ಇತರ ವಿದ್ಯುತ್ ಸರಬರಾಜು ಕಂಪನಿಗಳು LT 5 ಮತ್ತು HT 2A ಸಂಪರ್ಕ ಪಡೆದಿರುವ ಕೈಗಾರಿಕಾ ಉದ್ಯಮಗಳು ಬಳಸುವ ಪ್ರತೀ ಹೆಚ್‌ಪಿಗೆ ಕಡ್ಡಾಯ ಶುಲ್ಕ 15ರಿಂದ 20 ರೂ. ಹಾಗೂ ಪ್ರತೀ ಯೂನಿಟ್‌ಗೆ 10 ಪೈಸೆಯಿಂದ 70 ಪೈಸೆವರೆಗೆ ಏರಿಸಿ ಪರಿಷ್ಕರಿಸುವ ಪ್ರಸ್ತಾವನೆಗೆ ಮೈಸೂರು ಕೈಗಾರಿಕೆಗಳ ಸಂಘದ ಅಧ್ಯಕ್ಷ ಪಿ.ವಿಶ್ವನಾಥ್ ಮತ್ತು ಪ್ರಧಾನ ಕಾರ್ಯದರ್ಶಿ ಸುರೇಶ್‌ಕುಮಾರ್‌ಜೈನ್ ತಕರಾರು ಅರ್ಜಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಸಲ್ಲಿಸಿದ್ದಾರೆ. ಕಳೆದ ಮಾರ್ಚ್‌ನಲ್ಲಿ ಕೆಇಆರ್‌ಸಿ ದರ ಪರಿಷ್ಕರಿಸಿ ಆದೇಶ ಹೊರಡಿಸಿದೆ. ಆದರೆ, ಇದೀಗ ಸರ್ಕಾರ ನೀಡಬೇಕಾದ ಅಡ್ಡ ಸಹಾಯಧನದ ಪಾಲು ಕಡಿಮೆ ಆಗಿರುವುದರಿಂದ ಆ ಮೊತ್ತವನ್ನು ಕೈಗಾರಿಕೆ ಮತ್ತು ವಾಣಿಜ್ಯ ಗ್ರಾಹಕರಿಂದ ಪಡೆಯಲು ಪ್ರಸ್ತಾವನೆ ಅರ್ಜಿ ಸಲ್ಲಿಸಿರುವ ಕ್ರಮವನ್ನು ಮೈಸೂರು ಕೈಗಾರಿಕೆಗಳ ಸಂಘ ಖಂಡಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.10.2025 ಶುಕ್ರವಾರ, ಮಳೆ ನಕ್ಷತ್ರ: ಹಸ್ತ 27.09.2025 ರಿಂದ 10.10.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಲಕ್ವ, ಪ್ಯಾರಲಿಸಿಸ್‌ಗೆ ಚಿಕಿತ್ಸಾ ಶಿಬಿರ, ಮಧುಮೇಹ ರೋಗಿಗಳಿಗೆ ಚಿಕಿತ್ಸಾ ಶಿಬಿರ, ಮೂಲವ್ಯಾಧಿ/ಪೈಲ್ಸ್ ರೋಗದ ಚಿಕಿತ್ಸಾ ಶಿಬಿರ, ಸ್ಥಳ : ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ಯೂನಿವರ್ಸಿಟಿ :** ಎಮರ್ಜಿಂಗ್ ಟೆಕ್ನಾಲಜೀಸ್ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಗ್ರೀನ್ ಎನರ್ಜಿ ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ : ಜೆಎಸ್‌ಎಸ್ ಮಹಾವಿದ್ಯಾಪೀಠ ನಿರ್ದೇಶಕ ಡಾ.ಬಿ. ಸುರೇಶ್, ಮುಖ್ಯ ಅತಿಥಿಗಳು : ಪ್ರೊ. ಎಸ್.ಎಸ್. ಅಯ್ಯಂಗಾರ್, ಪ್ರೊ. ಆಶಿಷ್ ಕುಮಾರ್ ನಂದಿ, ಪ್ರೊ. ಶ್ರೀಕಾಂತ್ ಚಂದ್ರಶೇಖರನ್, ಅಧ್ಯಕ್ಷತೆ : ಜೆಎಸ್‌ಎಸ್ ವಿವಿ ಕುಲಪತಿ ಪ್ರೊ. ಎ.ಎನ್. ಸಂತೋಷ್ ಕುಮಾರ್, ಪ್ರಿನ್ಸಿಪಾಲ್ ಪ್ರೊ. ಸಿ. ನಟರಾಜು, ಕುಲಸಚಿವ ಪ್ರೊ. ಎಸ್.ಎ. ಧನರಾಜ್, ಸ್ಥಳ: ಐಎಸ್ ಸೆಮಿನಾರ್ ಹಾಲ್, ಜೆಎಸ್‌ಎಸ್ ವಿವಿ ಆವರಣ, ಬೆಳಗ್ಗೆ 9.30ಕ್ಕೆ
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಬಿಳಿ ಮುಟ್ಟು, ಮೂಗು ಕಟ್ಟುವುದು, ಮೂಗು ಸುರಿಯುವುದು, ಮೂಗಿನಿಂದ ರಕ್ತ ಬರುವುದು, ಮೂಗಿನಲ್ಲಿ ದುರ್ಮಾಂಸ, ಸೀನುವಿಕೆ, ಕೆಂಪು ಕಣ್ಣುಗಳು, ಮೂಗು, ಗಂಟಲು, ಕಣ್ಣುಗಳು ಮತ್ತು ಬಾಯಿಯಲ್ಲಿ ತುರಿಕೆ, ಮಹಿಳೆಯರ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭ ಸಂಸ್ಕಾರ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್. ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಫಾರ್ಮಸಿ ಕಾಲೇಜು :** ಟ್ರಾನ್ಸ್‌ಡರ್ಮಲ್ ಡ್ರಗ್ ಡೆಲಿವರಿ ಸಿಸ್ಟಮ್ಸ್, ಅಡ್ವಾನ್ಸಿಂಗ್ ಸ್ಕಿನ್ ಮೀಡಿಯೇಟೆಡ್ ಡ್ರಗ್ ಡೆಲಿವರಿ ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಅಕಾಡೆಮಿ ಡೀನ್ ಡಾ. ವಿಶಾಲ್‌ಕುಮಾರ್ ಗುಪ್ತಾ, ಡಾ. ಎನ್.ಎಸ್. ಚಂದ್ರಶೇಖರ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಟಿ.ಎಂ. ಪ್ರಮೋದ್ ಕುಮಾರ್, ಸ್ಥಳ: ಗೋಲ್ಡನ್ ಜ್ಯುಬಿಲಿ ಡಿಜಿಟಲ್ ಥಿಯೇಟರ್, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಬೆಳಗ್ಗೆ 10ಕ್ಕೆ.
- **ನೇತಾಜಿ ಎಜುಕೇಷನ್ ಫೌಂಡೇಷನ್ :** ಗ್ರೂಪ್ ಡಿ ಹುದ್ದೆಗಳ ನೇಮಕಾತಿ ಪರೀಕ್ಷೆಗಳಿಗೆ ತರಬೇತಿ ಶಿಬಿರ, ಸ್ಥಳ: ನಂ. 400, ಆತ್ರೇಯ ಕೃಷ್ಣವಿಲಾಸ ರಸ್ತೆ, ಅವಿಲಾ ಕಾನ್ವೆಂಟ್ ಎದುರು, ಬೆಳಗ್ಗೆ 10 ರಿಂದ.
- **ಭವಾನಿ ಅಸೋಸಿಯೇಟ್ಸ್ :** ಚಾರ್ಟರ್ಡ್ ಅಕೌಂಟೆಂಟ್ ವೇಣುಗೋಪಾಲ್ ಗೆಲ್ಲ ಅವರಿಂದ ಜಿಎಸ್‌ಟಿಯಲ್ಲಿ ಇತ್ತೀಚಿನ ತಿದ್ದುಪಡಿ ಕುರಿತು ಉಪನ್ಯಾಸ, ಸ್ಥಳ : ರೋಟರಿ ಚಿಲ್ಡ್ರನ್ಸ್ ಲೈಬ್ರರಿ ಹಾಲ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.
- **ಮನೋವಿಜ್ಞಾನ ಅಧ್ಯಯನ ವಿಭಾಗ :** ವಿಶ್ವ ಮಾನಸಿಕ ಆರೋಗ್ಯ ದಿನ ಆಚರಣೆ, ಸ್ಥಳ: ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.
- **ಸರ್ಕಾರಿ ಪ್ರಥಮ ದರ್ಜೆ ಕಾಲೇಜು:** ಸಾಂಸ್ಕೃತಿಕ ಮತ್ತು ವಿವಿಧ ವೇದಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಮುಖ್ಯ ಅತಿಥಿಗಳು: ವಿಶ್ರಾಂತ ಪ್ರಾಧ್ಯಾಪಕ ಮೈಸೂರು ಕೃಷ್ಣಮೂರ್ತಿ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಎನ್.ಮಾಯಾದೇವಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ : 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ : ನಿತೀಶ್ ಡಂಬಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯ ಸಂದರ್ಭದಲ್ಲಿ ಮಾನಸಿಕ ಆರೋಗ್ಯದ ಮಹತ್ವ ಕುರಿತು ಡಾ. ಭಾಗ್ಯವತಿ ಎಚ್.ಡಿ. ನಂತರ ಬೆನ್ನುನೋವಿಗೆ ಕಾರಣಗಳು ಮತ್ತು ಆಯುರ್ವೇದ ಪರಿಹಾರ ಕುರಿತು ಆಯುರ್ವೇದ ತಜ್ಞರಾದ ಡಾ. ಶ್ರೀಶ ಕೃಷ್ಣ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ –ಬೇದ್ರೆ ಮಂಜುನಾಥ, 9.30 ಗಾಂಧೀ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ– ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ : ಹೆಚ್.ಎಲ್.ಶಿವಶಂಕರಸ್ವಾಮಿ

ಮಧ್ಯಾಹ್ನ : 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡ ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ –ಮೈಸೂರಿನ ಸ್ವರರಾಗಲಯ ಭಜನಾ ಮಂಡಳಿ ಸದಸ್ಯರಿಂದ ದಸರಾ ಕುರಿತು ಕಾರ್ಯಕ್ರಮ ವೈವಿಧ್ಯ, 4.30 ವೃತ್ತಿ ಮಾರ್ಗದರ್ಶನ–ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಅಧ್ಯಯನ, ಸಂಶೋಧನೆ ಮತ್ತು ವೃತ್ತಿಪರ ಅವಕಾಶಗಳು ಕುರಿತು ಕುಲಪತಿಗಳಾದ ಡಾ. ನಾಗೇಶ್ .ವಿ ಬೆಟ್ಟಕೋಟೆ ಅವರೊಂದಿಗಿನ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ–ಹವಾಮಾನ ಮಿತ್ರ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, ಸಂಶೋಧನಾ ಸಾರ, ಕೃಷಿಕ್ಷೇತ್ರದ ಹೊಸ ಅವಿಷ್ಕಾರ, ಪ್ರಸ್ತುತಿ : ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಕನ್ನಡ ಭಾರತಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಹಳ್ಳಿಹಾಡು, 10.30 ಸವಿನೆನಪು

- **ದಾರಿ ಫೌಂಡೇಷನ್, ಮೈಸೂರು, ಯುವರಾಜ ಕಾಲೇಜು :** ಯುವಜನತೆಗೆ ಮಾರ್ಗದರ್ಶನದ ಜೊತೆಗೆ ಜೀವನದ ಅರಿವು ಕಾರ್ಯಕ್ರಮ, ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಜವಾಬ್ದಾರಿ ಯುವಶಕ್ತಿಯ ಕೈಯಲ್ಲಿ ಮುಕ್ತ–ಸಂವಾದ, ಉದ್ಘಾಟನೆ : ಹಿರಿಯ ಕಲಾವಿದ ಡಾ. ಮುಖ್ಯಮಂತ್ರಿ ಚಂದ್ರು, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಕೀಲ ಎಂ.ಎನ್. ಸುಮನ, ಅಧ್ಯಕ್ಷತೆ : ಯುವರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಸ್. ಮಹದೇವಮೂರ್ತಿ, ಅತಿಥಿಗಳು : ಸಿಂಡಿಕೇಟ್ ಸದಸ್ಯ ಶಂಕರ್ ಎಂ. ಹುಯಿಲಾಳು, ಕಾಲೇಜು ಆಡಳಿತಾಧಿಕಾರಿ ಪ್ರೊ. ಕೆ. ಅಜಯ್‌ಕುಮಾರ್, ಜ್ಞಾನವಾಹಿನಿ ಸಮಿತಿ ಸಂಚಾಲಕ ಪ್ರೊ. ಸಿ.ಡಿ. ಪರಶುರಾಮ, ದಾರಿ ಫೌಂಡೇಷನ್ ಅಧ್ಯಕ್ಷ ಎಲ್. ರಂಗಯ್ಯ, ತಗಡೂರು ವೀರೇಶ್ ಕುಮಾರ್ ಮಹಾಮನೆ, ವಿಶ್ವನಾಥ್ ಕುಲಕರ್ಣಿ, ಸ್ಥಳ: ಅಮೃತ ಮಹೋತ್ಸವ ಸಭಾಂಗಣ, ಯುವರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.
- **ವ್ಯವಸ್ಥಾಪಕರು :** ನಿತ್ಯ ಪ್ರಥಮ ಸುದ್ದಿ ಬೆಳಗಿನ ದಿನಪತ್ರಿಕೆ ಬಿಡುಗಡೆ ಸಮಾರಂಭ, ಉಪಸ್ಥಿತರು : ಶಾಸಕ ಟಿ.ಎಸ್. ಶ್ರೀವತ್ಸ, ಉರುಲಿಂಗಿಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ವಾರ್ತಾ ಇಲಾಖೆ ಉಪನಿರ್ದೇಶಕ ಹರೀಶ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಮಾಜಿ ಮೇಯರ್ ಪುರುಷೋತ್ತಮ್, ಅಹಿಂದ ಜವರಪ್ಪ, ಸಿ. ಹರಕುಮಾರ್, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12ಕ್ಕೆ.
- **ಸಾಧನಾ ಮಂದಿರ :** ಸರಸ್ವತಿ ಪೂಜಾ, ಸಂಜೆ 4.45 ರಿಂದ ಯಡತೊರೆ ಶ್ರೀ ಯೋಗಾನಂದೇಶ್ವರ ಮಠ; ರಾತ್ರಿ 6 ರಿಂದ ಶ್ರೀ ಕೃಷ್ಣಮಂದಿರ, ಗೋಕುಲಂ 3ನೇ ಹಂತ; ರಾತ್ರಿ 7 ರಿಂದ ಸಮುದಾಯ ಭವನ, ಗುರುದ್ವಾರ ಸಮೀಪ, ಬೃಂದಾವನ ಬಡಾವಣೆ.
- **ಶ್ರೀ ಬನ್ನಿಮಹಾಕಾಳೇಶ್ವರಿ ಮತ್ತು ಆಯರಹಳ್ಳಿ ಮಾಕಮ್ಮನವರ ದೇವಸ್ಥಾನ ಟ್ರಸ್ಟ್ :** ಶ್ರೀ ಬನ್ನಿ ಮಹಾಕಾಳೇಶ್ವರಿ ಶ್ರೀ ಆಯರಹಳ್ಳಿ ಮಾಕಮ್ಮ ಮತ್ತು ಶ್ರೀ ಮಾಲಮ್ಮನವರ ಜಾತ್ರಾ ಮಹೋತ್ಸವ, ರಾತ್ರಿ 7ಕ್ಕೆ ಘಟೆ ಪೂಜೆ, ಸ್ಥಳ: ದೇವಸ್ಥಾನ, ಕುರುಬಾರಹಳ್ಳಿ, ಸಿದ್ಧಾರ್ಥನಗರ.
- **ಗಾನಭಾರತೀ :** ದಿವಂಗತ ಸವಿತಾ ಸಂಸ್ಮರಣಾ ಕಾರ್ಯಕ್ರಮ, ವಿದ್ವಾನ್ ಎನ್.ಆರ್. ಪ್ರಶಾಂತ್ ಅವರಿಂದ ಗಾಯನ, ವಿದ್ವಾನ್ ಕೇಶವ್ ಮೋಹನ್‌ಕುಮಾರ್–ಪಿಟೀಲು, ವಿದ್ವಾನ್ ರಾಧೇಶ್–ಮೃದಂಗ, ವಿದ್ವಾನ್ ಶರತ್ ಕೌಶಿಕ್ –ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 6ಕ್ಕೆ

ದೈನಂದಿನ ಆಕರ್ಷಣೆಗಳು

ಮ. 1, 4 ಮತ್ತು ಸಂಜೆ 7 : ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿ ಕೆರೆ ಸಮೀಪ (3 ಪ್ರದರ್ಶನ)

ಸಂಜೆ 6,7,8 ಮತ್ತು ರಾ.9 : ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ, ದಿನ 4 ಟ್ರಿಪ್)

ಬೆ. 10 ರಿಂದ ರಾ.10 ರವರೆಗೆ: ದಸರಾ ವಸ್ತುಪ್ರದರ್ಶನ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 10 ಶುಕ್ರವಾರ 2025

ಸಂಪುಟ: 46 | ಸಂಚಿಕೆ: 173 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಕಾಳಸಂತೆಯಲ್ಲಿ ಪಡಿತರ ಅಕ್ಕಿ ಮಾರಾಟ ದಂಧೆಗೆ ಕಡಿವಾಣ



ಅನ್ನಭಾಗ್ಯದ ಐದು ಕೆಜಿ ಅಕ್ಕಿ ಕಡಿತ

■ ಕಡಿತಗೊಳಿಸಿದ ಅಕ್ಕಿಗೆ 2 ಕೆಜಿ ತೊಗರಿಬೇಳೆ, ತಲಾ 1 ಕೆಜಿ ಸಕ್ಕರೆ, ಉಪ್ಪು, 1 ಲೀಟರ್ ಅಡುಗೆ ಎಣ್ಣೆ ಒಳಗೊಂಡ 'ಇಂದಿರಾ ಆಹಾರ ಕಿಟ್' ಭಾಗ್ಯ ■ ಬಡವರಲ್ಲಿ ಪೌಷ್ಟಿಕಾಂಶ ಹೆಚ್ಚಿಸುವ ಸಲುವಾಗಿ ಸಂಪುಟ ಸಭೆ ಮಹತ್ವದ ನಿರ್ಧಾರ

ಬೆಂಗಳೂರು, ಅ.9(ಕೆಎಂಶಿ)– ಅನ್ನಭಾಗ್ಯ ಯೋಜನೆಯಡಿ ಪ್ರತಿ ಯೂನಿಟ್‌ಗೆ ನೀಡಲಾಗುವ ಮಾಸಿಕ 10 ಕೆ.ಜಿ. ಅಕ್ಕಿಯಲ್ಲಿ 5 ಕೆ.ಜಿ. ಕಡಿತ ಮಾಡಲು ಇಂದಿಲ್ಲಿ ಸಂಪುಟ ಸಭೆ ನಿರ್ಧರಿಸಿದೆ.

ಕಾಳಸಂತೆಯಲ್ಲಿ ಪಡಿತರ ಅಕ್ಕಿ ಮಾರಾಟ ತಪ್ಪಿಸುವ ಉದ್ದೇಶದಿಂದ ಇನ್ನು ಮುಂದೆ ಬಿಪಿಎಲ್ ಪಡಿತರದಾರರಿಗೆ ಕಡಿತ ಗೊಂಡ 5 ಕೆ.ಜಿ. ಅಕ್ಕಿ ಬದಲಿಗೆ ಪೌಷ್ಠಿಕ ಆಹಾರ ಪದಾರ್ಥ ನೀಡಲು ಸಭೆ ತೀರ್ಮಾನಿಸಿದೆ.


ಹೆಚ್.ಕೆ.ಪಾಟೀಲ್

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ. ಪಾಟೀಲ್, ಕಡಿತಗೊಳಿಸಲಾದ 5 ಕೆ.ಜಿ. ಅಕ್ಕಿ ಬದಲಿಗೆ ಇನ್ನು ಮುಂದೆ ಎರಡು ಕೆ.ಜಿ. ತೊಗರಿ ಬೇಳೆ, ತಲಾ ಒಂದು ಕೆ.ಜಿ. ಉಪ್ಪು ಹಾಗೂ ಸಕ್ಕರೆ 1 ಲೀ.ಅಡುಗೆ ಎಣ್ಣೆ ಒಳಗೊಂಡ 'ಇಂದಿರಾ ಆಹಾರ ಕಿಟ್' ನೀಡಲಾಗುವುದು ಎಂದರು.

ಅಕ್ಕಿಗಿಂತ 'ಇಂದಿರಾ ಆಹಾರ ಕಿಟ್' ಬೆಲೆ ತುಸು ಹೆಚ್ಚಳವಾಗಲಿದೆ, ಆದರೆ, ಬಡ ಕುಟುಂಬಗಳಿಗೆ ಪೌಷ್ಠಿಕ ಆಹಾರ ಕಲ್ಪಿಸುವ ಉದ್ದೇಶದಿಂದ ಈ ತೀರ್ಮಾನ ಕೈಗೊಂಡಿದ್ದೇವೆ, ಜೊತೆಗೆ ಕಾಳಸಂತೆಯಲ್ಲಿ ಪಡಿತರ ಅಕ್ಕಿ ಮಾರಾಟ ತಡೆಗೂ ಕಡಿವಾಣ ಬೀಳಲಿದೆ ಎಂದರು.

ಕೆಲವು ಕುಟುಂಬಗಳಿಗೆ 40 ರಿಂದ 50 ಕೆ.ಜಿ.ಗೂ ಹೆಚ್ಚು ಅಕ್ಕಿ ಲಭ್ಯವಾಗುತ್ತಿದ್ದು, ಈ ಪ್ರಮಾಣ ಕುಟುಂಬದ ಮಾಸಿಕ ಅಗತ್ಯಕ್ಕಿಂತ ಹೆಚ್ಚಾಗಿದ್ದು, ಈ ಅಧಿಕ ಅಕ್ಕಿ ಕಾಳಸಂತೆಯಲ್ಲಿ ಮಾರಾಟವಾಗುತ್ತಿತ್ತು.

ಅನ್ನಭಾಗ್ಯ ಯೋಜನೆಯಡಿ ನೀಡುವ ಅಕ್ಕಿಯಿಂದ ಕಾರ್ಬೋಹೈಡ್ರೇಟ್ ಪೌಷ್ಠಿಕಾಂಶ ಮಾತ್ರ ದೊರೆಯುತ್ತಿದ್ದು, ಮನುಷ್ಯನ ಆರೋಗ್ಯಕ್ಕೆ ಅವಶ್ಯವಿರುವ ಕೊಬ್ಬಿನಾಂಶ, ಪ್ರೋಟೀನ್‌ಗಳು ದೊರೆಯದೆ ಇರುವ ಕಾರಣ ಪೌಷ್ಠಿಕಾಂಶ ಉಳ್ಳ ಕಿಟ್ ನೀಡಲು ತೀರ್ಮಾನಿಸಲಾಗಿದೆ ಎಂದರು.

ಶ್ರಮಿಕರ ಮಕ್ಕಳಿಗೆ ವಸತಿ ಶಾಲೆ: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ■10ನೇ ಪುಟಕ್ಕೆ

ಮಹಿಳಾ ನೌಕರರಿಗೆ ವರ್ಷಕ್ಕೆ 12 ದಿನ ವೇತನ ಸಹಿತ ಋತುಚಕ್ರ ರಜೆ

ಬೆಂಗಳೂರು, ಅ.9– ರಾಜ್ಯದ ಲಕ್ಷಾಂತರ ಮಹಿಳಾ ನೌಕರರ ಬಹುದಿನಗಳ ಬೇಡಿಕೆ ಈಡೇರಿದೆ. ಸಚಿವ ಸಂಪುಟವು ರಾಜ್ಯದಲ್ಲಿ ಸರ್ಕಾರಿ, ಖಾಸಗಿ, ಕಾರ್ಖಾನೆ, ಗಾರ್ಮೆಂಟ್ಸ್ ಸೇರಿ ವಿವಿಧೆಡೆ ಕೆಲಸ ಮಾಡುವ ಮಹಿಳಾ ಉದ್ಯೋಗಿಗಳಿಗೆ 'ವೇತನ ಸಹಿತ ಋತುಚಕ್ರ ರಜೆ ನೀತಿ' ಜಾರಿಗೆ ಅನುಮೋದನೆ ನೀಡಿದೆ.


ಸಂತೋಷ್ ಲಾಡ್

ಈ ಐತಿಹಾಸಿಕ ನಿರ್ಧಾರದ ಪ್ರಕಾರ ಮಹಿಳೆಯರು ತಮ್ಮ ಋತುಚಕ್ರದ ಅವಧಿಯಲ್ಲಿ ವರ್ಷಕ್ಕೆ 12 ದಿನಗಳವರೆಗೆ (ತಿಂಗಳಿಗೆ ಒಂದು ದಿನ) ರಜೆ ಪಡೆಯಲು ಅವಕಾಶ ಲಭ್ಯವಾಗಿದೆ.

ಈ ಕುರಿತು ಮಾಹಿತಿ ನೀಡಿದ ಕಾರ್ಮಿಕ ಸಚಿವ ಸಂತೋಷ್ ಲಾಡ್, ಮಹಿಳೆಯರು ಸಮಾಜದಲ್ಲಿ ಸಾಕಷ್ಟು ಮಹತ್ವದ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. ಅವರ ಆರೋಗ್ಯ ಮತ್ತು ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ಈ ಐತಿಹಾಸಿಕ ತೀರ್ಮಾನ ಕೈ ಗೊಂಡಿದೆ. ಋತುಚಕ್ರದ ರಜೆಯೆಂದು ಮಹಿಳೆಯರಿಗೆ ವರ್ಷದಲ್ಲಿ ಒಟ್ಟು 12 ದಿನಗಳ ವೇತನ ಸಹಿತ ರಜೆ ನೀಡಲು ಸಂಪುಟ ಅನುಮೋದನೆ ನೀಡಿದೆ.

ಯಾರ್‍ಯಾರಿಗೆ ಅನ್ವಯ: ಈ ನೀತಿಯು ಕೇವಲ ಸರ್ಕಾರಿ ನೌಕರರಿಗೆ ಮಾತ್ರವಲ್ಲದೆ, ಖಾಸಗಿ ಸಂಸ್ಥೆಗಳು, ಕಾರ್ಖಾನೆಗಳು, ಗಾರ್ಮೆಂಟ್ಸ್‌ಗಳು ಮತ್ತು ಎಂಎನ್‌ಸಿ ಕಂಪನಿಗಳು ಸೇರಿದಂತೆ ಎಲ್ಲಾ ವಲಯಗಳ ಮಹಿಳಾ ನೌಕರಿಗೂ ಅನ್ವಯಿಸುತ್ತದೆ.

ಒಂದು ವರ್ಷದಿಂದ ಜಾರಿ ಪ್ರಯತ್ನ: ಈ ಮಹತ್ವದ ನೀತಿಯನ್ನು ಜಾರಿಗೊಳಿಸಲು ಸರ್ಕಾರವು ಕಳೆದ ಒಂದು ವರ್ಷದಿಂದ ಪ್ರಯತ್ನಿಸುತ್ತಿತ್ತು. ಈಗ ಸಂಪುಟದಲ್ಲಿ ಇದಕ್ಕೆ ಅನುಮತಿ ಸಿಕ್ಕಿದೆ. ಮಹಿಳೆಯರು ತಮ್ಮ ■10ನೇ ಪುಟಕ್ಕೆ

ಮೈಸೂರಿನ ದಸರಾ ವಸ್ತು ಪ್ರದರ್ಶನದ ಬಳಿ ಮತ್ತೊಂದು ಘೋರ ಕೃತ್ಯ

ಅಪ್ರಾಪ್ತ ಬಾಲಕಿ ಅತ್ಯಾಚಾರ-ಹತ್ಯೆ

ಹೊಟ್ಟೆ ಪಾಡಿಗೆ ದಸರಾ ವೇಳೆ ಬಲೂನ್ ಮಾರಲು ಬಂದಿದ್ದ ಬಡ ಕುಟುಂಬದ ಬಾಲಕಿ ಮೇಲೆ ಪೈಶಾಚಿಕ ಕೃತ್ಯ

ಮೈಸೂರು, ಅ. 9 (ಆರ್‌ಕೆ)– ಎರಡು ದಿನಗಳ ಹಿಂದೆ ಹಣಕಾಸು ವಿಚಾರ ಹಾಗೂ ವೈಷಮ್ಯದ ಹಿನ್ನಲೆಯಲ್ಲಿ ವ್ಯಕ್ತಿಯನ್ನು ಕೊಚ್ಚಿ ಬರ್ಬರವಾಗಿ ಕೊಂದ ಘಟನೆ ಬೆನ್ನ ಹಿಂದೆಯೇ, ಇದೇ ಸ್ಥಳದಲ್ಲಿ ಬಾಲಕಿಯ ಹತ್ಯೆಯಾಗಿದೆ. ಮೈಸೂರಿನ ಇಟ್ಟಿಗೆಗೂಡಿನ ದೊಡ್ಡಕೆರೆ ಮೈದಾನದ ದಸರಾ ವಸ್ತು ಪ್ರದರ್ಶನದ ಬಳಿಯೇ ಇಂದು ಬೆಳಗ್ಗೆ ಅಪ್ರಾಪ್ತ ಬಾಲಕಿ ಮೃತದೇಹ ಇರಿದು ಕೊಂದ ಸ್ಥಿತಿಯಲ್ಲಿ ಪತ್ತೆಯಾಗಿದೆ.


ಬಾಲಕಿಯ ಶವ ದೊರೆತ ಸ್ಥಳವನ್ನು ಪರಿಶೀಲಿಸುತ್ತಿರುವ ಪೊಲೀಸರ ತಂಡ.

ಗುಲ್ಬರ್ಗಾದಿಂದ ದಸರಾದಲ್ಲಿ ಬಲೂನ್ ವ್ಯಾಪಾರ ಮಾಡಲು ಮೈಸೂರಿಗೆ ಬಂದಿದ್ದ ಬಡ ಕುಟುಂಬದ ಸುಮಾರು 10 ವರ್ಷದ ಬಾಲಕಿಯನ್ನು ಚಾಕುವಿನಿಂದ ಮನಸ್ಸೋ ಇಚ್ಛೆ ಇರಿದು ಭೀಕರವಾಗಿ ಹತ್ಯೆಗೈಯ್ಯಲಾಗಿದೆ. ಪೋಷಕರೊಂದಿಗೆ ಬುಧವಾರ ವ್ಯಾಪಾರ ಮುಗಿಸಿ ರಾತ್ರಿ ಬಂದು ತಾವು ಬಿಡಾರ ಹೂಡಿದ್ದಲ್ಲಿ ಮಲಗಿದ್ದ ಬಾಲಕಿ ಇಂದು ಮುಂಜಾನೆ 5 ಗಂಟೆ ವೇಳೆಗೆ ಮಳೆ ಸುರಿಯುತ್ತಿದ್ದರಿಂದ ಪೋಷಕರು ಎಚ್ಚರಗೊಂಡು ನೋಡಿದಾಗ ಸ್ಥಳದಲ್ಲಿ ಕಾಣಿಸಲಿಲ್ಲ.

ಅಕ್ಕ ಪಕ್ಕದಲ್ಲಿ ನೋಡಿದಾಗ ಸಣ್ಣ ಮೋರಿ ಬಳಿ ರಕ್ತಸಿಕ್ತ ಮೃತದೇಹ ಕಂಡಿದೆ. ವಿಷಯ ತಿಳಿಯುತ್ತಿದ್ದಂತೆಯೇ ನಜರ್‌ಬಾದ್ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಮಹದೇವಸ್ವಾಮಿ ಮತ್ತು ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿದಾಗ ಬಾಲಕಿಯ ದೇಹದಲ್ಲಿ ಚಾಕುವಿನಿಂದ ಇರಿದಿರುವ ಗಾಯದ ಗುರುತುಗಳು ಕಂಡುಬಂದಿತು. ಪೊಲೀಸರು, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಬಾಲಕಿಯ ದೇಹವನ್ನು ಮಧ್ಯಾಹ್ನ ಪೊಲೀಸರು ವಾರಸುದಾರರಿಗೆ ಒಪ್ಪಿಸಿದರು. ಮಂಗಳವಾರ ಬೆಳಗ್ಗೆ ಹಾಡ ಹಗಲೇ ಕ್ಯಾತಮಾರನಹಳ್ಳಿಯ ವೆಂಕಟೇಶ್ ■10ನೇ ಪುಟಕ್ಕೆ

ಬಾಲಕಿ ಅತ್ಯಾಚಾರ, ಹತ್ಯೆ ಆರೋಪಿ ಕಾಲಿಗೆ ಗುಂಡು

● ಕೊಳ್ಳೇಗಾಲದಲ್ಲಿ ಬಂಧಿಸಿ ಕರೆತರಲಾಗಿತ್ತು ● ತನಿಖೆ ಭಾಗವಾಗಿ ಬಿಎಂಶ್ರೀ ನಗರಕ್ಕೆ ಕರೆದೊಯ್ಯುವ ವೇಳೆ ಮೂತ್ರ ವಿಸರ್ಜನೆ ನೆಪದಲ್ಲಿ ಪರಾರಿ ಯತ್ನ ● ಕೆ.ಆರ್.ಆಸ್ಪತ್ರೆ ಬೆಡ್ ಮೇಲೆ ನರಳುತ್ತಿರುವ ಪಕ್ಕಾ ಕ್ರಿಮಿನಲ್


ಕೆ.ಆರ್. ಆಸ್ಪತ್ರೆಯಲ್ಲಿ ಆರೋಪಿ ಕಾರ್ತಿಕ್.

ಮೈಸೂರು, ಅ.9– ದಸರಾ ಮಹೋತ್ಸವದ ವೇಳೆ ಬಲೂನು ಹಾಗೂ ಆಟಿಕೆ ಸಾಮಾನುಗಳನ್ನು ಮಾರಾಟ ಮಾಡಲು ಗುಲ್ಬರ್ಗಾದಿಂದ ಮೈಸೂರಿಗೆ ಬಂದಿದ್ದ ಬಡ ದಂಪತಿಯ 10 ವರ್ಷದ ಪುತ್ರಿ ಅಪಹರಿಸಿ, ಅತ್ಯಾಚಾರವೆಸಗಿ ಹತ್ಯೆಗೈದ ಆರೋಪಿಯ ಮೇಲೆ ಮೈಸೂರು ನಗರ ಪೊಲೀಸರು ಗುಂಡು ಹಾರಿಸಿದ್ದಾರೆ.

ಮೈಸೂರು ತಾಲೂಕು ಸಿದ್ದಲಿಂಗಪುರ ಗ್ರಾಮದ ಬಸ್ ಕ್ಲೀನರ್ ಕೆ.ಎಸ್.ಕಾರ್ತಿಕ್ ಆರೋಪಿಯಾಗಿದ್ದು, ಈತನನ್ನು ಇಂದು ಸಂಜೆ 5.45ರ ಸುಮಾರಿನಲ್ಲಿ ಕೊಳ್ಳೇಗಾಲದಲ್ಲಿ ಬಂಧಿಸಿದ್ದ ನಜರ್‌ಬಾದ್ ಪೊಲೀಸರು, ವಿಚಾರಣೆಯ ಭಾಗವಾಗಿ ಬಿಎಂಶ್ರೀ ನಗರಕ್ಕೆ ಕರೆದೊಯ್ಯುತ್ತಿರುವ ವೇಳೆ ರೈಲ್ವೆ ಗೂಡ್ಸ್‌ಶೆಡ್ ರಸ್ತೆಯಲ್ಲಿ ಮೂತ್ರ ವಿಸರ್ಜನೆಗೆಂದು ಆತನನ್ನು ಕೆಳಗಿಳಿಸಿದಾಗ ರಾತ್ರಿ 8.30ರ ಸುಮಾರಿನಲ್ಲಿ ಪೊಲೀಸರ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದಾಗ ನಜರ್‌ಬಾದ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಜೈಕೀರ್ತಿ ಅವರು ಆತನ ಕಾಲಿಗೆ ಗುಂಡು ಹಾರಿಸಿ, ಮತ್ತೆ ಬಂಧಿಸಿದ ನಂತರ ಕೆ.ಆರ್.ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿದ್ದಾರೆ. ಆರೋಪಿಯ ದಾಳಿಯಿಂದ ಗಾಯಗೊಂಡಿರುವ ಸಬ್ ಇನ್ಸ್‌ಪೆಕ್ಟರ್ ಜೈಕೀರ್ತಿ ಮತ್ತು ಪೇದೆ ವೆಂಕಟೇಶ್ ಕೂಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಘಟನೆಯಲ್ಲಿ ಮತ್ತೋರ್ವ ಪೇದೆ ಪ್ರಕಾಶ್ ಅವರಿಗೂ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ■10ನೇ ಪುಟಕ್ಕೆ

ಬಾಲಕಿ ಶವ ಗುಲ್ಬರ್ಗಾಗೆ ಸಾಗಿಸುವ ವ್ಯವಸ್ಥೆ ಮಾಡಿದ ಮೈಸೂರು ಪೊಲೀಸರು

ಅವರ ಸಂಬಂಧಿಕರಿಗೂ ಖಾಸಗಿ ಬಸ್: ಖರ್ಚು–ವೆಚ್ಚಕ್ಕೂ ನೆರವು

ಮೈಸೂರು, ಅ.9–ಹೊಟ್ಟೆಪಾಡಿಗಾಗಿ ದಸರಾ ವೇಳೆ ಬಲೂನು ಮಾರಲು ಬಂದು ಅತ್ಯಾಚಾರಕ್ಕೊಳಗಾಗಿ ಹತ್ಯೆಗೀಡಾದ ಬಾಲಕಿಯ ಕುಟುಂಬಸ್ಥರು ಹಾಗೂ ತಂಡದವರು ಗುಲ್ಬರ್ಗಾಕ್ಕೆ ತೆರಳಲು ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಮಾಡುವ ಮೂಲಕ ಮೈಸೂರು ನಗರ ಪೊಲೀಸರು ಮಾನವೀಯತೆ ಮೆರೆದಿದ್ದಾರೆ.

ದಸರಾ ವೇಳೆ ಬಲೂನು ಮತ್ತು ಆಟಿಕೆ ಸಾಮಾನುಗಳನ್ನು ಮಾರಾಟ ಮಾಡಲು ಗುಲ್ಬರ್ಗಾದಿಂದ 50 ರಿಂದ 60 ಮಂದಿಯ ತಂಡ ಮೈಸೂರಿಗೆ ಆಗಮಿಸಿತ್ತು. ಈ ತಂಡದಲ್ಲಿದ್ದ ದಂಪತಿಯ ಬಾಲಕಿಯು ದುರಂತ ಸಾವಿಗೀಡಾಗಿದ್ದು, ದೇವರಾಜ ಉಪ ವಿಭಾಗದ ಎಸಿಪಿ ರಾಜೇಂದ್ರ ನೇತೃತ್ವದ ಪೊಲೀಸರು ಈ ತಂಡದ ಉಸ್ತುವಾರಿಯನ್ನು ವಹಿಸಿಕೊಂಡು, ಮರಣೋತ್ತರ ಪರೀಕ್ಷೆ ಮುಗಿಯುತ್ತಿದ್ದಂತೆಯೇ ಬಾಲಕಿ ದೇಹವನ್ನು ಗುಲ್ಬರ್ಗಾಗೆ ಕೊಂಡೊಯ್ಯಲು ಆಂಬುಲೆನ್ಸ್ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಅದರಲ್ಲಿ ಬಾಲಕಿಯ ಪೋಷಕರೂ ಸೇರಿ ಆರೇಳು ಮಂದಿ ಹೋದರೆ, ಉಳಿದ ಸುಮಾರು 50 ಮಂದಿಗೆ ವಿಶೇಷ ಬಸ್ ವ್ಯವಸ್ಥೆ ಮಾಡಿ ಕಳುಹಿಸಿಕೊಡುವ ಮೂಲಕ ಎಸಿಪಿ ರಾಜೇಂದ್ರ ನೇತೃತ್ವದ ಪೊಲೀಸರು ಮಾನವೀಯತೆ ಮೆರೆದಿದ್ದಾರೆ. ಅಲ್ಲದೆ ಗುಲ್ಬರ್ಗಾದಿಂದ ಬಂದಿದ್ದ ತಂಡಕ್ಕೆ ಮಾರ್ಗದಲ್ಲಿ ನಾನಾ ಖರ್ಚಿಗೂ ಸ್ವಲ್ಪ ಹಣವನ್ನೂ ಪೊಲೀಸರು ಕೊಟ್ಟಿದ್ದಾರೆ.

ಸಚಿವರೊಂದಿಗೆ ಸಿಎಂ ಡಿನ್ನರ್ ಮೀಟಿಂಗ್

ಅ.13ರ ರಾತ್ರಿ ಸಿಎಂ ಸರ್ಕಾರಿ ನಿವಾಸ ಕಾವೇರಿಯಲ್ಲಿ ಔತಣಕೂಟ

ಬೆಂಗಳೂರು, ಅ.9– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ಎರಡೂವರೆ ವರ್ಷ ಪೂರ್ಣಗೊಂಡ ಬೆನ್ನಲ್ಲೇ ನವೆಂಬರ್ ತಿಂಗಳ ಅಂತ್ಯಕ್ಕೆ ಸಂಪುಟಕ್ಕೆ ಮೇಜರ್ ಸರ್ಜರಿ ಆಗುವ ಸಾಧ್ಯತೆ ಇದ್ದು, 15 ಹಾಲಿ ಸಚಿವರಿಗೆ ಕೊಕ್ ನೀಡಿ ಹೊಸಬರಿಗೆ ಅವಕಾಶ ನೀಡಲು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸಿದೆ ಎಂದು ತಿಳಿದು ಬಂದಿದೆ.



ನವೆಂಬರ್‌ನಲ್ಲಿ ಸಚಿವ ಸಂಪುಟಕ್ಕೆ ಮೇಜರ್ ಸರ್ಜರಿ ನಡೆಯಲಿದೆ ಎಂಬ ಸುಳಿವು ಸಿಕ್ಕ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ಅಲರ್ಟ್ ಆಗಿದ್ದು, ಸಚಿವರನ್ನು ವಿಶ್ವಾಸಕ್ಕೆ ಪಡೆಯಲು ಮುಂದಾಗಿದ್ದಾರೆ. ಇದರ ಭಾಗವಾಗಿ ಅ.13ರ ರಾತ್ರಿ ಸಂಪುಟ ಸಹೋದ್ಯೋಗಿಗಳ ಸಿಎಂ ಸಿದ್ದರಾಮಯ್ಯ ಔತಣ ಕೂಟ ಏರ್ಪಡಿಸಿದ್ದು, ■10ನೇ ಪುಟಕ್ಕೆ

ಶಾಸ್ತ್ರೋಕ್ತವಾಗಿ ತೆರೆದ ಹಾಸನಾಂಬೆ ದೇಗುಲ

ಉರಿಯುತ್ತಿದ್ದ ದೀಪ, ಬಾಡದ ಹೂವು, ಹಳಸದ ನೈವೇದ್ಯ



ಹಾಸನ, ಅ.9– ವರ್ಷಕ್ಕೊಮ್ಮೆ ದರ್ಶನ ನೀಡುವ ಹಾಸನಾಂಬೆ ದೇವಿಯ ಗರ್ಭಗುಡಿ ಬಾಗಿಲನ್ನು ಶಾಸ್ತ್ರೋಕ್ತವಾಗಿ ತೆರೆಯಲಾಗಿದೆ. ಗುರುವಾರ ಮಧ್ಯಾಹ್ನ 12.21ಕ್ಕೆ ಗರ್ಭಗುಡಿಯ ಬಾಗಿಲು ತೆರೆದಿದ್ದು, ಕಳೆದ ವರ್ಷ ಗರ್ಭಗುಡಿ ಬಾಗಿಲು ಮುಚ್ಚುವ ವೇಳೆ ಹಚ್ಚಿದ್ದ ದೀಪ ಉರಿಯುತ್ತಿತ್ತು. ದೇವರ ಮುಂದೆ ಇಟ್ಟಿದ್ದ ನೈವೇದ್ಯ ಹಳಸಿರಲಿಲ್ಲ ಮತ್ತು ಹೂವು ಬಾಡಿರಲಿಲ್ಲ.


ದೇವಾಲಯದ ಬಾಗಿಲು ತೆರೆಯುತ್ತಿರುವ ಕ್ಷಣ.

ಅರಸು ವಂಶಸ್ಥ ನಂಜರಾಜೇ ಅರಸ್ ಅವರು ಬಾಳೆಗೊನೆ ಕಡಿದ ಬಳಿಕ ಗರ್ಭಗುಡಿ ಬಾಗಿಲನ್ನು ತೆರೆಯಲಾಯಿತು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ, ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಹಾಸನ ಶಾಖಾ ಮಠದ ಪೀಠಾಧ್ಯಕ್ಷ ಶ್ರೀ ಶಂಭುನಾಥ ಸ್ವಾಮೀಜಿ, ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಹಮದ್ ಸುಜೀತಾ ಸೇರಿದಂತೆ ಜಿಲ್ಲಾಡಳಿತದ ಅಧಿಕಾರಿಗಳು ಉಪಸ್ಥಿತರಿದ್ದರು.

ಅ.23ರವರೆಗೆ ಹಾಸನಾಂಬೆ ಜಾತ್ರಾ ಮಹೋತ್ಸವ ನಡೆಯಲಿದೆ. ಈ ಬಾರಿ ಗೋಲ್ಡ್ ಪಾಸ್ ನೀಡಲಾಗಿದ್ದು, ಬೆಳಗ್ಗೆ 7ರಿಂದ 10 ಗಂಟೆಯವರೆಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಗಣ್ಯರಿಗೆ ಬೆಳಗ್ಗೆ 10.30ರಿಂದ ಮಧ್ಯಾಹ್ನ 12.30 ರವರೆಗೆ ದರ್ಶನಕ್ಕೆ ಅವಕಾಶ ನೀಡಲಾಗಿದೆ.

ಶುಕ್ರವಾರದಿಂದ ಸಾರ್ವಜನಿಕರು ದೇವಿಯ ದರ್ಶನ ಪಡೆಯಬಹುದು. ಒಂದು ಸಾವಿರ ಹಾಗೂ 300 ದರದ ವಿಶೇಷ ದರ್ಶನದ ಟಿಕೆಟ್ ಲಭ್ಯವಿದ್ದು, ಭಕ್ತರು ಆನ್‌ಲೈನ್‌ನಲ್ಲಿ ಟಿಕೆಟ್ ಪಡೆಯಬಹುದು.

ಕೊಡಗಿನ ವಸತಿ ಶಾಲೆಯಲ್ಲಿ ಅಗ್ನಿ ಅವಘಡ: ಓರ್ವ ಬಾಲಕ ಸಾವು, ಮೂವರಿಗೆ ಗಾಯ

● ಎಚ್ಚೆತ್ತ ಬಾಲಕನೋರ್ವನ ಸಮಯ ಪ್ರಜ್ಞೆಯಿಂದ 52 ಮಕ್ಕಳು ಪಾರು ● ಗಾಢ ನಿದ್ರೆಯಲ್ಲಿದ್ದ ವೇಳೆ ಹೊತ್ತಿ ಉರಿದ ನಿಲಯದ ಪೀಠೋಪಕರಣ, ಇತರ ಪರಿಕರ ● ಬಡ ಮಕ್ಕಳಿಗೆ ಇಂಗ್ಲೀಷ್ ಮಾಧ್ಯಮದಲ್ಲಿ ಉಚಿತ ಶಿಕ್ಷಣ ನೀಡುತ್ತಿರುವ ದೆಹಲಿ ಮೂಲದ ವಸತಿ ಶಾಲೆ

ಮಡಿಕೇರಿ, ಅ.9– ಮಡಿಕೇರಿ ತಾಲೂಕಿನ ಬೆಟ್ಟಗೇರಿ ಗ್ರಾಪಂ ವ್ಯಾಪ್ತಿಯ ಹೆರವನಾಡು ಗ್ರಾಮದ ಕಾಟಕೇರಿ ಸಮೀಪ ದೆಹಲಿಯ ಎನ್‌ಜಿಓ ನಡೆಸುತ್ತಿರುವ 'ಹರ್ ಮಂದಿರ್ ಆಶ್ರಮ' ವಸತಿ ಶಾಲೆಯಲ್ಲಿ ಗುರುವಾರ ಮುಂಜಾನೆ ಬೆಂಕಿ ಅವಘಡ ಸಂಭವಿಸಿದ್ದು, 2ನೇ ತರಗತಿಯ ವಿದ್ಯಾರ್ಥಿ ಸಾವನ್ನಪ್ಪಿ, ವಾರ್ಡನ್ ಮತ್ತು ಇಬ್ಬರು ವಿದ್ಯಾರ್ಥಿಗಳು ಸೇರಿ ಮೂವರು ಗಾಯಗೊಂಡಿದ್ದಾರೆ.

ಭಾಗಮಂಡಲ ಹೋಬಳಿ ಚೆಟ್ಟಿಮಾನಿ ಗ್ರಾಮದ ಕೃಷಿಕ ಕೇಕಡ ಅನಿಲ್ ಕುಮಾರ್ ಹಾಗೂ ಕುಂದಚೇರಿ ಸರಕಾರಿ ಶಾಲೆಯ ಅತಿಥಿ ಶಿಕ್ಷಕಿ ತ್ರಿವೇಣಿ ದಂಪತಿಯ 7 ವರ್ಷದ ಪುತ್ರ ಪುಷ್ಪಕ್, ಬೆಂಕಿ ಅವಘಡದಲ್ಲಿ ಬಲಿಯಾದ ದುರ್ದೈವಿ.

ಇದೇ ವಸತಿ ಶಾಲೆಯ ಮತ್ತೋರ್ವ ವಿದ್ಯಾರ್ಥಿಯ ಸಮಯ ಪ್ರಜ್ಞೆಯಿಂದ ಗಾಢ ನಿದ್ದೆಯಲ್ಲಿದ್ದ ಇತರ 52 ಮಕ್ಕಳ ಪ್ರಾಣ ಉಳಿದಿದ್ದು ಬಹುದೊಡ್ಡ ದುರಂತವೂ ತಪ್ಪಿದಂತಾಗಿದೆ.

ವಸತಿ ಶಾಲೆ ಹಿನ್ನೆಲೆ: ಕಾಟಕೇರಿ ಬಳಿ ಇರುವ ಹರ್ ಮಂದಿರ್ ವಸತಿ ಶಾಲೆ 2019ರಲ್ಲಿ ಆರಂಭಗೊಂಡಿದ್ದು 78 ಎಕರೆ ಪ್ರದೇಶದಲ್ಲಿ ನೆಲೆ ಕಂಡಿದೆ. 1ರಿಂದ 7ನೇ ತರಗತಿಯವರೆಗೆ ಬಡ ವಿದ್ಯಾರ್ಥಿಗಳಿಗೆ ಕುಟಿರ ಮಾದರಿಯ ಕೊಠಡಿಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ಉಚಿತ ಶಿಕ್ಷಣ ನೀಡಲಾಗುತ್ತಿದೆ. ಪ್ರಾರಂಭದಲ್ಲಿ ಬೆರಳೆಣಿಕೆಯಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ ಇದೀಗ ನೂರರ ಗಡಿ(102) ದಾಟಿದ್ದು, ರಾಜ್ಯದ ವಿವಿಧ ಭಾಗಗಳ ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಈ ಪೈಕಿ ವಸತಿ ನಿಲಯದಲ್ಲಿ 72 ಮಕ್ಕಳು ವಾಸವಿದ್ದು ದಸರಾ ರಜೆ ಹಿನ್ನೆಲೆಯಲ್ಲಿ ಕೆಲವು ವಿದ್ಯಾರ್ಥಿಗಳು ಊರಿಗೆ ತೆರಳಿದ್ದಾರೆ. ಅ.6ರಿಂದ ಎಂದಿನಂತೆ ಶಾಲೆ ಆರಂಭವಾಗಿದ್ದು ಪುಷ್ಪಕ್ ಮತ್ತು ಆಕೆಯ ಅಕ್ಕ 6ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸಿಂಚನ(10) ಶಾಲೆಗೆ ಮರಳಿದ್ದರು. ಗುರುವಾರ ವಸತಿ ನಿಲಯದಲ್ಲಿ ಸಿಂಚನ ಮತ್ತು ಪುಷ್ಪಕ್ ಸಹಿತ 30 ಮಂದಿ ಬಾಲಕರು ಹಾಗೂ 23 ಬಾಲಕಿಯರು ಸೇರಿ ಒಟ್ಟು 53 ವಿದ್ಯಾರ್ಥಿಗಳು ತಂಗಿದ್ದರು. ಶಾಲಾ ಶಿಕ್ಷಕರು ಮತ್ತು ಇತರ 25 ಸಿಬ್ಬಂದಿ ಕೂಡ ವಾಸವಾಗಿದ್ದರು.


ಮೃತಪಟ್ಟ ಬಾಲಕ ಪುಷ್ಪಕ್

ಗಾಢ ನಿದ್ದೆಯಲ್ಲಿ ದುರಂತ: ಗುರುವಾರ ಮುಂಜಾನೆ 4 ಗಂಟೆ ಸಮಯದಲ್ಲಿ ವಸತಿ ಶಾಲೆಯ ಮೇಲ್ಛಾವಣಿಗೆ ಬೆಂಕಿ ತಗುಲಿದ್ದು ಸಂಪೂರ್ಣ ಹೊತ್ತಿ ಉರಿದಿದೆ. ಈ ಸಂದರ್ಭದಲ್ಲಿ ಎಚ್ಚರಗೊಂಡ ಕಾಲೂರು ಮೂಲದ ವಿದ್ಯಾರ್ಥಿ ಬಬಿನ್ ಬಿದ್ದಪ್ಪ, ಕೂಗಿಕೊಂಡು ಎಲ್ಲಾ ವಿದ್ಯಾರ್ಥಿಗಳನ್ನು ಎಬ್ಬಿಸಿ ಕಿಟಕಿಯ ಮೂಲಕ ಹೊರ ಬರುವ ಪ್ರಯತ್ನ ನಡೆಸಿದ್ದಾನೆ. ಮಕ್ಕಳ ಕೂಗಾಟ ಕೇಳಿ ಎಚ್ಚರಗೊಂಡ ಶಾಲಾ ಸಿಬ್ಬಂದಿ ಮತ್ತು ಗ್ರಾಮಸ್ಥರು ವಿದ್ಯಾರ್ಥಿಗಳನ್ನು ವಸತಿ ನಿಲಯದಿಂದ ಹೊರ ಕರೆ ತಂದಿದ್ದಾರೆ.

> ▶ ಮೇಲ್ನೋಟಕ್ಕೆ ಇದೊಂದು ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ನಡೆದ ಘಟನೆ ಎಂದು ಕಂಡು ಬರುತ್ತಿದ್ದು ಪೊಲೀಸ್ ಮತ್ತು ಅಗ್ನಿ ಶಾಮಕ ಇಲಾಖೆ ತನಿಖೆ ನಡೆಸಲಿದೆ. ಸಂಪೂರ್ಣ ತನಿಖೆ ಬಳಿಕ ನೈಜಾಂಶ ತಿಳಿಯಲಿದೆ. ಘಟನೆ ಕುರಿತು ಅತೀವ ಬೇಸರವಾಗಿದೆ. ಜಿಲ್ಲಾಡಳಿದಿಂದ ಮೃತ ಬಾಲಕನ ಕುಟುಂಬಕ್ಕೆ ಎಲ್ಲಾ ರೀತಿಯ ನೆರವು ಮತ್ತು ಸಹಕಾರ ನೀಡಲಾಗುತ್ತದೆ.
>
> – ವೆಂಕಟ್ ರಾಜಾ, ಜಿಲ್ಲಾಧಿಕಾರಿ, ಕೊಡಗು


ಹೊತ್ತಿ ಉರಿಯುತ್ತಿರುವ ವಸತಿ ಶಾಲೆ.

ಆ ಹೊತ್ತಿಗಾಗಲೇ ಬೆಂಕಿಯ ಕೆನ್ನಾಲಿಗೆ ವಸತಿ ಶಾಲೆಯ ಎಲ್ಲಾ ಕೊಠಡಿಗಳನ್ನು ವ್ಯಾಪಿಸಿತ್ತು. ವಸತಿ ನಿಲಯದಲ್ಲಿದ್ದ ಮಕ್ಕಳ ಎಣಿಸಿದ ಸಂದರ್ಭ ಓರ್ವ ವಿದ್ಯಾರ್ಥಿ ನಾಪತ್ತೆಯಾಗಿರುವುದು ಕಂಡು ಬಂದಿದೆ. ತೀವ್ರ ಬೆಂಕಿ ಹರಡಿದ್ದರಿಂದ ಶಾಲಾ ಸಿಬ್ಬಂದಿ ಸಹಿತ ಗ್ರಾಮಸ್ಥರು ಕೂಡ ಕೊಠಡಿಗೆ ನುಗ್ಗಲಾಗದೇ ಅಸಹಾಯಕ ಪರಿಸ್ಥಿತಿ ಎದುರಿಸಿದ್ದಾರೆ. ತಕ್ಷಣವೇ ಮಾಹಿತಿ ತಿಳಿದ ಅಗ್ನಿಶಾಮಕ ದಳ ಸ್ಥಳಕ್ಕಾಗಮಿಸಿ ಬೆಂಕಿ ನಂದಿಸಿದೆ. ಆದರೆ ಆ ಹೊತ್ತಿಗಾಗಲೇ ■10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ರೀ ನಾನ್ಯಾವಾಗ್ಲೂ ನಿಮ್ಮ ಹೃದಯದಲ್ಲೇ ಇರಬೇಕು?

ಗಂಡ : ಆಯ್ತು ಕಣೆ... ಆದ್ರೆ, ಅಲ್ಲಿರುವ ಬೇರೆ ಹೆಂಗಸರೊಂದಿಗೆ ಜಗಳ ಆಡಬೇಡ.

ಮೈಸೂರು ಮಿತ್ರ

ಶುಕ್ರವಾರ, 10 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ನಿಂದಿಸುವವರಿಗೆಲ್ಲ ಉತ್ತರಿಸುತ್ತ ಕುಳಿತರೆ ನೀವು ಅದೇ ಕೆಲಸ ಮಾಡುತ್ತಿರಬೇಕು. ನಿಂದಕರನ್ನು ಹಿಂದೆ ಬಿಡಿ. ನೀವು ಮುಂದೆ ನಡೆಯಿರಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪೇಚಾಟದಲ್ಲಿ ಬಿದ್ದವನಿಗೆ ಪೀಕಲಾಟವೇ ಗತಿ.

ನಿಮ್ಮ ಪತ್ರಗಳು

■ ಸುಪ್ರೀಂಕೋರ್ಟ್: ಶಾಂತಿ ಕೆಡಿಸುವ ಕೃತ್ಯಕ್ಕೆ ತಕ್ಕ ಶಿಕ್ಷೆ ಆಗಬೇಕಿದೆ...

ಮಾನ್ಯರೆ,

ನೂರಾರು ಧರ್ಮ, ಸಾವಿರಾರು ಜಾತಿ, ಕುಲ ಪಂಗಡ, ಬಿನ್ನತೆ, ವೈವಿದ್ಯತೆ ಮತ್ತು ವಿವಿಧತೆಯಲ್ಲಿ ಏಕತೆ ಹೊಂದಿರುವ ಜಾತ್ಯತೀತ ದೇಶಕ್ಕೆ ಸರ್ವರನ್ನು ಒಳಗೊಂಡಂತೆ ಸಮಯ ಸಂದರ್ಭನುಸಾರ ಅಗತ್ಯವಿದ್ದಾಗ ಕಾನೂನು ಕಟ್ಟಪ್ಪಣೆ ಹೊರಡಿಸುವುದು ಸುಪ್ರೀಂಕೋರ್ಟ್.

ದೇಶದ ಪವಿತ್ರ ಸ್ಥಳ ಸುಪ್ರೀಂಕೋರ್ಟ್‌ನಲ್ಲಿ ಮುಖ್ಯ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಅವರ ಮೇಲೆ ಸಣ್ಣತನದ ಕಿಡಿಗೇಡಿ ವಕೀಲನೊಬ್ಬ ನಡೆಸಿದ ಶೂ ಎಸೆಯುವ ಯತ್ನ ಖಂಡನೀಯ. ಇದು ಇಡೀ ದೇಶವೇ ತಲೆ ತಗ್ಗಿಸುವ ವಿಚಾರ ಮತ್ತು ಸಂವಿಧಾನಕ್ಕೆ ಮಾಡಿದ ಅಪಮಾನವೇ ಸರಿ.

ಈ ಅಸಭ್ಯ ವರ್ತನೆ ಹಿಂಸೆಯ ಪ್ರತಿಬಿಂಬವಾಗಿದೆ. ಈ ಕೀಳು ಮಟ್ಟದ ನಡೆಗಳು ನಾಚಿಕೆಗೇಡು. ಇಂತಹ ಕೃತ್ಯಗಳು ಕೇವಲ ವ್ಯಕ್ತಿಯ ಮೇಲೆ ದಾಳಿಯಲ್ಲ ಪ್ರಜಾಪ್ರಭುತ್ವ ವ್ಯವಸ್ಥೆ, ಸಂವಿಧಾನದ ಆತ್ಮವಾದ ಕಾನೂನು ಮತ್ತು ನ್ಯಾಯಾಂಗದ ಗೌರವವನ್ನು ಕೆಡಿಸುತ್ತವೆ.

ಈ ಘಟನೆಯಿಂದಾಗಿ ದೇಶಾದ್ಯಂತ ದಿಗ್ಭ್ರಮೆ ಮೂಡಿದೆ. ಇನ್ನೂ ಜನ ಸಾಮಾನ್ಯರ ಪಾಡೇನು ಎಂಬ ಪ್ರಶ್ನೆ ಕಾಡದೆ ಇರದು.

ದಲಿತ ಸಮುದಾಯದವರಾದ ಬಿ.ಆರ್. ಗವಾಯಿ ಅವರು ತಮ್ಮ ಅವಿರತ ಶ್ರಮ, ಬುದ್ಧಿವಂತಿಕೆ ಮತ್ತು ನಿಷ್ಠೆಯಿಂದ ಅರ್ಹರಾಗಿ ಉನ್ನತ ಸ್ಥಾನ ಅಲಂಕರಿಸಿ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಾಗಿದ್ದಾರೆ.

ನ್ಯಾಯಾಧೀಶರು, ನಮ್ಮ ಪ್ರಜಾಪ್ರಭುತ್ವದ ಧುರೀಣರು ಮತ್ತು ನ್ಯಾಯದ ಆಧಾರ ಸ್ತಂಬವಾಗಿದ್ದಾರೆ. ಈ ಹೇಯ ಕೃತ್ಯವನ್ನು ಎಸಗಿ ಸಮಾಜದ ಶಾಂತಿಯನ್ನು ಕದಡಲು ಕಾರಣವಾಗಿರುವ ವಕೀಲನನ್ನೂ ತೀವ್ರ ವಿಚಾರಣೆ ನಡೆಸಿ ಆತನ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು ಎಚ್ಚರಿಕೆಯ ಸಂದೇಶ ರವಾನಿಸಿ ನ್ಯಾಯಾಂಗ ವ್ಯವಸ್ಥೆಯ ಗೌರವವನ್ನು ಉಳಿಸಿಕೊಂಡು ಹೋಗಬೇಕಾಗಿದೆ.

ಸ್ಥಾನಮಾನ, ಪ್ರಭಾವ, ಯಾರೇ ಆಗಿರಲಿ. ಈ ನೆಲದ ಕಾನೂನು ಹಾಗೂ ಸಂವಿಧಾನಿಕ ಸ್ಥಾನಗಳನ್ನು ಹೆಮ್ಮೆಯಿಂದ ಗೌರವಿಸುವುದು ಪ್ರತಿಯೊಬ್ಬ ಭಾರತೀಯ ನಾಗರಿಕರ ಆದ್ಯತೆಯ ಜವಾಬ್ದಾರಿ.

ದೇಶದ ಸರ್ವೋಚ್ಛ ನ್ಯಾಯಪೀಠಕ್ಕಾದ ಇಂತಹ ಅಪಮಾನಗಳು ಮತ್ತೊಮ್ಮೆ ಮರುಕಳಿಸದಂತೆ ನಿಗಾ ವಹಿಸಬೇಕಾದ ಹೊಣೆಗಾರಿಕೆಯು ಎಲ್ಲರ ಮೇಲಿದೆ ಅನ್ನುವುದನ್ನು ಯಾರು ಮರೆಯಬಾರದು.

ದೇಶವನ್ನು ಪ್ರೀತಿಸುವವರು. ಹೆಮ್ಮೆಯ ಭಾರತೀಯರು.

– ಅನಿಲ್ ಕುಮಾರ್, ನಂಜನಗೂಡು.

■ ಸೋಶಿಯಲ್ ಎಂಜಿನಿಯರಿಂಗ್ ತಡೆಗಟ್ಟುವಿಕೆ ಅಗತ್ಯ

ಮಾನ್ಯರೆ,

ಇಂದಿನ ತಂತ್ರಜ್ಞಾನ ಯುಗದಲ್ಲಿ ಬ್ಯಾಂಕಿಂಗ್, ವ್ಯಾಪಾರ, ಶಿಕ್ಷಣ ಎಲ್ಲವೂ ಡಿಜಿಟಲ್ ಆಗುತ್ತಿವೆ. ಈ ಅಭಿವೃದ್ಧಿಯ ಹಿಂದೆ ಸೋಶಿಯಲ್ ಎಂಜಿನಿಯರಿಂಗ್ ಎಂಬ ಹೊಸ ರೀತಿಯ ಆನ್‌ಲೈನ್ ಮೋಸಗಳು ಅಪಾಯಕಾರಿಯಾಗಿ ಬೆಳೆಯುತ್ತಿವೆ. ಜನರ ವಿಶ್ವಾಸ, ಭಾವನೆ ಮತ್ತು ತುರ್ತುಭಾವನೆಗಳನ್ನು ಆಯುಧವನ್ನಾಗಿ ಮಾಡಿಕೊಂಡು ಅಪರಾಧಿಗಳು ಬ್ಯಾಂಕ್ ಸಿಬ್ಬಂದಿ ಅಥವಾ ಸರ್ಕಾರಿ ನೌಕರರಂತೆ ನಟಿಸಿ ಹಣ ಹಾಗೂ ವೈಯಕ್ತಿಕ ಮಾಹಿತಿಯನ್ನು ಕಸಿದುಕೊಳ್ಳುತ್ತಿದ್ದಾರೆ. ಇದು ಕೇವಲ ತಾಂತ್ರಿಕ ಸಮಸ್ಯೆಯಲ್ಲ. ಮಾನವ ಮನಸ್ಸಿನ ಭದ್ರತೆಯ ಪರೀಕ್ಷೆ. ಶಿಕ್ಷಣ ಪಡೆದವರೂ ಈ ಬಲೆಗೆ ಬೀಳುತ್ತಿರುವುದು ಆತಂಕಕಾರಿ. ಹೀಗಾಗಿ ತಾಂತ್ರಿಕ ಭದ್ರತೆಯಷ್ಟೇ ಅಲ್ಲ, ಜಾಗೃತಿಯೇ ನಿಜವಾದ ರಕ್ಷಣೆಯಾಗಿದೆ. ಸರ್ಕಾರವು ಶಾಲೆ–ಕಾಲೇಜುಗಳಲ್ಲಿ 'ಡಿಜಿಟಲ್ ಸುರಕ್ಷತೆ' ಪಾಠವನ್ನು ಸೇರಿಸಬೇಕು, ಸೈಬರ್ ಮಾಹಿತಿ ಕೇಂದ್ರಗಳನ್ನು ಸ್ಥಾಪಿಸಬೇಕು ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳಬೇಕು.

ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳು ಹೊಸ ಮೋಸದ ವಿಧಾನಗಳ ಬಗ್ಗೆ ಗ್ರಾಹಕರಿಗೆ ಎಚ್ಚರಿಕೆ ನೀಡಬೇಕು. ಜೊತೆಗೆ ಜನರಿಗೆ ನಕಲಿ ಕರೆಗಳು, ಇಮೇಲ್‌ಗಳು ಮತ್ತು ಸಂದೇಶಗಳನ್ನು ಗುರುತಿಸುವ ತರಬೇತಿಯನ್ನು ನೀಡುವ ಕಾರ್ಯಕ್ರಮಗಳನ್ನು ಕೂಡ ಪ್ರಾರಂಭಿಸಬೇಕು.

–ಡಾ. ಎಚ್.ಕೆ.ವಿಜಯಕುಮಾರ್, ಮೈಸೂರು.

■ ಬನಶಂಕರಿ ದೇವಸ್ಥಾನದ ಮುಂದೆ ರಸ್ತೆ ಡುಬ್ಬ ನಿರ್ಮಿಸಿ



ಮಾನ್ಯರೆ,

ಇದು ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯ ಬನಶಂಕರಿ ದೇವಸ್ಥಾನ, ಮಹದೇಶ್ವರ ದೇವಸ್ಥಾನವಿರುವ ಐಶ್ವರ್ಯಾನಗರಕ್ಕೆ ಹೋಗುವ ಸರ್ಕಲ್. ಶಿವನ ದೇವಾಲಯದ ಕಡೆಯಿಂದ ಬರುವ ವಾಹನಗಳು ಮತ್ತು ಕೆಎಸ್‌ಆರ್‌ಟಿಸಿ ಡಿಪೋ ಕಡೆಯಿಂದ ಬರುವ ಎಲ್ಲಾ ವಾಹನಗಳು ಸಹ ಈ ಸರ್ಕಲ್ ಮುಖಾಂತರವೇ ಹಾದು ಹೋಗಬೇಕು. ಆದಿಚುಂಚನಗಿರಿ ರಸ್ತೆಯ ಮುಖಾಂತರ ವೇಗವಾಗಿ ಬರುವ ವಾಹನಗಳಿಂದಾಗಿ ಈ ಸರ್ಕಲ್ ಬಳಿ ಪದೇ ಪದೆ ಅಪಘಾತಗಳು ಸಂಭವಿಸುತ್ತಲೇ ಇವೆ. ಕಳೆದ ವಾರವಷ್ಟೇ ಇಲ್ಲಿ ಅಪಘಾತ ಸಂಭವಿಸಿ ವಾಹನ ಸವಾರರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಬನಶಂಕರಿ ದೇವಸ್ಥಾನದ ಮುಂಭಾಗದಲ್ಲಿ ಹಂಪ್ಸ್ ಹಾಕಿ (ರಸ್ತೆ ಡುಬ್ಬ) ಅಪಘಾತಗಳನ್ನು ತಪ್ಪಿಸಬೇಕು. ಸಂಬಂಧಿಸಿದ ನಗರಪಾಲಿಕೆಯ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಸಾರ್ವಜನಿಕರ ಪ್ರಾಣ ಉಳಿಸಬೇಕಿದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಯಾರು... ಯಾರು... ನಮ್ಮವರ್‍ಯಾರು?

ಮಿರ್ಲೆ ಚಂದ್ರಶೇಖರ
ಲೇಖಕರು
ಮೊ:9916129654.





ಮೊದಲಿಗೆ ನಮ್ಮವರು ಎಂಬ ಪದದ ಅರ್ಥವನ್ನು ತಿಳಿಯುವುದು ಸೂಕ್ತ. ಎಲ್ಲರನ್ನು ನಮ್ಮವರೆಂದು ಭಾವಿಸದಿದ್ದರೂ ಕೆಲವರನ್ನಾದರು ನಮ್ಮವರೆಂದು ವಿಶೇಷವಾಗಿ ಪರಿಗಣಿಸಿರುತ್ತೇವೆ. ಈ ಬಾವನೆಯೇ ತಪ್ಪು. ಇದು ತಪ್ಪು ಎಂದಾದಲ್ಲಿ ನಮ್ಮವರು ಅಂದರೆ ಯಾರು?. ನಮ್ಮ ಸುತ್ತಲೂ ಇರುವವರು ನಮ್ಮವರೇ?, ಕಟ್ಟಿಕೊಂಡ ಹೆಂಡತಿ–ಗಂಡ ಮತ್ತು ಜನ್ಮಕೊಟ್ಟ ಮಕ್ಕಳು ನಮ್ಮವರೇ?, ಕಷ್ಟಸುಖಗಳಲ್ಲಿ ಆದವರು ನಮ್ಮವರೇ?. ಸ್ವಹಿತ ಬಯಸದೆ ನಮ್ಮ ಕಷ್ಟವನ್ನು ಅವರ ಕಷ್ಟವೆಂದು ತಿಳಿದು ಸಹಾಯ ಮಾಡುವವರು ನಮ್ಮವರು. ರಕ್ತ ಹಂಚಿಕೊಂಡು ಹುಟ್ಟಿದ ಮಾತ್ರಕ್ಕೆ ನಮ್ಮವರಾಗಲು ಸಾಧ್ಯವಿಲ್ಲ!.

ಇಲ್ಲಿ ಯಾರೂ ನಮ್ಮವರಲ್ಲ ಅದೇ ರೀತಿ ಎಲ್ಲರೂ ನಮ್ಮವರೆ!. ಇದೇನಿದು ಎರಡನ್ನೂ ಹೇಳುತ್ತಿರುವೆಯಲ್ಲ ಎಂದು ಕೇಳುತ್ತಿದ್ದೀರಿ ಅಲ್ಲವೆ?, ಹೌದು ಎರಡೂ ಸರಿಯಾದ ಉತ್ತರಗಳೆ. ನಮ್ಮವರೆಂದರೆ ಬಂಧು–ಬಳಗದವರೇ ಆಗಬೇಕಿಲ್ಲ. ಹುಟ್ಟಿನೊಂದಿಗೆ ಜೊತೆಯಲ್ಲಿ ಬಂದವರೇ ಆಗಬೇಕಿಲ್ಲ ಅಥವಾ ನಮ್ಮದೇ ಕುಟುಂಬದ ಸದಸ್ಯರೆ ಆಗಬೇಕಿಲ್ಲ.

ಕಷ್ಟಕ್ಕಾಗುವವನೇ ನೆಂಟ, ಒಂದೇ ಮನೆಯೊಳಗೆ ಇದ್ದರೂ ಕಾಯಿಲೆ ಬಿದ್ದಾಗ, ದುಡಿಯಲು ಸಾಧ್ಯವಾಗದೆ ಮೂಲೆಯಲ್ಲಿ ಕುಳಿತಿರುವಾಗ ತಿರುಗಿಯೂ ನೋಡದ ಗಂಡ–ಹೆಂಡತಿ ಅಥವಾ ಮಕ್ಕಳು ನಮ್ಮವರು ಹೇಗಾಗುತ್ತಾರೆ?. ವೃದ್ಧಾಪ್ಯದಲ್ಲಿ ಮನೆಯಲ್ಲಿ ಇಟ್ಟುಕೊಳ್ಳದೆ ವೃದ್ಧಾಶ್ರಮಕ್ಕೆ ಕಳುಹಿಸುವ ಮಗ–ಸೊಸೆಯನ್ನು ನಮ್ಮವರು ಎನ್ನಲಾಗುವುದೇ?.

ನಮಗೆ ನಮ್ಮವರು ಇರಬೇಕು ಎಂದು ಆಸೆಪಡುವ ನಾವು ಅವರಿಗೂ ನಾವು ನಮ್ಮವರು ಎನ್ನುವ ಅಭಿಪ್ರಾಯ ಮೂಡುವಂತಹ ನಡವಳಿಕೆಗಳು ಇರಬೇಕಲ್ಲ. ನಮ್ಮವರೆನ್ನುವ ಅಭಿಪ್ರಾಯ ಮೂಡಬೇಕಾದರೆ ಅವರ ಕಷ್ಟ–ಸುಖಗಳಲ್ಲಿ ಬಾಗಿ ಆಗಬೇಕು. ಅವರಲ್ಲಿ ಹಣ ಆಸ್ತಿ ಅಂತಸ್ತು ಅಧಿಕಾರ ಇರುವಾಗ ಮಾತ್ರ ಅವರನ್ನು ನಮ್ಮವರೆಂದು ತಿಳಿಯುತ್ತೇವೆ ಮತ್ತು ಕಂಡಕಂಡವರಲ್ಲಿ ಅವರು ನಮ್ಮ ನೆಂಟರು, ನಮ್ಮ ಸ್ನೇಹಿತರೆಂದು ಹೇಳಿಕೊಳ್ಳುತ್ತೇವೆ. ಎಲ್ಲವನ್ನು ಕಳೆದುಕೊಂಡು ನಿರ್ಗತಿಕನಾಗಿ ಬೀದಿಗೆ ಬಿದ್ದಾಗ ಕಂಡರೂ ಕಾಣದಂತೆ ಹೋಗುವ ನಾವು ಅವರಿಗೆ 'ನಮ್ಮವರು' ಹೇಗಾಗುತ್ತೇವೆ.

ಪ್ರಾರಂಭದಲ್ಲೇ ಹೇಳಿದಂತೆ ಯಾರೂ ನಮ್ಮವರಲ್ಲ: ಎಲ್ಲರೂ ನಮ್ಮವರೇ– ಗೊತ್ತಿದೆ, ನನಗೆ ಅಯ್ಯೋ ಅದು ಹೇಗಾಗುತ್ತದೆಯೆಂದು ಮತ್ತೇ ನೀವು ಗೊಣಗುತ್ತಿದ್ದೀರಿ. ಇದೊಂದು ಸಿಂಪಲ್ ಸೂತ್ರವಷ್ಟೆ. ನಾ ನಿನಗಿದ್ದರೆ ನೀ ನನಗೆ. ಸಮಯದಲ್ಲಿ ಪರೋಪಕಾರಿಗಳಾಗಿ ಸಹಾಯ ಹಸ್ತ ನೀಡಿದರೆ ಅವರೂ ನಮ್ಮ ಕಷ್ಟದಲ್ಲಿ ಆಗುತ್ತಾರೆ. ನಮ್ಮ ಕಷ್ಟದಲ್ಲಿ ಸಹಾಯ ಬಯಸುವ ನಾವು, ಅವರ ಕಷ್ಟದಲ್ಲೂ ಸ್ವಯಂಪ್ರೇರಿತವಾಗಿ ಬಾಗಿ ಆಗಬೇಕಿದೆ. ಆಗ ಮಾತ್ರ ಅವರಿಗೆ ನಾವು ನಮಗೆ ಅವರು 'ನಮ್ಮವರು' ಆಗುತ್ತಾರೆ.

ಬದುಕನ್ನು ಬೇರೆಯವರಿಂದ ಸಹಾಯ ಕೋರುವ ಹಂತಕ್ಕೆ ತೆಗೆದುಕೊಂಡು ಹೋಗುವುದು ಬೇಡ. ಸುತ್ತಲಿನವರು ನಮ್ಮವರಾಗ ಬೇಕೆಂದು ಸಣ್ಣವರಾಗುವುದು ಬೇಡ. ಸೋಮಾರಿಗಳಾಗಿ ಕುಳಿತು ಕಾಲವನ್ನು ವ್ಯಯ ಮಾಡದೆ ದುಡಿಮೆಯಿಂದ ನಮ್ಮ ಬದುಕನ್ನು ಸುಂದರಗೊಳಿಸಿಕೊಂಡು ಸಾರ್ಥಕತೆ ಕಾಣಬಹುದು. ದುಡಿದಿದ್ದರಲ್ಲಿ ಸ್ವಲ್ಪ ಭಾಗ ಅವಶ್ಯಕತೆ ಇರುವ ಜನರಿಗೆ ವಿನಿಯೋಗಿಸಿದ್ದಲ್ಲಿ 'ನಮ್ಮವರು' ಪದದ ಅರ್ಥವನ್ನು ಕಂಡುಕೊಂಡು ಸಮಾಜದಲ್ಲಿ ಉಳಿಯುತ್ತೇವೆ. ಕಷ್ಟದಲ್ಲಿ ಬೇಡುವುದೊಂದೇ ಅಲ್ಲ ಇದ್ದಾಗ ಬೇರೆಯವರ ಕಷ್ಟದಲ್ಲೂ ಕೊಡುವುದನ್ನು ಅಳವಡಿಸಿಕೊಳ್ಳಬೇಕಿದೆ.

ಎಲ್ಲರಿಗೂ ನಾವು ನಮ್ಮವರಾಗಿ ಬದುಕುವುದು ಬೇಡ, ಸಾಧ್ಯವಾಗದ ತಿಳುವಳಿಕೆಯ ಮಾತಿದು. ಕಾರಣ ಕೊಡುವವರನ್ನು ಕಂಡರೆ ಬಿಡದೆ ಕಿತ್ತುಕೊಳ್ಳುವ ಜನರು ಕಡಿಮೆ ಏನಿಲ್ಲ. ಅಂಥವರನ್ನು ಕೊಟ್ಟು ಕೊಟ್ಟು ನಾವೇ ನಮ್ಮ ಕೈಯ್ಯಾರ ಹಾಳು ಮಾಡಿದಂತೆ ಆಗುವುದು. ಅವಶ್ಯಕತೆ ನ್ಯಾಯಯುತವಾಗಿ ಇರುವುದನ್ನು ಖಾತ್ರಿಪಡಿಸಿದ ನಂತರವೇ ನಮ್ಮ ಹಸ್ತ ಭೂಮಿಯನ್ನು ನೋಡಲಿ.

ಬೇರೆಯವರಿಂದ ನಾವು ಪಡೆದು ಕೊಡುವುದಕ್ಕಿಂತ ನಮ್ಮ ಕೈಲಾದದ್ದನ್ನು ಕೊಟ್ಟು ಪಡೆಯುವ ಗುಣವನ್ನು ಬೆಳೆಸಿಕೊಳ್ಳುವುದು ಒಳಿತು. ಇದು ಪರಸ್ಪರ ನಮ್ಮವರು ಎನ್ನುವ ಭಾವನೆಯನ್ನು ಮೂಡಿಸುವುದರಿಂದ ಎಲ್ಲರೂ ನಮ್ಮವರಾಗುತ್ತಾರೆ.

ಭ್ರಷ್ಟ ದಾರಿಯಲ್ಲಿ ಕೊಳ್ಳೆ ಹೊಡೆದು ಸಂಪಾದಿಸಿರುವ ಶ್ರೀಮಂತರು ಹೆಸರು ಮಾಡುವುದಕ್ಕಾಗಿ ಅನಾಥಾಲಯಗಳಿಗೆ, ಬಡ–ಬಗ್ಗರಿಗೆ ಸಹಾಯ ಮಾಡುವ ನೆಪದಲ್ಲಿ ದಾನಶೂರ ಕರ್ಣನೆಂದು ಪ್ರಚಾರ ಪಡೆಯುವರು, ಪರಿಸರವಾದಿಗಳೆಂದು ಗಿಡ ನೆಟ್ಟು ಮುಖವರಳಿಸಿ ಪತ್ರಿಕೆಗಳ ಛಾಯಾಗ್ರಾಹಕರಿಗೆ ಪೋಸ್ ಕೊಡುವ ಜನ, ನಾಳೆಗೆ ಗಿಡ ಒಣಗುತ್ತಿದ್ದರೂ ನೀರು ಹಾಕಲು ಯಾರೂ ಬರುವುದಿಲ್ಲ. ಇವರು ಪತ್ರಿಕೆಗಳಲ್ಲಿ ಮತ್ತು ಟಿವಿಗಳಲ್ಲಿ ಸಮಾಜ ಸುಧಾರಕರಂತೆ ದಾನಧರ್ಮಗಳ ಹೆಸರಲ್ಲಿ ತಮ್ಮ ಭಾವಚಿತ್ರ ಬರುವಂತೆ ನೋಡಿಕೊಳ್ಳುತ್ತಾರೆ.

ಕೆಲವರು ಸಂಘ–ಸಂಸ್ಥೆಗಳಿಗೆ ಹಣ ಕೊಟ್ಟು ಆಗಿಂದಾಗ್ಗೆ ಸನ್ಮಾನ ಮಾಡಿಸಿಕೊಳ್ಳುತ್ತಿರುತ್ತಾರೆ. ಹೀಗೆ ತೆರೆಯ ಹಿಂದೆ ಹಣ ಕೊಟ್ಟು ಸನ್ಮಾನಿಸಿಕೊಳ್ಳುವ ಬಹಳಷ್ಟು ಗಣ್ಯರು ನಮ್ಮ, ನಿಮ್ಮ ನಡುವೆ ಇದ್ದಾರೆ. ಹೀಗೆ ಟೀವಿ ಚಾನೆಲ್, ಪತ್ರಿಕೆಗಳಲ್ಲಿ ಗಿಮಿಕ್ ಮಾಡುವ ಶ್ರೀಮಂತರು ಯಾವತ್ತೂ ನಮ್ಮವರಾಗಲು ಸಾಧ್ಯವಿಲ್ಲ. ಅವರು ಸ್ವಹಿತಕ್ಕಾಗಿ ಬಂಡವಾಳ ಹೂಡಿಕೆ ಮಾಡುತ್ತಾರೆ, ಹಾಕಿದ ಬಂಡವಾಳಕ್ಕಿಂತ ಹೆಚ್ಚು ಹೆಸರು ಮತ್ತು ಹಣ ಸಂಪಾದಿಸಲು ಬೇಕಿರುವ ಎಲ್ಲ ಪ್ರಯತ್ನವನ್ನು ಮಾಡುತ್ತಿರುತ್ತಾರೆ.

ಕಷ್ಟ ನಮಗೆ ಬುದ್ದಿಯನ್ನು ಕಲಿಸಿಕೊಡುತ್ತದೆ. ಇದು ಬದುಕಿಗೆ ಬೇಕಿರುವ ಎಲ್ಲವನ್ನೂ ಕಲಿಸಿಕೊಡುವ ವಿಶ್ವವಿದ್ಯಾಲಯ. ಯಾರು ಒಳ್ಳೆಯವರು, ಯಾರು ಕೆಟ್ಟವರು ಇತ್ಯರ್ಥವಾಗುವುದು ಮನುಷ್ಯನಿಗೆ ಕಷ್ಟಗಳು ಬಂದಾಗಲೇ. ಒಳ್ಳೆಯವರಾದರೆ ಸಹಾಯಕ್ಕೆ ಬರುತ್ತಾರೆ, ಬರದಿದ್ದವರು ಕೆಟ್ಟವರಾಗುತ್ತಾರೆ. ಎಲ್ಲರನ್ನೂ ಕೆಟ್ಟವರೆಂದು ನಿರ್ಧರಿಸಲಾಗದು ಏಕೆಂದರೆ ಅವರಿಗೂ ಅವರದೇ ಆದ ಬದುಕಿನ ಜಂಜಾಟಗಳು ಇರುತ್ತವೆ.

> ಕಷ್ಟಕ್ಕಾಗುವವನೇ ನೆಂಟ, ಒಂದೇ ಮನೆಯೊಳಗೆ ಇದ್ದರೂ ಕಾಯಿಲೆ ಬಿದ್ದಾಗ, ದುಡಿಯಲು ಸಾಧ್ಯವಾಗದೆ ಮೂಲೆಯಲ್ಲಿ ಕುಳಿತಿರುವಾಗ ತಿರುಗಿಯೂ ನೋಡದ ಗಂಡ–ಹೆಂಡತಿ ಅಥವಾ ಮಕ್ಕಳು ನಮ್ಮವರು ಹೇಗಾಗುತ್ತಾರೆ?. ವೃದ್ಧಾಪ್ಯದಲ್ಲಿ ಮನೆಯಲ್ಲಿ ಇಟ್ಟುಕೊಳ್ಳದೆ ವೃದ್ಧಾಶ್ರಮಕ್ಕೆ ಕಳುಹಿಸುವ ಮಗ–ಸೊಸೆಯನ್ನು ನಮ್ಮವರು ಎನ್ನಲಾಗುವುದೇ?.

ನಂಬಿಕೆಯೇ ನಮ್ಮನ್ನು ಬದುಕುವಂತೆ ಮಾಡುವುದು. ನಂಬಿರುತ್ತೇವೆ ನೆರೆಹೊರೆಯವರು ನಮ್ಮವರೆಂದು, ನಂಬಿರುತ್ತೇವೆ ಹೆಂಡತಿ ಮಕ್ಕಳು ನಮ್ಮವರೆಂದು, ಕೆಲವೊಮ್ಮೆ ಆ ನಂಬಿಕೆ ಹುಸಿ ಆಗುವುದು. ಕಷ್ಟದ ಸಮಯದಲ್ಲಿ ಆಗದವರು, ಸಾಯುವ ಗಳಿಗೆಯಲ್ಲಿ ಬಾಯಿಗೆ ಒಂದು ತೊಟ್ಟು ನೀರು ಬಿಡದವರು ನಮ್ಮವರು ಹೇಗಾಗುತ್ತಾರೆ?.

ನಗುವಾಗ ಎಲ್ಲಾ ನೆಂಟರು, ಅಳುವಾಗ ಯಾರೂ ಇಲ್ಲ. ನಮ್ಮ ಮನೆಯ ಹೊರಳು ಕಲ್ಲು ಆಡುವಾಗ ಊರೆಲ್ಲ ನೆಂಟರು. ಸ್ನೇಹಿತನೆಂದು ನಿಮ್ಮ ಜೊತೆ ಸುಳಿದಾಡುತ್ತಿರುವ ವ್ಯಕ್ತಿಯ ಬಳಿ ಒಮ್ಮೆ ಅವನ ಸಾಮರ್ಥ್ಯಕ್ಕೆ ಅನುಸಾರವಾಗಿ ಒಂದಷ್ಟು ಹಣವನ್ನು ಸಾಲ ಕೇಳಿ ನೋಡಿ, ಅವನು ಪ್ರತಿಕ್ರಿಯಿಸುವ ರೀತಿಯಲ್ಲೇ ನಮ್ಮವನೋ ಅಲ್ಲವೋ ಎಂಬುದನ್ನು ನಿರ್ಧರಿಸಬಹುದು(ಸಾಲ ಕೇಳಿ ಸ್ನೇಹ ಕಳೆದುಕೊಳ್ಳುವುದು ಬೇಡ).

ನಮ್ಮೆದುರಿಗೆ ಇದ್ದಾಗ ನಮ್ಮನ್ನು ಹಾಡಿ ಹೊಗಳಿ, ಇಲ್ಲದವರ ಬಗ್ಗೆ ನಮ್ಮ ಬಳಿ ತೆಗಳುವ ವ್ಯಕ್ತಿ ಎಂದಿಗೂ ನಮ್ಮವನಾಗಲು ಸಾಧ್ಯವಿಲ್ಲ. ನಮಗಷ್ಟೇ ಅಲ್ಲ ಬೇರೆಯವರಿಗೂ ಆತ ಬೇಕಾದ ವ್ಯಕ್ತಿ ಆಗಲಾರ. ಇಂತಹ ವ್ಯಕ್ತಿಗಳು ನಾವು ಇಲ್ಲದಿರುವ ಸಮಯದಲ್ಲಿ ಬೇರೆಯವರೊಟ್ಟಿಗೆ ನಮ್ಮ ಬಗ್ಗೆಯೂ ಮಾತನಾಡಿರುತ್ತಾರೆ. ಒಬ್ಬರ ಕುರಿತು ಇರುವುದೆಲ್ಲವನ್ನು ಮಾತನಾಡಿ ಕಡೆಗೆ ಅಯ್ಯೋ ಬೇರೆಯವರ ವಿಷ್ಯ ನಮಗೇಕೆ ಎನ್ನುವವರನ್ನು ಯಾವತ್ತೂ ನಂಬಬಾರದು.

ಹುಟ್ಟು ಮತ್ತು ಸಾವು ಎರಡರಲ್ಲೂ ಏಕಾಂಗಿಗಳಾದ ನಾವುಗಳು ನಡುವಿನ ಬದುಕಿನಲ್ಲಿ ಸಹಜೀವಿಗಳು, ಒಬ್ಬರಿಗೊಬ್ಬರು ಆಸರೆಯಾಗಿ ಬದುಕಬೇಕಾಗುತ್ತದೆ. ಆಸರೆ ನೀಡಿದವರು ಪ್ರತಿಫಲವನ್ನು ನಿರೀಕ್ಷಿಸಿ ಸಹಾಯ ಮಾಡಬಾರದು. ನಿರೀಕ್ಷಣೆಯಲ್ಲಿ ನೋವಿದೆ, ಅಂದುಕೊಂಡದ್ದು ಆಗದಿದ್ದರೆ ಮನಸ್ಸಿಗೆ ನೋವು ಆಗುವುದು. ಬದುಕೇ ಹಾಗೆ, ಊರಿಗೆ ಹೋಗಲು ಬಸ್ಸಿಗೆ ಕಾಯುತ್ತಿರುತ್ತೇವೆ. ಬಸ್ಸುಗಳು ಒಂದಾದ ಮೇಲೆ ಒಂದು ಬರುತ್ತಲೇ ಇರುತ್ತವೆ. ಆದರೆ ನಾವು ಹೋಗುವ ಊರಿನ ಕಡೆಗೆ ಬಸ್ಸುಗಳು ಬರುವುದೇ ಇಲ್ಲ. ಬಂದರೂ ಸರಿಯಾದ ಸಮಯಕ್ಕೆ ಬರದೆ ಯಾವಾಗಲೋ ಬರುವುದುಂಟು.

ನಮ್ಮ ಬದುಕು ಪೂರ್ವಯೋಜಿತ ಕಾರ್ಯಕ್ರಮ ಇದ್ದಂತೆ. ಆಯಾಯ ಕಾಲಕ್ಕೆ ಅದು ನಡೆಯುತ್ತಿರುತ್ತದೆ. ಅಂದುಕೊಳ್ಳುವುದು ಖಂಡಿತ ಆಗುವುದಿಲ್ಲ. ಇಷ್ಟಾಗಿಯೂ ಎಲ್ಲಾ ಆಯಾಮಗಳಿಂದಲೂ ಸಂಪಾದಿಸಿ ಕೂಡಿಡುತ್ತೇವೆ. ಕೂಡಿಟ್ಟಿದ್ದೆಲ್ಲವನ್ನು ತಿಂದು ಜೀರ್ಣಿಸಿಕೊಳ್ಳುವುದಕ್ಕೆ ಆಗುವುದಿಲ್ಲ.

'ಎಷ್ಟು ನೀನುಡರೇಂ– ಪುಷ್ಟಿ ಮೈಗಾಗುವುದು ಹೊಟ್ಟೆ ಜೀರ್ಣಿಸುವಷ್ಟೆ: ಮಿಕ್ಕುದೆಲ್ಲ ಕಸ ಎಷ್ಟು ಗಳಿಸಿಟ್ಟೊಡಂ ನಿನಗೆ ದಕ್ಕುವುದೆಷ್ಟು, ಮುಷ್ಟಿ ಪಿಷ್ಟವು ತಾನೆ? –ಮಂಕುತಿಮ್ಮ.

ಡಿವಿಜಿಯವರು ಸೊಗಸಾಗಿ, ಅರ್ಥಗರ್ಭಿತವಾಗಿ ಹೇಳಿರುವುದು ಬದುಕಿನ ವಾಸ್ತವಕ್ಕೆ ಸಮೀಪ ಎನ್ನುವುದಕ್ಕಿಂತ ಬದುಕಿ ನೊಳಗೇ ಅಡಗಿದೆ. ನೀನೆಷ್ಟು ಊಟ ಮಾಡಿದರೂ ನೀನು ಎಷ್ಟು ಜೀರ್ಣಿಸಿಕೊಳ್ಳಲು ಸಾಧ್ಯವೋ ಅಷ್ಟು ಮಾತ್ರ ನಿನ್ನ ದೇಹಕ್ಕೆ ಸೇರಿ ಶಕ್ತಿ ಆಗುವುದು. ಉಳಿದ ಊಟವೆಲ್ಲ ಕಸವಾಗಿ ದೇಹದ ಹೊರಕ್ಕೆ ಬರುವುದು. ಕಸವಾಗಿ ಹೊರಕ್ಕೆ ಬಂದರೆ ಒಳ್ಳೆಯದೇ ಆದರೆ ತಿಂದ ಹೆಚ್ಚುವರಿ ಊಟ ದೇಹದೊಳಗೆ ರೋಗವಾಗಿ ಕುಳಿತರೆ ಕಷ್ಟ. ಹಾಗೆಯೇ ನೀನು ಎಷ್ಟು ಸಂಪಾದಿಸಿ ಕೂಡಿಟ್ಟರೂ, ನಿನಗೆ ದೊರ ಕುವುದು ಒಂದು ಹಿಡಿ ಅನ್ನವಷ್ಟೆ ಮಿಕ್ಕಿದ್ದು ದನ್ನು ಇನ್ಯಾರೋ ಅನುಭವಿಸುತ್ತಾರೆ.

ಬದುಕು ಮುಷ್ಟಿ ಅನ್ನದಲ್ಲಿ ಅಡಗಿರುವುದರಿಂದ ಸುಖ ಪಡೆಯಲು ಅದಕ್ಕಿಂತ ಹೆಚ್ಚು ಇನ್ನೇನು ಬೇಕು! ಇರುವಷ್ಟು ಕಾಲ ನಮ್ಮವರಾಗಿ, ಇನ್ನೊಬ್ಬರ ಜೀವನಕ್ಕೆ ಆಧಾರವಾಗಿ ಜೀವಿಸುವುದು ಎಷ್ಟು ಸೊಗಸು. ಆಧುನಿಕತೆಯು ಮನುಷ್ಯನನ್ನು ಹೆಚ್ಚು ಸ್ವಾರ್ಥಿಯನ್ನಾಗಿ ಮಾಡುತ್ತಿದೆ. ಸ್ವಾರ್ಥತೆಯ ಪರಿಣಾಮ ಲಾಭದಾಯಕವಲ್ಲದ ಕೃಷಿಯನ್ನು ತ್ಯಜಿಸಿ ಹಳ್ಳಿಯ ಜನರು ಪಟ್ಟಣಗಳತ್ತ ಗುಳೇ ಹೊರಟಿದ್ದಾರೆ. ನಗರಗಳ ವಾತಾವರಣ ಕಾರ್ಖಾನೆಗಳು ಮತ್ತು ವಾಹನಗಳು ಉಗುಳುವ ಹೊಗೆಯಿಂದ ಮಾಲಿನ್ಯಗೊಂಡು ಉಸಿರಾಡುವುದಕ್ಕೆ ಕಷ್ಟವಾಗಿದೆ.

ಕೊರೊನಾ ಒಂದು ಹಂತಕ್ಕೆ ಜನರಿಗೆ ಬುದ್ದಿ ಕಲಿಸಿದೆ. ಹಳ್ಳಿಯಿಂದ ದಿಲ್ಲಿಗೆ ಹೋಗಿದ್ದವರನ್ನು ಮತ್ತೇ ತನ್ನ ಹಳ್ಳಿಗೆ ಕಳುಹಿಸಿದೆ. ಇನ್ನಾದರೂ ಹಳ್ಳಿಯ ಬದುಕನ್ನು ಅಪ್ಪಿಕೊಳ್ಳುವುದು ಅನಿವಾರ್ಯ ಆಗಬೇಕಿದೆ.

ನಮ್ಮವರೊಂದಿಗೆ ನಮ್ಮವರಾಗಿ ಹಳ್ಳಿಗಳಲ್ಲೇ ಬದುಕು ಕಟ್ಟಿಕೊಂಡು ಶುದ್ದ ಗಾಳಿ ಸೇವಿಸುತ್ತಾ ಹೊಲಗದ್ದೆಗಳಲ್ಲಿನ ಹಸಿರನ್ನು ಕಣ್ತುಂಬಿಕೊಂಡು ಆರೋಗ್ಯವಾಗಿ ಇದ್ದುಕೊಂಡು ಮನೆಯ ಮುಂದಿನ ಜಗುಲಿ ಕಟ್ಟೆಯ ಮೇಲೆ ಕುಳಿತು ಸ್ನೇಹಿತರು ಬಂಧು–ಬಾಂಧವರೊಂದಿಗೆ ಇವರು ನಮ್ಮವರೆಂದು ಒಪ್ಪಿ ಹರಟುವ ಮಜಾಕ್ಕಿಂತ ಬೇರೆ ಏನಿದೆ ಈ ಜೀವನದಲ್ಲಿ?.

'ನಿಜ ಮಹಾತ್ಮ ಬಾಬಾ ಸಾಹೇಬ' ನಾಟಕ ಇತಿಹಾಸದ ವಾಸ್ತವಾಂಶ ತೆರೆದಿಡುವ ಪ್ರಾಮಾಣಿಕ ಪ್ರಯತ್ನ

- ನಾಟಕ ರಚನೆಕಾರ, ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಸಮರ್ಥನೆ
- ಈ ನಾಟಕ ಯಾರ ಪರವೂ ಅಲ್ಲ; ಯಾರ ವಿರುದ್ಧವೂ ಅಲ್ಲ: ನಾಟಕ ಸಂಬಂಧ ಪತ್ರಕರ್ತರೊಂದಿಗೆ ಸಂವಾದದಲ್ಲಿ ಸ್ಪಷ್ಟನೆ

ಮೈಸೂರು, ಅ.9(ಎಂಕೆ)– ಭಾರತ ಸಂವಿಧಾನದ ಆರ್ಟಿಕಲ್ 19ರ ಅಭಿವ್ಯಕ್ತಿ ಸ್ವಾತಂತ್ರ್ಯದ ಆಧಾರದ ಮೇಲೆ 'ನಿಜ ಮಹಾತ್ಮ ಬಾಬಾ ಸಾಹೇಬ' ನಾಟಕ ಪ್ರದರ್ಶಿಸಲಾಗುತ್ತಿದ್ದು, 'ಮಹಾತ್ಮ ಮತ್ತು ನಿಜ ಮಹಾತ್ಮ'ರ ಮುಖಾಮುಖಿಯೊಂದಿಗೆ ಇತಿಹಾಸದ ವಾಸ್ತವಾಂಶವನ್ನು ತೆರೆದಿಡುವ ಪ್ರಯತ್ನ ಮಾಡಲಾಗಿದೆ ಎಂದು ಹಿರಿಯ ರಂಗಕರ್ಮಿ ಹಾಗೂ ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಹೇಳಿದರು.

ಮೈಸೂರಿನ ಬೋಗಾದಿಯಲ್ಲಿರುವ ಹರಿವಿದ್ಯಾಲಯದಲ್ಲಿ ಪತ್ರಕರ್ತರೊಂದಿಗೆ 'ನಿಜ ಮಹಾತ್ಮ ಬಾಬಾ ಸಾಹೇಬ' ನಾಟಕ ಕುರಿತು ಗುರುವಾರ ಸಂವಾದ ನಡೆಸಿದ ಅವರು, ವೈಚಾರಿಕ ಸಿದ್ಧಾಂತದ ಆಧಾರದ ಮೇಲೆ ರೂಪಿತವಾಗಿರುವ ಈ ನಾಟಕವು ಯಾವುದೇ ವ್ಯಕ್ತಿ, ಪಕ್ಷ ಅಥವಾ ಮತ್ತ್ಯಾರದೋ ವಿರುದ್ಧ ಹಾಗೂ ಪರವಲ್ಲ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಎರಡನೇ ಪತ್ನಿ ಡಾ.ಸವಿತಾ ಅಂಬೇಡ್ಕರ್ ಅವರ 'ಡಾ.ಅಂಬೇಡ್ಕರ್ ಸಹವಾಸದಲ್ಲಿ', ಡಾ.ಅಂಬೇಡ್ಕರ್ ಅವರೇ ಬರೆದಿರುವ 'ಥಾಟ್ಸ್ ಆನ್ ಪಾಕಿಸ್ತಾನ್', ನಾನಕ್ ಚಂದ್ ರತ್ತು(ವಿಜಯ ನರಸಿಂಹ) ಅವರ 'ಡಾ.ಬಾಬಾ ಸಾಹೇಬರ ಕೊನೆಯ ದಿನಗಳು', ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ 'ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಸಮಗ್ರ ಬರಹದ 22 ಸಂಪುಟಗಳು', ಅಂಬೇಡ್ಕರ್ ಭಾಷಣ, ಪುಸ್ತಕ, ಟಿಪ್ಪಣಿ, ದಲಿತ ಚಳವಳಿ, ಡಾ.ಕೇಶವ್ ಬಲಿರಾಂ ಹೆಡ್ಗೆವಾರ್ ಹೇಳಿಕೆಗಳು ಸೇರಿದಂತೆ ಅಂಬೇಡ್ಕರ್ ಕುರಿತ 30ಕ್ಕೂ ಹೆಚ್ಚು ಕೃತಿಗಳನ್ನು ಅಧ್ಯಯನ ನಡೆಸಿ, ಈ ನಾಟಕ ರೂಪಿಸಲಾಗಿದೆ ಎಂದು ತಿಳಿಸಿದರು.

ನಿಜವಾಗಿ ಅಂಬೇಡ್ಕರ್ ಅವರ ನಿಲುವು ಏನಾಗಿತ್ತು? ಅವರಿಗಾದ ದ್ರೋಹ ಏನು ಎಂಬುದನ್ನು ತೆರೆದಿಡುವ ಪ್ರಯತ್ನ ಇದಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಆಧಾರದ ಮೇಲೆ ಈ ನಾಟಕವನ್ನು ಪ್ರಸ್ತುತಪಡಿಸಲಾಗುತ್ತಿದ್ದು, ಅಂಬೇಡ್ಕರ್ ಅವರ ಹೆಸರೇಳಿಕೊಂಡು ಅಧಿಕಾರ ನಡೆಸುವವರು, ಏನೆಲ್ಲಾ ಮಾಡಿದ್ದಾರೆ. ಯಾವ ಯಾವ ವಿಷಯವನ್ನು ಮುಚ್ಚಿಟ್ಟಿದ್ದಾರೆ. ಆರ್‌ಎಸ್‌ಎಸ್ ಕುರಿತು ಅಂಬೇಡ್ಕರ್ ಅವರಿಗಿದ್ದ ಅಭಿಪ್ರಾಯವೇನು? ಅವರೇಕೆ ಬೈಠಕ್‌ನಲ್ಲಿ ಪಾಲ್ಗೊಂಡು ಹೆಡ್ಗೆವಾರ್ ಅವರೊಂದಿಗೆ ಸಂವಾದ ನಡೆಸಿದರು ಎಂಬಿತ್ಯಾದಿ ವಿಷಯವನ್ನು ಈ ನಾಟಕದ ಮೂಲಕ ತಿಳಿಸಿ ಕೊಡುವುದಾಗಿ ಹೇಳಿದರು.



'ನಿಜಮಹಾತ್ಮ ಬಾಬಾ ಸಾಹೇಬ' ನಾಟಕ ಕುರಿತು ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಪತ್ರಕರ್ತರೊಂದಿಗೆ ಸಂವಾದ ನಡೆಸಿದರು. ಹರಿ ವಿದ್ಯಾಲಯ ಸಂಸ್ಥೆ ಕಾರ್ಯದರ್ಶಿ ಪ್ರೊ.ಭಗವಾನ್ ಉಪಸ್ಥಿತರಿದ್ದರು.

ದೆಹಲಿಯಲ್ಲಿ ಅಂಬೇಡ್ಕರ್‌ಗೆ ಜಾಗ ಕೊಡಲಿಲ್ಲ!: ನೆಹರು ಮತ್ತು ಕಾಂಗ್ರೆಸ್‌ನವರು ಅಂಬೇಡ್ಕರ್ ಅವರನ್ನು ತುಳಿದರು. ಬೌದ್ಧ ಬಿಕ್ಕು ಭೋಂಸ್ಲೇ ಅವರು ಬರೆದ 'ಲಾಸ್ಟ್ ಡೇಸ್' ನಲ್ಲಿಯೂ ಅನೇಕ ಉಲ್ಲೇಖಿತ ಅಂಶವಿದೆ. ಅಂಬೇಡ್ಕರ್ ಮೃತರಾದ ವಿಷಯವನ್ನು ನೆಹರುಗೆ ತಿಳಿಸಿದಾಗಲೂ ಅವರು ಈಗ ಬರುತ್ತೇನೆ... ಆಗ ಬರುತ್ತೇನೆ... ಎಂದು ವಿಷಯಾಂತರ ಮಾಡುತ್ತಾರೆಯೇ ಹೊರತು ಅವರಿಗೆ ಸೂಕ್ತ ಗೌರವ ನೀಡುವುದಿಲ್ಲ. ದೆಹಲಿಯಲ್ಲಿ ಅವರ ಅಂತ್ಯಕ್ರಿಯೆಗೆ ಜಾಗ ಕೇಳಿದಾಗಲೂ ಕೊಡುವುದಿಲ್ಲ. ಈಗಲೂ ರಾಜ್‌ಘಾಟ್‌ನಲ್ಲಿ ಗಾಂಧೀಜಿ, ನೆಹರು, ಇಂದಿರಾಗಾಂಧಿ, ರಾಜೀವ್ ಗಾಂಧಿ ಅವರ ಸಮಾಧಿ ಮಾತ್ರ ಇದೆ. ಅಂಬೇಡ್ಕರ್‌ಗೆ ಯಾಕೆ ಜಾಗ ಕೊಡಲಿಲ್ಲ ಎಂದು ಪ್ರಶ್ನಿಸಿದರಲ್ಲದೆ ಬರೀ ಓಟು ಮತ್ತು ನೋಟಿಗಾಗಿ ನಮ್ಮ ರಾಜಕಾರಣಿಗಳು ಅಂಬೇಡ್ಕರ್ ಅವರಿಗೆ ಮೋಸ ಮಾಡುತ್ತಿದ್ದಾರೆ ಎಂದರು.

> ನಾಟಕ ಪ್ರದರ್ಶನಕ್ಕೂ ಮುನ್ನ ಈ ಕೃತಿ ಪ್ರೇಕ್ಷಕರ ಕೈಗೆ ಸಿಗಬೇಕು ಎಂಬುದು ನಮ್ಮ ಉದ್ದೇಶ. ಈ ನಿಟ್ಟಿನಲ್ಲಿ ಮೊದಲು ಕೃತಿ ಬಿಡುಗಡೆ ಮಾಡಿದ್ದೇವೆ. ಅಂಬೇಡ್ಕರ್ ಅವರು ಬರೆದ ಥಾಟ್ಸ್ ಆನ್ ಪಾಕಿಸ್ತಾನ್ ಮಹತ್ವದ ಕೃತಿ ಎನಿಸುತ್ತದೆ. ಅಂಬೇಡ್ಕರ್ ಅವರು ದೇಶ ವಿಭಜನೆ ಕುರಿತು ಹೊಂದಿದ್ದ ನಿಲುವು ಈ ಕೃತಿಯಿಂದ ಸ್ಪಷ್ಟವಾಗುತ್ತದೆ. 1956ರಲ್ಲಿ ದಲಿತ ಚಳವಳಿ ಬರುವವರೆಗೆ ಕಾಂಗ್ರೆಸ್‌ನವರು ಅಂಬೇಡ್ಕರ್ ಅವರ ಹೆಸರಾಗಲಿ, ಫೋಟೋ ಆಗಲಿ ಬಳಸುತ್ತಿರಲಿಲ್ಲ ಎಂಬುದೂ ಕೂಡ ಅಷ್ಟೇ ಸತ್ಯ. 'ನಿಜ ಮಹಾತ್ಮ ಬಾಬಾ ಸಾಹೇಬ' ನಾಟಕವನ್ನು ಮೊದಲು ಮೈಸೂರಲ್ಲಿ ಪ್ರದರ್ಶಿಸಿ, ಬಳಿಕ ರಾಜ್ಯದ ಬೇರೆ ಬೇರೆ ಕಡೆ ಪ್ರದರ್ಶಿಸುತ್ತೇವೆ. ರಾಜ್ಯವನ್ನು 4 ಭಾಗವಾಗಿ ವಿಂಗಡಿಸಿಕೊಂಡು ಪ್ರದರ್ಶಿಸಲಾಗುವುದು.
>
> –ಅಡ್ಡಂಡ ಸಿ.ಕಾರ್ಯಪ್ಪ, ಮಾಜಿ ನಿರ್ದೇಶಕ, ರಂಗಾಯಣ

ರಾಷ್ಟ್ರೀಯತವಾದಿ–ಮಾನವತಾವಾದಿಯ ಸಮ್ಮಿಲನ: ಆರ್‌ಎಸ್‌ಎಸ್ ಎಂದರೆ ಬ್ರಾಹ್ಮಣರ ಸಂಘ ಎಂದೇ ತಿಳಿದಿದ್ದ ಅಂಬೇಡ್ಕರ್ ಅವರು 1939ರಲ್ಲಿ ಆರ್‌ಎಸ್‌ಎಸ್ ಬೈಠಕ್‌ಗೆ ಹೋಗುತ್ತಾರೆ. ಅಲ್ಲಿ ಎಲ್ಲಾ ಮಕ್ಕಳನ್ನು ಪರಿಚಯ ಮಾಡಿಕೊಂಡು ಅವರ ಬಗ್ಗೆ ವಿಚಾರಿಸಿದಾಗ ಅಲ್ಲಿ ಎಲ್ಲಾ ಜಾತಿಯ ಮಕ್ಕಳೂ ಇದ್ದಾರೆ ಎಂಬುದು ಅವರಿಗೆ ತಿಳಿಯುತ್ತದೆ. ನಂತರ ಹೆಗ್ಡೆವಾರರ ಜತೆ ಸಂವಾದ ನಡೆಸುತ್ತಾರೆ. ನಾಟಕದಲ್ಲಿನ ಈ ಸಂದರ್ಭಕ್ಕೆ ರಾಷ್ಟ್ರೀಯತವಾದಿ ಮತ್ತು ಮಾನವತಾವಾದಿಯ ಸಮ್ಮಿಲನ ಎಂದು ಹೆಸರಿಸಲಾಗಿದೆ. ಹಾಗೆಯೇ ಸಂವಿಧಾನ ಸಭೆಯಲ್ಲಿ ನಡೆದ ಸಂಭಾಷಣೆಗಳು, ಪ್ರಶ್ನೆಗಳ ಸುರಿಮಳೆಗೆ ಅಂಬೇಡ್ಕರ್ ಅವರ ಉತ್ತರವೇನು ಎಂಬುದನ್ನು ಸನ್ಮಾನ–ಅವಮಾನಗಳ ಅಲೆಯಲ್ಲಿ ಎಂದು ಉಲ್ಲೇಖಿಸಿದ್ದೇನೆ. ಅಂಬೇಡ್ಕರ್ ಚುನಾವಣೆಗೆ ಸ್ಪರ್ಧಿಸಿದಾಗ ಅವರ ವಿರುದ್ಧ ನೆಹರು ಪ್ರಚಾರ ಮಾಡುತ್ತಾರೆ. ಆರ್‌ಎಸ್‌ಎಸ್ ಅಂಬೇಡ್ಕರ್ ಅವರನ್ನು ಬೆಂಬಲಿಸುತ್ತದೆ. ಇಂತಹ ಅನೇಕ ಮುಚ್ಚಿಟ್ಟ ಸತ್ಯಗಳನ್ನು ಪ್ರೇಕ್ಷಕರ ಮುಂದಿಡುವ ಪ್ರಯತ್ನವನ್ನು ಈ ನಾಟಕದ ಮೂಲಕ ಮಾಡಿದ್ದೇವೆ ಎಂದರು.

ಇತಿಹಾಸ ತಿಳಿಸಬೇಕು: ಸಂವಾದದಲ್ಲಿ ಭಾಗವಹಿಸಿದ್ದ ಹರಿ ವಿದ್ಯಾಲಯ ಸಂಸ್ಥೆ ಕಾರ್ಯದರ್ಶಿ ಪ್ರೊ.ಭಗವಾನ್ ಮಾತನಾಡಿ, ಅಡ್ಡಂಡ ಕಾರ್ಯಪ್ಪ ಅವರ ಅನೇಕ ನಾಟಕಗಳನ್ನು ನೋಡಿದ್ದೇನೆ. ಇತಿಹಾಸದ ಅನೇಕ ಸಂಗತಿಗಳು ನಮ್ಮ ಮಕ್ಕಳಿಗೂ ತಿಳಿಯಲಿ ಎಂಬ ಕಾರಣಕ್ಕೆ ಇಲ್ಲಿಯೇ ತರಬೇತಿ ನೀಡಲಾಗುತ್ತಿದೆ. ಅದಕ್ಕೆ ಬೇಕಾದ ಸಹಕಾರವನ್ನು ನೀಡಲಾಗಿದೆ ಎಂದು ತಿಳಿಸಿದರು.

ಅ.13ರಿಂದ ನಾಟಕ ಪ್ರದರ್ಶನ...

ಮೈಸೂರು ಕಲಾಮಂದಿರದ ಕಿರುರಂಗಮಂದಿರದಲ್ಲಿ ಅ.13, 14 ಮತ್ತು 16ರಂದು ಸಂಜೆ 6.30ಕ್ಕೆ ಕಿರುರಂಗಮಂದಿರದಲ್ಲಿ 'ನಿಜಮಹಾತ್ಮ ಬಾಬಾ ಸಾಹೇಬ' ನಾಟಕ ಪ್ರದರ್ಶನ ಆಯೋಜಿಸಲಾಗಿದೆ. ಅದಕ್ಕೂ ಮುನ್ನ ಅ.11ರಂದು ಹರಿ ವಿದ್ಯಾಲಯದಲ್ಲಿ ಕೆಲ ಆಹ್ವಾನಿತರ ವೀಕ್ಷಣೆಗೆ ನಾಟಕದ ರಿಹರ್ಸಲ್ ನಡೆಯಲಿದೆ. –ಅಡ್ಡಂಡ ಕಾರ್ಯಪ್ಪ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಪುಣ್ಯಸ್ಮರಣೆ



ಶ್ರೀಮತಿ ಪುಟ್ಟತಾಯಮ್ಮ ಉ/ ಬೋರಮ್ಮ
ನಿಧನ : 02-10-2024
ನೀವು ನಮ್ಮನ್ನು ಅಗಲಿ 1 ವರ್ಷ ಕಳೆದರು



ಯ|| ಛೇ|| ಶ್ರೀ ಎಂ.ಜೆ. ಸಿದ್ದೇಗೌಡರು
ನಿಧನ : 10-10-2002
ನೀವು ನಮ್ಮನ್ನು ಅಗಲಿ 23 ವರ್ಷ ಕಳೆದರು

ನಿಮ್ಮ ನೆನಪು ನಮ್ಮೆಲ್ಲರ ಮನದಲ್ಲಿ ಅಚ್ಚು-ಹಸಿರಾಗಿದೆ
ನಿಮ್ಮ ಆತ್ಮಕ್ಕೆ ಪರಮಾತ್ಮನ್ನು ಚಿರಶಾಂತಿ ಕುರುಣಿಸಲಿ

ಸದಾ ನಿಮ್ಮ ಸ್ಮರಣೆಯಲ್ಲಿರುವ :
ಶ್ರೀಮತಿ ಶಾರದ ಮತ್ತು ಶ್ರೀ ಎಂ.ಎಸ್. ಗಂಗಾಧರ್
ಶ್ರೀಮತಿ ಸಾವಿತ್ರಮ್ಮ ಮತ್ತು ಶ್ರೀ ಎಂ.ಎಸ್. ಜಗದೀಶ್ ಪಿ.ಎ.ಸಿ.ಎಸ್. ಅಧ್ಯಕ್ಷರು, ಎಂ.ಪಿ.ಸಿ.ಸಿ. ಅಧ್ಯಕ್ಷರು (ಮಾಜಿ ಗ್ರಾ.ಪಂ.ಸದಸ್ಯರು)
ಶ್ರೀಮತಿ ಪುಷ್ಪಲತಾ ಜೆ. ಮತ್ತು ಶ್ರೀ ಎಂ.ಎಸ್. ಏಕಾಂಬರೀಶ್ (ಮಾಲೀಕರು, ವೈಷ್ಣವಿ & ಸಾನ್ವಿ ಲೇಔಟ್)
ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕಳು ಹಾಗೂ ಕುಟುಂಬ ವರ್ಗದವರು ಮರಟಿಕ್ಯಾತನಹಳ್ಳಿ ಗ್ರಾಮ

16ನೇ ವರ್ಷದ ಸವಿನೆನಪು



ನಾಗೇಂದ್ರ (ಗುಂಡು)
ದುಃಖತಪ್ತರು: ಮರ್ಕಿ ಮಹದೇವ, ಸರೋಜ & ಕುಟುಂಬ ವರ್ಗ ಹಾಗೂ ಸ್ನೇಹಿತರು, ಕೆ.ಜಿ.ಕೊಪ್ಪಲು

6ನೇ ವರ್ಷದ ಸವಿನೆನಪು



ಪಾರ್ವತಿ ಶಂಕರ
ನಿಧನ 10-10-2019

ನೀವು ನಮ್ಮನ್ನಗಲಿ 5 ವರ್ಷಗಳಾಗಿವೆ. 6ನೇ ವರ್ಷದ ಸವಿ ನೆನಪಿಗಾಗಿ ನಾವು ಮುಂದೆ ನಮ್ಮ ನೆನಪಿನ ದಾರಿಯಾಗಿ ಸಾಗಲು ದಾರಿದೀಪವಾಗಿದ್ದಿರೆಂದು ಆಶಿಸುತ್ತೇವೆ.

ಇಂತಿ ನಿಮ್ಮ ಪ್ರೀತಿಯ ಪತಿ: ಆರ್ ಶಂಕರ, ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ

ಬೇಕಾಗಿದ್ದಾರೆ

ಕಲಾಭಾರತಿ ವಿದ್ಯಾಸಂಸ್ಥೆ(ರಿ),
ಇಲವಾಲ, ಮೈಸೂರು
ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರದ ಸ್ಪರ್ಧಾರ್ಥಿಗಳಿಗೆ ಬೋಧಿಸಲು ನುರಿತ ಅನುಭವಿ ಅಧ್ಯಾಪಕರು ಬೇಕಾಗಿದ್ದಾರೆ.
ಇತಿಹಾಸ, ಪ್ರಚಲಿತ ವಿದ್ಯಮಾನ ವಿಜ್ಞಾನ & ತಂತ್ರಜ್ಞಾನ, ಮೆಂಟಲ್ ಎಬಿಲಿಟಿ
(ತರಗತಿ ನಡೆಯುವ ಸಮಯ ಸಂಜೆ 5 ರಿಂದ 8)
9035480666, 9663680463

FOR RENT

2 BHK, 1500 SQ FT BUILT UP AT VIDYARANYAPURAM.
RENT : 16000/-
9620267091, 7337888679

ಪತ್ರಿಕಾ ಪ್ರಕಟಣೆ

ಹಾಡ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ನಂಜನಗೂಡು ತಾಲ್ಲೂಕು ಇದರ ಚುನಾವಣೆ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಯ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯನ್ನು ದಿನಾಂಕ: 25.10.2025 ರ ಶನಿವಾರ ಬೆಳಿಗ್ಗೆ 9-00 ಗಂಟೆಯಿಂದ ಸಂಜೆ 4-00 ಗಂಟೆಯವರೆಗೆ ಸಂಘದ ಕಛೇರಿ ಆವರಣ ಇಲ್ಲಿ ನಿಗಧಿಪಡಿಸಲಾಗಿರುತ್ತದೆ. ಚುನಾವಣೆಗೆ ಸ್ಪರ್ಧಿಸಲು ನಾಮಪತ್ರಗಳನ್ನು ದಿನಾಂಕ: 11.10.2025 ರಿಂದ 17.10.2025 ರವರೆಗೆ ಬೆಳಿಗ್ಗೆ 11-00 ಗಂಟೆಯಿಂದ ಮಧ್ಯಾಹ್ನ 3-00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ಚುನಾವಣಾ ವೇಳಾಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರಿಗೂ ತಲುಪಿಸಲು ಸಂಘದ ಕಾರ್ಯದರ್ಶಿಗೆ ಸೂಚಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಸಂಘದ ಕಾರ್ಯದರ್ಶಿ ಹಾಗೂ ರಿಟರ್ನಿಂಗ್ ಆಫೀಸರ್ ರವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/- ಸುಮ ಹೆಚ್.ಎನ್
ರಿಟರ್ನಿಂಗ್ ಆಫೀಸರ್

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಭಗವಾನ್ ಪೆಥಾಲಜಿ ಲ್ಯಾಬೊರೇಟರಿ ಮಾಲೀಕರು ಹಾಗೂ ಹೃದಯವಂತ
ಡಾ|| ಎನ್. ಸಿದ್ಧಾರ್ಥಶಂಕರ್‌ರವರಿಗೆ ಹುಟ್ಟುಹಬ್ಬದ ಶುಭಾಷಯಗಳು
ಶುಭಕೋರುವವರು:



ನಂಜುಂಡಸ್ವಾಮಿ, ಅಧ್ಯಕ್ಷರು
ಸಿಂಹದಮರಿ ಸೇವಾ ಟ್ರಸ್ಟ್ (ರಿ.)
ಶಿವರಾಜ್‌ಕುಮಾರ್ ಮತ್ತು ಅಪ್ಪು ಅಭಿಮಾನಿಗಳ ಸಂಘ, ಶಿವರಾಂಪೇಟೆ, ಮೈಸೂರು

ಮೈಸೂರು ಮಹಾನಗರ ಪಾಲಿಕೆ

ಪ್ರಕಟಣೆ

ಮೈಸೂರು ಮಹಾನಗರ ಪಾಲಿಕೆಯ ದಾಖಲಾತಿ ವಿಭಾಗದಲ್ಲಿ ಶೇಖರಣೆಯಾಗಿರುವ ಇ-ವರ್ಗದ ಕಡತಗಳನ್ನು ನಗರ ಪಾಲಿಕೆ ಕಾಯ್ದೆಯ ಅನುಸಾರ ನಾಶಪಡಿಸುವ ಮೂಲಕ ವಿಲೇವಾರಿ ಮಾಡಲು ತೀರ್ಮಾನಿಸಲಾಗಿದ್ದು ಜಿ.ಎಸ್.ಟಿ ಹೊಂದಿರುವ ಅರ್ಹ ಸಂಸ್ಥೆಗಳು ಮಾತ್ರ ದಿನಾಂಕ 18.10.2025 ರ ಒಳಗೆ ಮುಚ್ಚಿದ ಲಕೋಟೆಯಲ್ಲಿ ದರಪಟ್ಟಿಯನ್ನು ದಾಖಲಾತಿ ವಿಭಾಗಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ. (ಪಾಲಿಕೆಯ ದಾಖಲಾತಿ ವಿಭಾಗದಲ್ಲಿ ಸದರಿ ಇ-ವರ್ಗದ ಕಡತಗಳನ್ನು ಪರಿಶೀಲಿಸಿಕೊಳ್ಳಬಹುದಾಗಿದೆ.)

ಸಹಿ/- ಉಪ ಆಯುಕ್ತರು(ಆಡಳಿತ),
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

RBBN ಪ್ರಸನ್ನ ಸುಬ್ರಹ್ಮಣ್ಣೇಶ್ವರ ಸ್ವಾಮಿ ದೇವಸ್ಥಾನ ನಿರ್ವಹಣಾ ಟ್ರಸ್ಟ್

ನೋಂದಣಿ ಸಂಖ್ಯೆ: **JAY-4-00439-2025-26** ನೋಂದಣಿ ದಿನಾಂಕ: 21-08-2025
ಸಾರ್ವಜನಿಕ ಹಿತಾಸಕ್ತಿಯಿಂದ ಪ್ರಕಟಿಸಲಾಗಿದೆ.
ನೋಂದಾಯಿತ ಕಛೇರಿ: **SY** ಸಂಖ್ಯೆ 123, ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯ, ಕಲ್ಯಾಣಿ ಮೈದಾನ, ಮಕ್ಕಾಜಿ ಚೌಕ, ದೇವರಾಜ್ ಮೊಹಲ್ಲಾ, ಮೈಸೂರು-570 001

ಸಾರ್ವಜನಿಕ ಸೂಚನೆ: ಈ ಎರಡು ಖಾಸಗಿ ಕುಟುಂಬ ದೇವಾಲಯಗಳ ಸೋಗಿನಲ್ಲಿ ಒಂದೇ ರೀತಿಯ ಹೆಸರುಗಳನ್ನು ಹೊಂದಿರುವ ಬಹು ಟ್ರಸ್ಟ್‌ಗಳು ಕಾರ್ಯನಿರ್ವಹಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ, ರಾವ್ ಬಹದ್ದೂರ್ ಬಕ್ಷಿ ನರಸಪ್ಪ ಅವರು ಸ್ಥಾಪಿಸಿದ ಈ ಟ್ರಸ್ಟ್, ಮಕ್ಕಾಜಿ ಚೌಕ್, ದೇವರಾಜ ಮೊಹಲ್ಲಾ, ಮೈಸೂರು - 570001 ನಲ್ಲಿದೆ.

ರಾವ್ ಬಹದ್ದೂರ್ ಬಕ್ಷಿ ನರಸಪ್ಪ **(RBBN)** ನಿರ್ಮಿಸಿದ ಎರಡು ಕುಟುಂಬ ದೇವಾಲಯಗಳ ಹೆಸರುಗಳನ್ನು ಬಳಸಿಕೊಂಡು ಕೆಲವು ವ್ಯಕ್ತಿಗಳು/ಗುಂಪುಗಳು ಸಮಾನಾಂತರ ದೇವಾಲಯ ಟ್ರಸ್ಟ್ ಅನ್ನು ನೋಂದಾಯಿಸಿರಬಹುದು/ನೋಂದಾಯಿಸಲು ಪ್ರಯತ್ನಿಸಿರಬಹುದು ಎಂಬುದು ನಮ್ಮ ಗಮನಕ್ಕೆ ಬಂದಿದೆ. ಈ ದೇವಾಲಯಗಳನ್ನು ಕೆಳಗೆ ಲಿಸ್ಟ್ ಮಾಡಲಾಗಿದೆ:- ಸುಬ್ರಹ್ಮಣೇಶ್ವರ ಸ್ವಾಮಿ ದೇವಸ್ಥಾನ, **SY** ಸಂಖ್ಯೆ 123, ಮಕ್ಕಾಜಿ ಚೌಕ್, ದೇವರಾಜ ಮೊಹಲ್ಲಾ, ಮೈಸೂರು ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನ, **SY** ಸಂಖ್ಯೆ 122, ಮಕ್ಕಾಜಿ ಚೌಕ್, ದೇವರಾಜ ಮೊಹಲ್ಲಾ, ಮೈಸೂರು

ಇದು ಖಾಸಗಿ ಕುಟುಂಬ ದೇವಾಲಯವಾಗಿದ್ದು, ಇಲ್ಲಿ ನಿರ್ವಹಣೆ, ದತ್ತಿ, ತಾಸ್ತಿಕ್ ಹಕ್ಕುಗಳು ಮತ್ತು ಸಂಬಂಧಿತ ಜವಾಬ್ದಾರಿಗಳನ್ನು ರಾವ್ ಬಹದ್ದೂರ್ ಬಕ್ಷಿ ನರಸಪ್ಪ ಅವರ ವಂಶಸ್ಥರಿಗೆ (ವಂಶಜರು) ಅನುವಂಶಿಕವಾಗಿ ನೀಡಲಾಗಿದೆ ಎಂಬುದನ್ನು ದಯವಿಟ್ಟು ಗಮನಿಸಿ. ಇಂದಿನಂತೆ, ನೋಂದಾಯಿತ ಟ್ರಸ್ಟ್‌ನ ಅಧಿಕೃತವಾಗಿ ಗುರುತಿಸಲ್ಪಟ್ಟ ಏಕೈಕ ಸಂಸ್ಥಾಪಕರು ಮತ್ತು ಟ್ರಸ್ಟಿಗಳು ಶ್ರೀಮತಿ ಮೀನಾ ಶ್ರೀನಾಥ್ ಮತ್ತು ಶ್ರೀಮತಿ ಚಂದ್ರಿಕಾ ಮಂಜುನಾಥ್. ಇಬ್ಬರೂ ರಾವ್ ಬಹದ್ದೂರ್ ಬಕ್ಷಿ ನರಸಪ್ಪ ಅವರ ನೇರ ವಂಶಸ್ಥರು (ವಂಶಜರು). ಇದನ್ನು ಸರ್ಕಾರ ಹೊರಡಿಸಿದ ನಾಡ ಕಚೇರಿಯಿಂದ ವಂಶ ವೃಕ್ಷ **(Family Tree)** ದೃಢೀಕರಿಸಿದೆ.

ರಾವ್ ಬಹದ್ದೂರ್ ಬಕ್ಷಿ ನರಸಪ್ಪ ನಿರ್ಮಿಸಿದ ಕುಟುಂಬ ದೇವಾಲಯಗಳ ನಿರ್ವಹಣಾ ಸಮಿತಿ ಎಂದು ಹೇಳಿಕೊಳ್ಳುವ ಯಾವುದೇ ವ್ಯಕ್ತಿ ಅಥವಾ ಟ್ರಸ್ಟ್ ಅಮಾನ್ಯ ಮತ್ತು ಅನಧಿಕೃತ ಹಕ್ಕು ಸಾಧಿಸುತ್ತಿದೆ. ಅಧಿಕೃತ ಮತ್ತು ಕಾನೂನುಬದ್ಧವಾಗಿ ನೋಂದಾಯಿತ ಟ್ರಸ್ಟ್ (ನೋಂದಣಿ ಸಂಖ್ಯೆ: **JAY-4-00439-2025-26,** ನೋಂದಣಿ ದಿನಾಂಕ: 21-08-2025) ಅನ್ನು ಮೊದಲು ಸ್ಥಾಪಿಸಲಾಯಿತು, ಮತ್ತು ಇದನ್ನು ರಾವ್ ಬಹದ್ದೂರ್ ಬಕ್ಷಿ ನರಸಪ್ಪ ಅವರ ವಂಶಜರು (ಅನುವಂಶಿಕ ವಂಶಸ್ಥರು) ಸ್ಥಾಪಿಸಿದರು, ಅವರು ಈ ದೇವಾಲಯಗಳ ಕಾನೂನು ಬದ್ಧ ಮತ್ತು ಸಾಂಪ್ರದಾಯಿಕ ವ್ಯವಸ್ಥಾಪಕರಾಗಿದ್ದಾರೆ. ಪ್ರಚಲಿತ ಕಾನೂನು ನಿಯಮಗಳ ಪ್ರಕಾರ, ಯಾವುದೇ ಸಮಯದಲ್ಲಿ ದೇವಾಲಯದ ಆಡಳಿತವನ್ನು ಮೇಲ್ವಿಚಾರಣೆ ಮಾಡಲು ಕಾನೂನುಬದ್ಧ ನಿರ್ವಹಣಾ ಸಮಿತಿಗೆ ಮಾತ್ರ ಅನುಮತಿ ಇದೆ. ಯಾವುದೇ ಸಮಾನಾಂತರ ಅಥವಾ ಸ್ವಯಂ ಘೋಷಿತ ಸಂಸ್ಥೆಗೆ ಕಾನೂನು ಸ್ಥಾನಮಾನವಿಲ್ಲ.

ಈ ಇತರ ಟ್ರಸ್ಟ್‌ಗಳು ಅಸ್ತಿತ್ವದಲ್ಲಿದ್ದರೂ, ರಾವ್ ಬಹದ್ದೂರ್ ಬಕ್ಷಿ ನರಸಪ್ಪ ನಿರ್ಮಿಸಿದ ಎರಡು ದೇವಾಲಯಗಳಿಗೆ ನಿರ್ವಹಣಾ ಸಮಿತಿಯಾಗಿ ಕಾರ್ಯನಿರ್ವಹಿಸಲು ಅವುಗಳಿಗೆ ಅಧಿಕಾರವಿಲ್ಲ. ಆದ್ದರಿಂದ, ಈ ಎರಡು ದೇವಾಲಯಗಳಿಗೆ ಸಂಬಂಧಿಸಿದ ಯಾವುದೇ ಅಧಿಕೃತ ವಿಷಯಕ್ಕಾಗಿ ಅಂತಹ ಟ್ರಸ್ಟ್‌ಗಳು ಅಥವಾ ಅವರ ಪ್ರತಿನಿಧಿಗಳೊಂದಿಗೆ ತೊಡಗಿಸಿಕೊಂಡಿರುವ ಯಾವುದೇ ವ್ಯಕ್ತಿ, ವ್ಯವಹಾರ, ಸರ್ಕಾರಿ ಸಂಸ್ಥೆ, ಸರ್ಕಾರಿ ಅಧಿಕಾರಿ ಅಥವಾ ಸಂಸ್ಥೆಯು ನೋಂದಾಯಿತ ಟ್ರಸ್ಟ್‌ನ ಇಬ್ಬರು ಮಾನ್ಯತೆ ಪಡೆದ ಸ್ಥಾಪಕ ಟ್ರಸ್ಟಿಗಳಿಂದ ಸ್ಪಷ್ಟವಾದ ಲಿಖಿತ ಅಧಿಕಾರವನ್ನು ಪಡೆಯಬೇಕು. ಹಾಗೆ ಮಾಡಲು ವಿಫಲವಾದರೆ ಅವರು ಸಂಪೂರ್ಣವಾಗಿ ತಮ್ಮದೇ ಆದ ಅಪಾಯ ಮತ್ತು ಜವಾಬ್ದಾರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರ್ಥ.

ಇದಲ್ಲದೆ, ಈ ಎರಡು ದೇವಾಲಯಗಳಿಗೆ ಸೇರಿದ ಜಮೀನುಗಳು ಆಯಾ ದೇವತೆಗಳ ಏಕೈಕ ಆಸ್ತಿ ಎಂದು ಈ ಮೂಲಕ ಸಾರ್ವಜನಿಕಗೊಳಿಸಲಾಗಿದೆ. ನೋಂದಾಯಿತ ಟ್ರಸ್ಟ್ (ನೋಂದಣಿ ಸಂಖ್ಯೆ: **JAY-4-00439-2025-26,** ನೋಂದಣಿ ದಿನಾಂಕ: 21-08-2025) ಮತ್ತು ಇಬ್ಬರು ಮಾನ್ಯತೆ ಪಡೆದ ವಂಶಜರು/ಟ್ರಸ್ಟಿಗಳ ನೇರ ಒಳಗೊಳ್ಳುವಿಕೆ ಇಲ್ಲದೆ ಯಾವುದೇ ವ್ಯಕ್ತಿ, ಸಂಸ್ಥೆ ಅಥವಾ ಸರ್ಕಾರಿ ಸಂಸ್ಥೆಯು ಈ ದೇವಾಲಯಗಳ ಭೂ ಮಾಲೀಕತ್ವದ ದಾಖಲೆಗಳನ್ನು ಪಡೆಯಲು, ಬದಲಾಯಿಸಲು ಅಥವಾ ಕುಶಲತೆಯಿಂದ ನಿರ್ವಹಿಸಲು ಅನುಮತಿಸಲಾಗುವುದಿಲ್ಲ. ಈ ಸೂಚನೆಯ ವಿಷಯಗಳನ್ನು ಸ್ಪಷ್ಟಪಡಿಸಲು ಅಥವಾ ಪ್ರಶ್ನಿಸಲು ಬಯಸುವ ಯಾವುದೇ ವ್ಯಕ್ತಿ, ಸಂಸ್ಥೆ ಅಥವಾ ಸರ್ಕಾರಿ ಸಂಸ್ಥೆ ಸೂಕ್ತ ಅಧಿಕೃತ ಅಥವಾ ಕಾನೂನು ಮಾರ್ಗಗಳ ಮೂಲಕ ಹಾಗೆ ಮಾಡಬೇಕು. ಅಂತಹ ಎಲ್ಲಾ ಸಂವಹನಗಳನ್ನು ಇಬ್ಬರೂ ಟ್ರಸ್ಟಿಗಳಿಗೆ ತಿಳಿಸಬೇಕು ಮತ್ತು ಮೇಲೆ ಒದಗಿಸಲಾದ ನೋಂದಾಯಿತ ಟ್ರಸ್ಟ್ ವಿಳಾಸಕ್ಕೆ ಕಳುಹಿಸಬೇಕು. ಈ ಸೂಚನೆಯ ದಿನಾಂಕದಿಂದ ಮುಂದಿನ 7 ಕೆಲಸದ ದಿನಗಳಲ್ಲಿ ಸಂವಹನವು ನಮಗೆ ತಲುಪಬೇಕು. 2 ವಾರಗಳ ಅವಧಿಯ ನಂತರ, ಈ ಸೂಚನೆಯನ್ನು ಸಾರ್ವಜನಿಕ ದಾಖಲೆಯ ವಿಷಯವಾಗಿ ಸೇರ್ಪಡೆಗಾಗಿ ಕರ್ನಾಟಕ ಗೆಜೆಟ್‌ಗೆ ಸಲ್ಲಿಸಲಾಗುತ್ತದೆ ಎಂದು ದಯವಿಟ್ಟು ಗಮನಿಸಿ.

ಕಾನೂನು ಅಸ್ವೀಕರಣ:

ಈ ಸೂಚನೆಯನ್ನು ಸಾರ್ವಜನಿಕ ಜಾಗೃತಿಯ ಹಿತದೃಷ್ಟಿಯಿಂದ ಮಾತ್ರ ನೀಡಲಾಗಿದೆ. ಇಲ್ಲಿ ಉಲ್ಲೇಖಿಸಲಾದ ದೇವಾಲಯಗಳ ಮೇಲೆ ಅಧಿಕಾರವನ್ನು ತಪ್ಪಾಗಿ ಪ್ರತಿಪಾದಿಸುವ ಯಾವುದೇ ಘಟಕ ಅಥವಾ ವ್ಯಕ್ತಿಯೊಂದಿಗಿನ ಸಂವಹನಗಳಿಂದ ಉಂಟಾಗುವ ಯಾವುದೇ ನಷ್ಟ ಅಥವಾ ಹಾನಿಗೆ ವಿತರಕರು ಹೊಣೆಗಾರರಾಗಿರುವುದಿಲ್ಲ. ಅಧಿಕೃತವಾಗಿ ನೋಂದಾಯಿತ ಟ್ರಸ್ಟ್ ಹೊರತುಪಡಿಸಿ ಇತರ ಸಂಸ್ಥೆಗಳೊಂದಿಗೆ ಯಾವುದೇ ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳುವ ಮೊದಲು ಎಲ್ಲಾ ವ್ಯಕ್ತಿಗಳು, ಸಂಸ್ಥೆಗಳು ಮತ್ತು ಸರ್ಕಾರಿ ಸಂಸ್ಥೆಗಳು ಸರಿಯಾದ ಜಾಗರೂಕತೆಯನ್ನು ವಹಿಸಲು ಮತ್ತು ಅತ್ಯಂತ ಎಚ್ಚರಿಕೆಯಿಂದ ಮುಂದುವರಿಯಲು ಬಲವಾಗಿ ಪ್ರೋತ್ಸಾಹಿಸಲಾಗುತ್ತದೆ, ಇದು ಎರಡು ದೇವಾಲಯಗಳಿಗೆ ಏಕೈಕ ಅಧಿಕೃತ ನಿರ್ವಹಣಾ ಸಮಿತಿಯಾಗಿದೆ. (ಟ್ರಸ್ಟ್ ನೋಂದಣಿ ಸಂಖ್ಯೆ: **JAY-4-00439-2025-26** । ನೋಂದಣಿ ದಿನಾಂಕ: 21/08/2025).

Sd/- President & Founder Trustee, RBNN Prasanna Subramanyeshwara Swamy Temple Management Trust. Registration No.: JAY-4-00439-2025-26



'ಭಾರತದ ಪ್ರಜೆಗಳಾದ ನಾವು' ಚಿತ್ರಕ್ಕೆ ಉತ್ತಮ ಸಾಮಾಜಿಕ ಕಳಕಳಿಯುಳ್ಳ ಚಿತ್ರ ಪ್ರಶಸ್ತಿ

ಮೈಸೂರು ಕಲಾವಿದರು, ಇಲ್ಲಿನ ಸನ್ನಿವೇಶದಲ್ಲೇ ಚಿತ್ರ ಮಾಡಿದ ನಿರ್ದೇಶಕ ಡಾ.ಕೃಷ್ಣಮೂರ್ತಿ ಚಮರಂ ಹರ್ಷಚಿತ್ತ


ಡಾ.ಕೃಷ್ಣಮೂರ್ತಿ ಚಮರಂ

ಮೈಸೂರು, ಅ.9(ಎಂಟಿವೈ)- ಸಂಘರ್ಷಕ್ಕೆ ಎಡೆ ಮಾಡದೆ ಸಮಾಜದಲ್ಲಿ ಭ್ರಾತೃತ್ವ ಹಾಗೂ ಸಮಾನತೆ ಸಾಧಿಸುವ ಸಂದೇಶದೊಂದಿಗೆ ನಿರ್ಮಿಸಿರುವ 'ಭಾರತದ ಪ್ರಜೆಗಳಾದ ನಾವು' ಕನ್ನಡ ಚಲನಚಿತ್ರಕ್ಕೆ ರಾಜ್ಯ ಸರ್ಕಾರ ನೀಡುವ 'ಉತ್ತಮ ಸಾಮಾಜಿಕ ಕಳಕಳಿಯುಳ್ಳ ಚಲನಚಿತ್ರ' ಪ್ರಶಸ್ತಿ ಲಭಿಸಿದೆ ಎಂದು ಚಿತ್ರದ ನಿರ್ದೇಶಕ ಡಾ. ಕೃಷ್ಣಮೂರ್ತಿ ಚಮರಂ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕಲಾವಿದರೇ ಇರುವ ಹಾಗೂ ಮೈಸೂರು ಸುತ್ತಮುತ್ತ ಚಿತ್ರಿಸಿರುವ ಸಿನಿಮಾ ಇದಾಗಿದೆ. ಸಮಾಜದ ಮೇಲೆ ಒಳ್ಳೆಯ ಪರಿಣಾಮ ಬೀರುವ ಹಿನ್ನೆಲೆಯಲ್ಲಿ ಪ್ರಶಸ್ತಿ ದೊರೆತಿದೆ. ಇದರಿಂದಾಗಿ ಮೈಸೂರು-ಚಾಮರಾಜನಗರ ಭಾಗಕ್ಕೆ ಉತ್ತಮ ಗೌರವ ದೊರೆತಂತಾಗಿದೆ ಎಂದು ಹೇಳಿದರು.

ಸಂವಿಧಾನ ಪೀಠಿಕೆ ಅಡಿಯಲ್ಲಿ ಎಲ್ಲರೂ ಭ್ರಾತೃತ್ವ, ಸಮಾನತೆಗಳ ಶಪಥ ಮಾಡುತ್ತೇವೆ. ಆದರೆ ಜಾತಿ, ಧರ್ಮದ ನೆಲೆಯಲ್ಲೇ ಇವುಗಳ ಪಾಲನೆ ಮಾಡುವುದಿಲ್ಲ. ಸಂಘರ್ಷಕ್ಕೆಡೆ ಮಾಡದೇ ಇವನ್ನು ಹೇಗೆ ಸ್ಥಾಪಿಸಬಹುದೆಂಬ ಆಶಯ ಸಿನಿಮಾದಲ್ಲಿದೆ. ಜಾತಿ, ಧರ್ಮದ ಹೆಸರಿನಲ್ಲಿ ಹಕ್ಕುಗಳನ್ನು ಕಸಿಯುತ್ತಿದ್ದು, ಇವುಗಳನ್ನು ಪ್ರಯತ್ನಿಸಿದರೆ ಹೇಗೆ ದೊರಕಿಸಿಕೊಡಬಹುದೆಂಬ ಸಂದೇಶ ಚಿತ್ರದಲ್ಲಿದೆ ಎಂದು ತಿಳಿಸಿದರು.

ಈ ಸಿನಿಮಾದಲ್ಲಿ ನಾಲ್ಕು ಹೋರಾಟ ಗೀತೆಗಳಿವೆ. ಸುಮಾರು 50 ಲಕ್ಷ ರೂ. ಬಜೆಟ್‌ನಲ್ಲಿ ಚಿತ್ರ ನಿರ್ಮಿಸಲಾಗಿದೆ. ಇಂತಹ ಚಿತ್ರಗಳನ್ನು ಬೆಂಬಲಿಸುವ ಮನಸ್ಥಿತಿಯವರು ರಾಜ್ಯದಲ್ಲಿ ಕಡಿಮೆ. ಆದರೆ ತಮಿಳುನಾಡಿನಲ್ಲಿ ಇಂತಹದೊಂದು ಚಿತ್ರ ನಿರ್ಮಾಣವಾದರೆ ಸ್ವಾಗತಿಸಿ ವೀಕ್ಷಿಸಿ, ಒಂದಷ್ಟು ಒಳ್ಳೆಯ ಮಾತನ್ನಾಡುತ್ತಾರೆ. ಇದರಿಂದಾಗಿ ಅವರ ಅಭಿಮಾನಿಗಳೂ ಸಿನಿಮಾ ನೋಡುತ್ತಾರೆ. ಈ ಪ್ರವೃತ್ತಿ ಇಲ್ಲಿಯೂ ಬೆಳೆಯಬೇಕೆಂದು ಆಶಿಸಿದರು. ಸುದ್ದಿಗೋಷ್ಠಿಯಲ್ಲಿ ನೆಲೆ ಹಿನ್ನೆಲೆ ಗೋಪಾಲಕೃಷ್ಣ, ಸತೀಶ್ ಪೊನ್ನಾಚಿ, ಶಿವಾಜಿ, ಮಹದೇವಮೂರ್ತಿ, ಪುಷ್ಪಲತಾ, ಸುಪ್ರೀತ್ ಇನ್ನಿತರರು ಇದ್ದರು.

ಕುರುಬರು ಯಾರ ತಟ್ಟೆಗೂ ಕೈ ಹಾಕುವುದಿಲ್ಲ

ಮಾಜಿ ಸಂಸದ ಉಗ್ರಪ್ಪ ಹೇಳಿಕೆಗೆ ಸುಬ್ರಮಣ್ಯ ತಿರುಗೇಟು


ಬಿ.ಸುಬ್ರಹ್ಮಣ್ಯ

ಮೈಸೂರು,ಅ.9(ಜಿಎ)-ಕುರುಬ ಸಮಾಜದ ಜನ ಎಷ್ಟೋ ವರ್ಷಗಳಿಂದ ತಮಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವ ಉದ್ದೇಶದಿಂದ ಎಸ್‌ಟಿಗೆ ಸೇರಿಸುವಂತೆ ಒತ್ತಾಯಿಸುತ್ತಿದ್ದಾರೆ. ಯಾರ ತಟ್ಟೆಗೂ ಸಮಾಜದ ಜನ ಕೈಹಾಕಲ್ಲ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ತಿಳಿಸಿದ್ದಾರೆ.

ದಯವಿಟ್ಟು ಕುರುಬರನ್ನು ಎಸ್‌ಟಿಗೆ ಸೇರಿಸುವ ಪ್ರಯತ್ನದಲ್ಲಿ ನಮ್ಮ ತಟ್ಟೆಯಲ್ಲಿರುವ ಅನ್ನ ಕಿತ್ತುಕೊಳ್ಳಲು ಹೋಗಬೇಡಿ? ಎಂಬ ಮಾಜಿ ಸಂಸದ ವಿ.ಎಸ್ ಉಗ್ರಪ್ಪ ಅವರ ಹೇಳಿಕೆಗೆ ಪತ್ರಿಕಾ ಪ್ರಕಟಣೆ ಮೂಲಕ ವಾಗ್ದಾಳಿ ನಡೆಸಿದ್ದಾರೆ.

ಕುರುಬ ಸಮಾಜಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಸಂಗೊಳ್ಳಿ ರಾಯಣ್ಣ ಬ್ರಿಟಿಷರ ವಿರುದ್ಧ ಹೋರಾಡಿ ಪ್ರಾಣ ತೆತ್ತಿದ್ದಾರೆ. ಕನಕದಾಸರು 7 ಕೊಪ್ಪರಿಕೆ ಚಿನ್ನ ಸಿಕ್ಕಿದಾಗಲೂ ಮನೆಗೆ ತರದೆ ದಾನ ಮಾಡಿದ್ದಾರೆ. ಅಂತಹ ಸಮಾಜ ಕುರುಬ ಸಮಾಜ ಎಂದು ಉದಾಹರಣೆ ನೀಡಿದ್ದಾರೆ.

ಕುರುಬ ಸಮಾಜ ಹಿಂದುಳಿದ ವರ್ಗವಾಗಿದ್ದು, ಸಾಕಷ್ಟು ವರ್ಷಗಳಿಂದ ಹಲವು ಸೌಲಭ್ಯಗಳಿಂದ ವಂಚಿತವಾಗಿದೆ. ರಾಜಕೀಯ ಮತ್ತು ಸರ್ಕಾರಿ ಸೌಲಭ್ಯಗಳಿಂದಲೂ ವಂಚಿತವಾಗಿದೆ. ಇದನ್ನ ಸರಿಪಡಿಸಲು ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಮುಂದಾಗಿದೆ. ಎಸ್‌ಟಿ ಸಮುದಾಯಕ್ಕೆ ಸವಲತ್ತು ಕೊಡುವುದು ಸಹ ಸರ್ಕಾರದಿಂದಲೇ ಯಾರಿಗೂ ಅನ್ಯಾಯವಾಗುವುದಿಲ್ಲ ಎಂದು ತಿಳಿಸಿದರು.

ಕುರುಬರನ್ನು ಎಸ್ಟಿಗೆ ಸೇರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದ್ರೆ ಎಸ್ಟಿಗೆ ನಿಗದಿ ಮಾಡಿರುವ ಮೀಸಲಾತಿಯನ್ನ ದುಪ್ಪಟ್ಟು ಮಾಡುವಂತೆ ಕೇಂದ್ರಕ್ಕೆ ಶಿಫಾರಸು ಮಾಡುವುದಾಗಿ ಸಿಎಂ ಭರವಸೆ ನೀಡಿದ್ದಾರೆ. ವಿಪಕ್ಷಗಳ ಕೆಲ ನಾಯಕರೂ ಇದಕ್ಕೆ ಸಮ್ಮತಿ ಸೂಚಿಸಿದ್ದಾರೆ. ಹಾಗಾಗಿ ಕುರುಬರು ಯಾರ ತಟ್ಟೆಗೂ ಕೈಹಾಕಲ್ಲ ಎಂದರಲ್ಲದೇ, ಈಗ ನಮ್ಮ ಸಮಾಜಕ್ಕೆ ನಿಗದಿಪಡಿಸಿರುವ ಮೀಸಲಾತಿಯೊಂದಿಗೆ ಎಸ್ಟಿ ಸಮುದಾಯದ ಮೀಸಲಾತಿಯನ್ನೂ ಕೊಡಬೇಕು ಎಂದು ಮನವಿ ಮಾಡಿದರು.

ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಮೇಲೆ ಶೂ ಎಸೆಯಲೆತ್ನಿಸಿದ ವಕೀಲ ರಾಕೇಶ್ ಕಿಶೋರ್ ಅಂತಹವರನ್ನು ಗಲ್ಲಿಗೇರಿಸುವಂತೆಯೂ ಆಗ್ರಹಿಸಿದ್ದಾರೆ. ಕೋರ್ಟ್ ಹಾಲ್‌ನಲ್ಲಿ ಸಿಜೆಐ ಮೇಲೆ ಶೂ ಎಸೆದಿದ್ದಲ್ಲದೇ ನನಗೆ ಈ ಬಗ್ಗೆ ಪಶ್ಚಾತಾಪವಾಗಲಿ, ವಿಷಾದವಾಗಲಿ ಇಲ್ಲ ಎಂದು ದರ್ಪ ತೋರಿದ್ದಾರೆ. ಇಂತಹವರನ್ನ ಗಲ್ಲಿಗೇರಿಸಬೇಕು. ರಾಜ್ಯ ಸರ್ಕಾರ ಕೂಡ ಈ ಬಗ್ಗೆ ಕೇಂದ್ರಕ್ಕೆ ಶಿಫಾರಸು ಮಾಡಬೇಕು ಎಂದು ಬಿ.ಸುಬ್ರಹ್ಮಣ್ಯ ಒತ್ತಾಯಿಸಿದರು.

ಇಂದು, ನಾಳೆ ಅಂತಾರಾಷ್ಟ್ರೀಯ ವಿಚಾರ ಸಂಕಿರಣ

ಮೈಸೂರು,ಅ.9-ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜು ವತಿಯಿಂದ ಅ.10, 11ರಂದು ಟ್ರಾನ್ಸ್‌ಡರ್ಮಲ್ ಡ್ರಗ್ ಡೆಲಿವರಿ ಸಿಸ್ಟಮ್ಸ್, ಅಡ್ವಾನ್ಸಿಂಗ್ ಸ್ಕಿನ್ ಮೀಡಿಯೇಟೆಡ್ ಡ್ರಗ್ ಡೆಲಿವರಿ ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದ ಉದ್ಘಾಟನೆ ಅ.10ರಂದು ಬೆಳಗ್ಗೆ 10 ಗಂಟೆಗೆ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಗೋಲ್ಡನ್ ಜ್ಯುಬಿಲಿ ಡಿಜಿಟಲ್ ಥಿಯೇಟರ್‌ನಲ್ಲಿ ನಡೆಯಲಿದೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸುವರು. ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ಅಕಾಡೆಮಿ ಡೀನ್ ಡಾ.ವಿಶಾಲ್ ಕುಮಾರ್‌ಗುಪ್ತಾ, ಡಾ.ಎನ್.ಎಸ್.ಚಂದ್ರಶೇಖರ್ ಭಾಗವಹಿಸಲಿದ್ದು, ಕಾಲೇಜು ಪ್ರಿನ್ಸಿಪಾಲ್ ಡಾ.ಟಿ.ಎಂ.ಪ್ರಮೋದ್‌ಕುಮಾರ್ ಅಧ್ಯಕ್ಷತೆ ವಹಿಸುವರು. ಸಮಾರೋಪ ಸಮಾರಂಭ ಅ.11ರಂದು ಸಂಜೆ 5 ಗಂಟೆಗೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಅ.15ರಿಂದ 5 ದಿನ ಕೆಎಸ್‌ಆರ್‌ಟಿಸಿ ನೌಕರರ ಉಪವಾಸ ಸತ್ಯಾಗ್ರಹಕ್ಕೆ ಕರೆ

ಬೆಂಗಳೂರು: ಮಾತುಕತೆಗೆ ಕರೆಯುತ್ತೇವೆ, ನಿಮ್ಮ ಸಮಸ್ಯೆ ಬಗೆಹರಿಸುತ್ತೇವೆ ಎಂದು ಸ್ವತಃ ಮುಖ್ಯಮಂತ್ರಿಗಳು ಕೊಟ್ಟ ಮಾತನ್ನು ಉಳಿಸಿಕೊಂಡಿಲ್ಲ ಎಂದು ಆರೋಪಿಸಿರುವ ಕೆಎಸ್‌ಆರ್‌ಟಿಸಿ ನೌಕರರ ಜಂಟಿ ಕ್ರಿಯಾ ಸಮಿತಿ, ಸರ್ಕಾರದ ವಿರುದ್ಧ ಉಪವಾಸ ಸತ್ಯಾಗ್ರಹದ ಬ್ರಹ್ಮಾಸ್ತ್ರ ಕೈಗೆತ್ತಿಕೊಂಡಿದೆ. ಈ ಬಾರಿ ಸಾಂಕೇತಿಕ ಪ್ರತಿಭಟನೆಯಲ್ಲ, ಬದಲಾಗಿ 5 ದಿನಗಳ ನಿರಂತರ ಉಪವಾಸ ಸತ್ಯಾಗ್ರಹಕ್ಕೆ ನೌಕರರು ಕರೆ ಕೊಟ್ಟಿದ್ದಾರೆ. ಅ.15ರಿಂದ 19ರವರೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್, ಉತ್ತರ ಕರ್ನಾಟಕದ ಹೆಬ್ಬಾಗಿಲು ಹುಬ್ಬಳ್ಳಿ ಮತ್ತು ಕಲ್ಯಾಣ ಕರ್ನಾಟಕದ ಕೇಂದ್ರವಾದ ಕಲಬುರಗಿಯಲ್ಲಿ ಏಕಕಾಲಕ್ಕೆ ನೌಕರರು ಉಪವಾಸ ಸತ್ಯಾಗ್ರಹ ನಡೆಸಲಿದ್ದಾರೆ.

ಮೈಸೂರಲ್ಲಿ ಪುಂಡ-ಪೋಕರಿಗಳು, ದಂಧೆಕೋರರಿಗೆ ಪೊಲೀಸರ ಭಯ-ಭೀತಿ ಇಲ್ಲದಂತಾಗಿದೆ

ಸಾರ್ವಜನಿಕರ ಆಕ್ರೋಶ; ಅಮಾಯಕರು ಬಲಿಯಾಗುತ್ತಿರುವುದಕ್ಕೆ ತೀವ್ರ ಆತಂಕ



ಮೈಸೂರು, ಅ.9(ಎಂಟಿವೈ)- ದಸರಾ ಮಹೋತ್ಸವದ ಸಂಭ್ರಮದ ಬೆನ್ನಲ್ಲೇ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕಳೆದ ಮೂರು ದಿನದ ಅಂತರದಲ್ಲಿ ಒಂದೇ ಸ್ಥಳದಲ್ಲಿ ಎರಡು ಕೊಲೆಗಳಾಗಿವೆ. ಇದಕ್ಕೆ ಕಾನೂನು-ಸುವ್ಯವಸ್ಥೆ ಹದಗೆಟ್ಟಿರುವುದೇ ಸಾಕ್ಷಿ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ಮೈಸೂರು ನಗರ ವೀಕ್ಷಣೆಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಆದರೆ, ದಸರಾ ಮುಗಿದ ಬಳಿಕ ಮೂರು ದಿನದ ಅಂತರದಲ್ಲಿ ಒಂದೇ ಸ್ಥಳದಲ್ಲಿ ನಡೆದ ಎರಡು ಭೀಕರ ಹತ್ಯಾ ಪ್ರಕರಣಗಳು ಮೈಸೂರಿಗರನ್ನು ಬೆಚ್ಚಿ ಬೀಳಿಸಿದ್ದರೆ, ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದರಿಂದ ಪುಂಡರು ರಾಜಾರೋಷವಾಗಿ ಮೆರೆಯುತ್ತಿದ್ದಾರೆ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಪುಡಿ ರೌಡಿಗಳನ್ನು ಮಟ್ಟ ಹಾಕಬೇಕು: ಕರ್ನಾಟಕ ಕಾವಲುಪಡೆಯ ರಾಜ್ಯಾಧ್ಯಕ್ಷ ಎಂ.ಮೋಹನ್ ಕುಮಾರ್ ಗೌಡ ಪತ್ರಕರ್ತರೊಂದಿಗೆ ಮಾತನಾಡಿ, ದಸರಾ ಮುಗಿದ ಬಳಿಕ ಮೂರು ದಿನದ ಅಂತರದಲ್ಲಿ ಅರಮನೆ ಮುಂಭಾಗ, ದಸರಾ ವಸ್ತುಪ್ರದರ್ಶನದ ಬಳಿ ಇಟ್ಟಿಗೆಗೂಡು ರಸ್ತೆಯಲ್ಲಿ ಎರಡು ಕೊಲೆಗಳು ನಡೆದಿವೆ. ಇದು ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಸಾಕ್ಷಿಯಲ್ಲವೇ? ಅಟ್ಟಹಾಸ ಮೆರೆಯುತ್ತಿರುವ ಪುಡಿರೌಡಿಗಳು, ಪುಂಡರನ್ನು ಮಟ್ಟ ಹಾಕಬೇಕಾದ ಪೊಲೀಸ್ ಇಲಾಖೆ ಕೈಕಟ್ಟಿ ಕುಳಿತಂತೆ ಭಾಸವಾಗುತ್ತಿದೆ. ಪುಡಿ ರೌಡಿಗಳಿಗೆ ರಾಜಾತಿಥ್ಯ, ಸಮಾಜ ಘಾತುಕರಿಗೆ ಪೊಲೀಸರ ಶ್ರೀರಕ್ಷೆ ಇದೆ ಎಂದು ಕಿಡಿಕಾರಿದರು.

ಮೈಸೂರು ನಗರ ಮಾತ್ರವಲ್ಲದೇ, ಹೊರ ವಲಯದಲ್ಲಿ ಅನಧಿಕೃತ ಜೂಜು ಅಡ್ಡೆ, ಕ್ರಿಕೆಟ್ ಬೆಟ್ಟಿಂಗ್ ದಂಧೆ ವ್ಯಾಪಕವಾಗಿ ನಡೆಯುತ್ತಿದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದ ಮೈಸೂರಲ್ಲಿ ಅಪರಾಧ ಕೃತ್ಯಗಳು ಹೆಚ್ಚಾಗಲು ಕಾರಣ. ದೇಶದಲ್ಲಿಯೇ ಕರ್ನಾಟಕ ಪೊಲೀಸ್ ಹೆಸರುವಾಸಿ. ಆದರೆ, ಹೊರ ರಾಜ್ಯದ ಪೊಲೀಸರು ಮೈಸೂರಲ್ಲಿ ನಡೆಯುತ್ತಿರುವ ದಂಧೆಯನ್ನು ಭೇದಿಸುವಂತಾಗಿದೆ. ನಿವೃತ್ತರ ಸ್ವರ್ಗ ಎನಿಸಿದ್ದ ಮೈಸೂರು, ಇದೀಗ ರಕ್ಷಣೆಯಿಲ್ಲದ ನಗರವಾಗಿ ಮಾರ್ಪಾಡುತ್ತಿದೆ ಎಂದು ಕಿಡಿಕಾರಿದರು.

ಇಂತಹ ಪ್ರಕರಣಗಳಲ್ಲಿ ಪೊಲೀಸ್ ಇಲಾಖೆಯ ಕೆಳ ಹಂತದ ಸಿಬ್ಬಂದಿಗಳನ್ನು ಬಲಿಪಶು ಮಾಡಬಾರದು. ಈ ಹಿಂದೆ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಮೇಲಾಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕಾಗಿತ್ತು. ಹಿರಿಯ ಅಧಿಕಾರಿಗಳ ತಲೆದಂಡ ಆಗಬೇಕಾಗಿತ್ತು. ಕೆಳ ಹಂತದ ಸಿಬ್ಬಂದಿ ಕೈಕಟ್ಟಿ ಕುಳಿತರೆ ಹಿರಿಯ ಅಧಿಕಾರಿಗಳು ಏನೂ ಮಾಡಲು ಸಾಧ್ಯವಿಲ್ಲ. ಇನ್ನಾದರೂ ಸರ್ಕಾರ ಮೈಸೂರಿನಲ್ಲಿ ಅಪರಾಧ ಕೃತ್ಯಗಳು ಮರುಕಳಿಸದಂತೆ ಕ್ರಮ ಕೈಗೊಳ್ಳ ಬೇಕು. ದಕ್ಷ ಅಧಿಕಾರಿಗಳನ್ನು ನಿಯೋಜಿಸಬೇಕು ಎಂದು ಆಗ್ರಹಿಸಿದ್ದಾರೆ.

ಕಠಿಣ ಶಿಕ್ಷೆ ನೀಡಬೇಕು

ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ, ಕೊಲೆ, ಅತ್ಯಾಚಾರ ಪ್ರಕರಣ ಹೆಚ್ಚಾಗುತ್ತಿದೆ. ಕೆಲವು ಪ್ರಕರಣದಲ್ಲಿ 15 ವರ್ಷ ವಯಸ್ಸಿನ ಬಾಲಕರು ಕೊಲೆ ಮಾಡಿ ಅಪ್ರಾಪ್ತರ ಪಟ್ಟ ಕಟ್ಟಿಕೊಂಡು ಶಿಕ್ಷೆಯಿಂದ ಪಾರಾಗುತ್ತಿದ್ದಾರೆ. ಕೊಲೆ ಮಾಡಿ ಬಂದ ಅಪ್ರಾಪ್ತ ಆರೋಪಿಗಳಿಗೆ ನೆರವು ನೀಡಿದ, ಸಾಕ್ಷಿ ನಾಶ ಮಾಡಿದ ಪೋಷಕರ ವಿರುದ್ಧ ಪೊಲೀಸರು ಯಾವುದೇ ಕ್ರಮ ಕೈಗೊಳ್ಳದೆ ಸುಮ್ಮನಾಗುತ್ತಿದ್ದಾರೆ. ಆಮಿಷಗಳಿಗೆ ಬಲಿಯಾದಂತೆ ವರ್ತಿಸುತ್ತಿದ್ದಾರೆ. ಆ ಕಾರಣದಿಂದ ಕೊಲೆ ಪ್ರಕರಣಗಳು ಹೆಚ್ಚಾಗುತ್ತಿದೆ. ಇನ್ನಾದರೂ ಕಾನೂನಿಗೆ ತಿದ್ದುಪಡಿ ತಂದು, ಹೆಣ್ಣು ಮಕ್ಕಳನ್ನು ಬರ್ಬರವಾಗಿ ಹತ್ಯೆ ಮಾಡಿದ ಅಪ್ರಾಪ್ತರೂ ಸೇರಿದಂತೆ ಎಲ್ಲಾ ವಯೋಮಾನದ ಕಿರಾತಕರಿಗೆ ತಕ್ಕ ಶಾಸ್ತಿಯಾಗಬೇಕು. ಇದಕ್ಕಾಗಿ ಸಾರ್ವಜನಿಕ ವಲಯದಿಂದ ಅಭಿಯಾನ ಆರಂಭವಾಗಬೇಕಿದೆ.

- ಕೆ.ಆರ್.ಸೌಮ್ಯಗೌಡ, ಹೋರಾಟಗಾರ್ತಿ

ಜಿಲ್ಲಾಡಳಿತವೇ ಹೊಣೆ: ಬಿಜೆಪಿ ಮುಖಂಡ, ವಕೀಲ ಗೋಕುಲ್ ಗೋವರ್ಧನ್ ಮಾತನಾಡಿ, ದಸರಾ ವೇಳೆ ಬಲೂನು, ಆಟಿಕೆ ಸಾಮಾನು ಮಾರಾಟ ಮಾಡಿ ಜೀವನ ಸಾಗಿಸುವುದಕ್ಕಾಗಿ ಗುಲ್ಬರ್ಗಾದಿಂದ ಮೈಸೂರಿಗೆ ಬಂದಿದ್ದ ಕಡು ಬಡ ದಂಪತಿಯ ಹೆಣ್ಣು ಮಗಳ ಕೊಲೆ ಪ್ರಕರಣಕ್ಕೆ ಜಿಲ್ಲಾಡಳಿತವೇ ಹೊಣೆ. ಈ ವ್ಯಾಪಾರಿಗಳು ಹಲವು ವರ್ಷದಿಂದ ದಸರಾ ವೇಳೆ ಮೈಸೂರಿಗೆ ಬಂದು ವಿವಿಧ ಆಟಿಕೆ ಮಾರಾಟ ಮಾಡಿ ಹೋಗುತ್ತಿದ್ದಾರೆ. ಈ ವ್ಯಾಪಾರಿಗಳಿಗೆ ಭದ್ರತೆ ಹಾಗೂ ಮೂಲಭೂತ ಸೌಲಭ್ಯವಿಲ್ಲ. ಈ ಹಿಂದೆ ಇಟ್ಟಿಗೆಗೂಡು ನಿವಾಸಿಗಳು ಜಿಲ್ಲಾಡಳಿತಕ್ಕೆ ಮನವಿ ಮಾಡಿ, ದಸರಾ ವೇಳೆ ಬರುವ ವ್ಯಾಪಾರಿಗಳಿಗೆ ತಾತ್ಕಾಲಿಕ ಶೆಡ್ ನಿರ್ಮಿಸಿ, ಮೂಲ ಸೌಲಭ್ಯ ಒದಗಿಸುವಂತೆ ಮನವಿ ಸಲ್ಲಿಸಿದ್ದರು. ಆದರೆ, ಇದುವರೆಗೂ ವ್ಯಾಪಾರಿಗಳ ಹಿತ ಕಾಪಾಡುವಲ್ಲಿ ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕಿಡಿಕಾರಿದರು.

ಪೊಲೀಸ್ ಆಯುಕ್ತರ ಕಚೇರಿ ಎದುರು ಇರುವ ಪಾರ್ಕ್‌ನಲ್ಲಿ ಪ್ರತಿದಿನ 20ಕ್ಕೂ ಹೆಚ್ಚು ಜನ ಗಾಂಜಾ ಹೊಡೆದುಕೊಂಡು ಮಲಗಿರುತ್ತಾರೆ. ಅವರನ್ನು ದಂಡಿಸುವ ಕೆಲಸವನ್ನು ಪೊಲೀಸರು ಮಾಡಿಲ್ಲ. ಮಾಹಿತಿ ನೀಡಿದರೆ ಬರವಣಿಗೆಯಲ್ಲಿ ದೂರು ನೀಡಿ ಎನ್ನುತ್ತಾರೆ. ದೂರು ನೀಡದೇ ಇದ್ದರೆ ಎದುರಿಗೆ ದುಷ್ಕೃತ್ಯ ನಡೆಯುತ್ತಿದ್ದರೂ ಪೊಲೀಸರು ಸುಮ್ಮನಾಗುತ್ತಾರೆ ಎನ್ನಿಸುತ್ತಿದೆ. ಎಲ್ಲದಕ್ಕೂ ಲಿಖಿತ ದೂರು ನೀಡಬೇಕಾ? ಹಾಗಿದ್ದರೆ ಪೊಲೀಸರ ಕರ್ತವ್ಯವೇನು ಎಂದು ಪ್ರಶ್ನಿಸಿದರು.

ಜಾಥಾಗೆ ಚಾಲನೆ...


ಸಮೀಕ್ಷೆಯ ಗಣತಿದಾರರೊಂದಿಗೆ ಮನೆ ಮನೆಗೆ ತೆರಳುವ ಜಾಥಾಕ್ಕೆ ಮೈಸೂರು ವಿನಾಯಕನಗರದಲ್ಲಿ (ಪಡುವಾರಹಳ್ಳಿ) ಪಾಲಿಕೆ ವಲಯ ಆಯುಕ್ತ ಮಹೇಶ್‌ಕುಮಾರ್ ಎಸ್.ಜಿಗಣಿ ಗುರುವಾರ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಪಾಲಿಕೆ ಕಂದಾಯಾಧಿಕಾರಿ ಮೋಹನ್, ಶಿವಕುಮಾರ್, ಕಂದಾಯ ಪರಿಶೀಲಕ ಅರುಣ್‌ಕುಮಾರ್, ಅಶೋಕ್ ಉಪಸ್ಥಿತರಿದ್ದರು.

ಮುಡಾ ಪ್ರಕರಣ: ತನಿಖಾಧಿಕಾರಿ ಬದಲಾವಣೆ ಕೋರಿದ್ದ ಅರ್ಜಿ ವಜಾ

ಬೆಂಗಳೂರು, ಅ.9- ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದ ತನಿಖಾಧಿಕಾರಿಯನ್ನು ಬದಲಾಯಿಸುವಂತೆ ಕೋರಿ ದೂರುದಾರ ಸ್ನೇಹಮಯಿ ಕೃಷ್ಣ ಅವರು ಸಲ್ಲಿಸಿದ್ದ ಅರ್ಜಿಯನ್ನು ಗುರುವಾರ ನ್ಯಾಯಾಲಯ ವಜಾಗೊಳಿಸಿದೆ.

ಮುಡಾ ಪ್ರಕರಣದ ತನಿಖಾಧಿಕಾರಿಯಾಗಿರುವ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಉದೇಶ್ ಅವರನ್ನು ಬದಲಾವಣೆ ಮಾಡಿ, ಬೇರೆ ಅಧಿಕಾರಿ ನೇಮಿಸುವಂತೆ ಲೋಕಾಯುಕ್ತರಿಗೆ ನಿರ್ದೇಶಿಸುವಂತೆ ಕೋರಿ ಸ್ನೇಹಮಯಿ ಕೃಷ್ಣ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ಬೆಂಗಳೂರು ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು, ಸ್ನೇಹಮಯಿ ಕೃಷ್ಣ ವಿನಂತಿಯನ್ನು ತಿರಸ್ಕರಿಸಿತು. ಬದಲಾಗಿ ನಡೆಯುತ್ತಿರುವ ತನಿಖೆಯನ್ನು ಸಾಧ್ಯವಾದಷ್ಟು ಬೇಗ ಮತ್ತು ಗರಿಷ್ಠ ಎರಡು ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲು ಲೋಕಾಯುಕ್ತರಿಗೆ ನಿರ್ದೇಶಿಸಿದೆ.

ಸಮಗ್ರ ವರದಿಯನ್ನು ಸಲ್ಲಿಸಲು ಹೆಚ್ಚಿನ ಸಮಯ ವಿಸ್ತರಿಸಲಾಗುವುದಿಲ್ಲ ಎಂದು ಆದೇಶದಲ್ಲಿ ನಿರ್ದಿಷ್ಟವಾಗಿ ಹೇಳಿ, ವಿಚಾರಣೆಯನ್ನು ನ.15ಕ್ಕೆ ವಿಚಾರಣೆ ಮುಂದೂಡಿದೆ.

ಇನ್ನು ಲೋಕಾಯುಕ್ತ ಸಲ್ಲಿಸಿರುವ 'ಬಿ' ರಿಪೋರ್ಟ್ ಪ್ರಶ್ನಿಸಿರುವುದಕ್ಕೆ ಕೋರ್ಟ್ ಯಾವುದೇ ಆದೇಶ ನೀಡಿಲ್ಲ. ತನಿಖೆ ಪೂರ್ಣಗೊಂಡ ಬಳಿಕವೇ 'ಬಿ' ರಿಪೋರ್ಟ್ ಬಗ್ಗೆ ತೀರ್ಮಾನ ಮಾಡುವುದಾಗಿ ಕೋರ್ಟ್ ತಿಳಿಸಿದೆ.

ಸಿಜೆಪಿ ಮೇಲೆ ಶೂ ತೂರಲೆತ್ನ ಖಂಡಿಸಿ

ಮೈಸೂರಲ್ಲಿ ಯುವ ಕಾಂಗ್ರೆಸ್ ಪ್ರತಿಭಟನೆ



ಸಿಜೆಐ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯಲೆತ್ನಿಸಿರುವುದನ್ನು ಖಂಡಿಸಿ ಯುವ ಕಾಂಗ್ರೆಸ್ ಜಿಲ್ಲಾ ಘಟಕದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಅ.9(ಎಂಟಿವೈ)- ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಮೇಲೆ ಶೂ ಎಸೆಯಲೆತ್ನಿಸಿದ್ದನ್ನು ಖಂಡಿಸಿ ಯುವ ಕಾಂಗ್ರೆಸ್ ಜಿಲ್ಲಾ ಘಟಕದ ಕಾರ್ಯಕರ್ತರು ಮೈಸೂರಲ್ಲಿ ಪ್ರತಿಭಟನೆ ನಡೆಸಿದರು.

ಮೈಸೂರಿನ ಡಾ.ಬಿ.ಆರ್.ಅಂಬೇಡ್ಕರ್(ಎಫ್‌ಟಿಎಸ್) ವೃತ್ತದ ಬಳಿ ಗುರುವಾರ ಬೆಳಗ್ಗೆ ಪ್ರತಿಭಟನೆ ನಡೆಸಿ, ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲೆತ್ನಿಸಿದ ವಕೀಲ ರಾಕೇಶ್ ಕಿಶೋರ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ದೇಶದ ಸಂವಿಧಾನದ ರಕ್ಷಣೆ ಮಾಡುವ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯಲೆತ್ನಿಸಿರುವುದು ಖಂಡನೀಯ. ಈ ಕೃತ್ಯವನ್ನು ಎಸಗಿರುವ ವಕೀಲ ಡೋಂಗಿ ಸನಾತನಿ, ಮನುವಾದಿ ರಾಕೇಶ್ ಕಿಶೋರ್ ಅವರನ್ನು ಗಡಿಪಾರು ಮಾಡುವ ಮೂಲಕ ಕಾನೂನು ಕ್ರಮಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ದೀಪಕ್ ಶಿವಣ್ಣ, ಯುವ ಕಾಂಗ್ರೆಸ್ ಕಾರ್ಯದರ್ಶಿ ಅಬ್ರರ್ ಮೊಹಮ್ಮದ್, ಎನ್‌ಎಸ್‌ಯುಐ ರಾಜ್ಯ ಉಪಾಧ್ಯಕ್ಷ ರಫೀಕ್ ಅಲಿ, ಮೈಸೂರು ನಗರ ಯುವ ಕಾಂಗ್ರೆಸ್ ಉಪಾಧ್ಯಕ್ಷ ನವೀನ್ ಕೆಂಪಿ, ನಗರ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಪ್ರತಾಪ್.ಜೆ, ಇಮಾನ್ವಲ್ ಶರತ್, ನರಸಿಂಹರಾಜ ಯುವ ಕಾಂಗ್ರೆಸ್ ಉಪಾಧ್ಯಕ್ಷ ರಿಜ್ವಾನ್ ಪಾಷಾ, ಚಾಮರಾಜ ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್, ಪ್ರಧಾನ ಕಾರ್ಯದರ್ಶಿಗಳಾದ ಚಂದ್ರು ನರಸಿಂಹಮೂರ್ತಿ, ವಿಷ್ಣು ಪ್ರಿಯನ್, ಮಂಜೇಶ್, ವಿರಾಟ್ ಗೌಡ, ಕೃಷ್ಣರಾಜ ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ರಾಕೇಶ್, ಪ್ರಧಾನ ಕಾರ್ಯದರ್ಶಿ ಮಲ್ಲೇಶ್ ಮಲ್ಲ, ರಾಜೇಂದ್ರ ಪ್ರಸಾದ್, ಇಂದಿರಾ ಗಾಂಧಿ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ವಿನಯ್‌ಗೌಡ, ರಾಘವೇಂದ್ರ, ಅಲಿಂ ಪಾಶ, ರಾಕೇಶ್, ಎಂ.ವಿ.ವಿಕ್ರಂ, ಹೇಮಂತ್, ರವೀಶ್ ಗೌಡ, ಸುಹಾಸ್‌ಗೌಡ, ರವಿ, ಮಂಜು ಸೇರಿದಂತೆ ಹಲವರು ಭಾಗವಹಿಸಿದ್ದರು.

ತರಬೇತಿ ಆಯ್ಕೆಗೆ ಅರ್ಜಿ ಆಹ್ವಾನ

ಮೈಸೂರು, ಅ.9- ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ 2025-26ನೇ ಸಾಲಿಗೆ ಪರಿಶಿಷ್ಟ ಪಂಗಡದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣ ತರಬೇತಿ ನೀಡಲು ಅರ್ಹ ಪರಿಶಿಷ್ಟ ಪಂಗಡದ ಕಾನೂನು ಪದವೀಧರರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿಯನ್ನು ವೆಬ್‌ಸೈಟ್ www.twkarnic.inನಲ್ಲಿ ಅ.31ರವರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ, ಡಾ. ಬಾಬು ಜಗಜೀವನ್ ರಾಮ್ ಭವನ್, ಆದಿಪಂಪ ರಸ್ತೆ, ಒಂಟಿಕೊಪ್ಪಲು ಪೂರ್ವ ಬಡಾವಣೆ, ಪಡುವಾರಹಳ್ಳಿ, ಮೈಸೂರು ರವರಿಂದ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ 0821-2427140 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ಜಿಲ್ಲೆಯ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯ ಯೋಜನಾ ಸಮನ್ವಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪುಟದಲ್ಲಿನ ಬದಲಾವಣೆ ವಿಚಾರ ನನಗೆ ಗೊತ್ತಿಲ್ಲ: ಡಿಕೆಶಿ



ಬೆಂಗಳೂರು, ಅ.9(ಕೆಎಂಶಿ)-ಸಚಿವ ಸಂಪುಟದಲ್ಲಿ ಬದಲಾವಣೆ ವಿಚಾರ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ. ಇದೆಲ್ಲಾ ಪಕ್ಷ ಹಾಗೂ ಮುಖ್ಯಮಂತ್ರಿಗೆ ಬಿಟ್ಟ ವಿಷಯ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಪ್ರತಿಕ್ರಿಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ವಿಚಾರದಲ್ಲಿ ನಾನು ಮಾತನಾಡುವುದಿಲ್ಲ. ಸಚಿವ ಸಂಪುಟದಲ್ಲಿ ಬದಲಾವಣೆ ಕುರಿತು ನನ್ನ ಜೊತೆ ಚರ್ಚಿಸಿದರೆ ಸಲಹೆ ನೀಡುತ್ತೇನೆ. ಅನಗತ್ಯ ಚರ್ಚೆ ಮಾಡಿ ಗೊಂದಲ ಸೃಷ್ಟಿಸಬೇಡಿ ಎಂದು ಮಾಧ್ಯಮಗಳಿಗೆ ಮನವಿ ಮಾಡಿದರು.

ಮುಖ್ಯಮಂತ್ರಿಗಳಿಂದ ಔತಣಕೂಟ ಆಯೋಜನೆಯಲ್ಲಿ ತಪ್ಪೇನಿದೆ. ಒಟ್ಟಿಗೆ ಸೇರಿ ಊಟ ಮಾಡಿ, ಸಾಕಷ್ಟು ವಿಚಾರಗಳ ಬಗ್ಗೆ ಚರ್ಚೆ ಮಾಡುವುದು ಸಹಜ ಎಂದರು.

ಬಿಗ್ ಬಾಸ್ ಬಂದ್ ಮಾಡಿದ್ದಕ್ಕೆ ಸಂಬಂಧಿಸಿದಂತೆ ಜಾಲಿವುಡ್ ಸ್ಟುಡಿಯೋದವರಿಗೆ ತಮ್ಮ ತಪ್ಪು ಸರಿಪಡಿಸಿಕೊಳ್ಳಲು ಒಂದು ಅವಕಾಶ ಕಲ್ಪಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದೇನೆ. ಉದ್ಯಮ ಬೆಳೆಯಬೇಕು. ಹೆಚ್ಚು ಮಾಲಿನ್ಯ ಉಂಟು ಮಾಡಲು ಬಿಗ್ ಬಾಸ್ ದೊಡ್ಡ ಕಾರ್ಖಾನೆಯಲ್ಲ. ಸಣ್ಣ ಪುಟ್ಟ ನಿಯಮ ಉಲ್ಲಂಘನೆಯಾಗಿದ್ದರೆ ಸರಿಪಡಿಸಿಕೊಳ್ಳಿ. ಮಾಲಿನ್ಯ ನಿಯಂತ್ರಣ ಮಂಡಳಿ ನಿಯಮಾವಳಿ ಪಾಲಿಸಲು ಸ್ಟುಡಿಯೋದವರಿಗೂ ತಿಳಿಸಿದ್ದೇನೆ ಎಂದರು.

ಇಂದು, ನಾಳೆ ಅಂತರರಾಷ್ಟ್ರೀಯ ಸಮ್ಮೇಳನ

ಮೈಸೂರು, ಅ.9 (ಎಂಕೆ)- ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ (ಎಸ್‌ಜೆಸಿಇ)ದ ವತಿಯಿಂದ ಅ.10 ಮತ್ತು 11ರಂದು 'ಎಲೆಕ್ಟ್ರಾನಿಕ್ಸ್ ಮತ್ತು ಹಸಿರು ಇಂಧನದ ಉದಯೋನ್ಮುಖ ತಂತ್ರಜ್ಞಾನಗಳ' ಕುರಿತು ಅಂತರರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಕುಲಸಚಿವ ಪ್ರೊ.ಎಸ್.ಎ.ಧನರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿಯ ಐಟಿ ಕ್ಯಾಂಪಸ್‌ನಲ್ಲಿ ಸಮ್ಮೇಳನ ನಡೆಯಲಿದ್ದು, ಅಂದು ಬೆಳಗ್ಗೆ 9.30ಕ್ಕೆ ಜೆಎಸ್‌ಎಸ್ ಮಹಾವಿದ್ಯಾಪೀಠ ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಬಿ.ಸುರೇಶ್ ಉದ್ಘಾಟಿಸಲಿದ್ದು, ಅಮೆರಿಕಾದ ಫ್ಲೋರಿಡಾ ಇಂಟರ್‌ನ್ಯಾಷನಲ್ ವಿವಿಯ ಪ್ರೊ.ಎಸ್.ಎಸ್. ಅಯ್ಯಂಗಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ, ಎಲೆಕ್ಟ್ರಾನಿಕ್ಸ್ ಮತ್ತು ಇನ್‌ಸ್ಟ್ರುಮೆಂಟೇಶನ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗಗಳ ಸಹಯೋಗದಲ್ಲಿ ಸಮ್ಮೇಳನ ಆಯೋಜಿಸಿದ್ದು, ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನಗಳ ಹೊಸ ಆವಿಷ್ಕಾರಗಳು ಹಾಗೂ ಮುಂದುವರಿದ ಸಂಶೋಧನೆಗಳನ್ನು ಪ್ರೋತ್ಸಾಹಿಸುವುದು ಸಮ್ಮೇಳನದ ಪ್ರಮುಖ ಉದ್ದೇಶವಾಗಿದೆ. ಇದುವರೆಗೆ ಅಮೆರಿಕಾ, ಜರ್ಮನಿ, ಸೌದಿ ಅರೇಬಿಯಾ ಸೇರಿದಂತೆ ಭಾರತದ ಖ್ಯಾತ ಸಂಸ್ಥೆಗಳ ಸಂಶೋಧಕರಿಂದ 864 ಪ್ರಬಂಧಗಳನ್ನು ಸ್ವೀಕರಿಸಲಾಗಿದೆ. ಅವುಗಳಲ್ಲಿ 164 ಗುಣಮಟ್ಟದ ಪ್ರಬಂದಗಳನ್ನು ಆಯ್ಕೆ ಮಾಡಲಾಗುವುದು ಎಂದರು.

ಅ.9ರಂದು ಸಮ್ಮೇಳನ ಪೂರ್ವ ಕಾರ್ಯಕ್ರಮ ನಡೆಯಲಿದ್ದು, ಅತ್ಯುತ್ತಮ ಪ್ರಬಂಧ, ಪೋಸ್ಟರ್ ಪ್ರದರ್ಶನಗಳಿಗೆ ಪ್ರಮಾಣಪತ್ರ ಹಾಗೂ ನಗದು ಬಹುಮಾನ ನೀಡಿ ಗೌರವಿಸಲಾಗುವುದು ಎಂದು ಮಾಹಿತಿ ನೀಡಿದರು. ಸಮ್ಮೇಳನದ ಗೌರವಾಧ್ಯಕ್ಷ ಯು.ಬಿ. ಮಹದೇವಸ್ವಾಮಿ, ಡಾ.ಎಂ.ಜಿ.ವೀಣಾ, ಮಲ್ಲಿಕಾರ್ಜುನಸ್ವಾಮಿ ಮತ್ತಿತರರಿದ್ದರು.

ದೇಶ - ವಿದೇಶ

ನಿಯಂತ್ರಣ ತಪ್ಪಿ 6 ಕಾರುಗಳಿಗೆ ಲ್ಯಾಂಡ್ ರೋವರ್ ಡಿಕ್ಕಿ



ಲಕ್ನೋ: ವೇಗವಾಗಿ ಬಂದ ಲ್ಯಾಂಡ್ ರೋವರ್ ಡಿಫೆಂಡರ್ ಕಾರು ಚಾಲಕನ ನಿಯಂತ್ರಣ ತಪ್ಪಿ 6 ಕಾರುಗಳಿಗೆ ಡಿಕ್ಕಿ ಹೊಡೆದು ಭೀಕರ ಅಪಘಾತ ಸಂಭವಿಸಿದ ಘಟನೆ ನೋಯ್ಡಾ ಮಾಲ್ ಬಳಿ ಬುಧವಾರ ರಾತ್ರಿ ನಡೆದಿದೆ. ವೇಗವಾಗಿ ಬಂದ ಲ್ಯಾಂಡ್ ರೋವರ್ ಡಿಫೆಂಡರ್ ನಿಯಂತ್ರಣ ತಪ್ಪಿ 6 ವಾಹನಗಳಿಗೆ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ಸಂಬಂಧ ಲ್ಯಾಂಡ್ ರೋವರ್ ಕಾರು ಚಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಅದೃಷ್ಟವಶಾತ್ ಘಟನೆಯಲ್ಲಿ ಯಾವುದೇ ಸಾವು-ನೋವು ಸಂಭವಿಸಿಲ್ಲ. ವೇಗವಾಗಿ ಬಂದ ಲ್ಯಾಂಡ್ ರೋವರ್ ಕಾರು 5 ವಾಹನಗಳು ಮತ್ತು ಒಂದು ಮೋಟಾರ್ ಸೈಕಲ್‌ಗೆ ಡಿಕ್ಕಿ ಹೊಡೆದಿದೆ. ಕಾರು ಚಾಲಕನನ್ನು ಸೆಕ್ಟರ್ 100ರ ನಿವಾಸಿ ಸುನೀಲ್ ಎಂದು ಗುರುತಿಸಲಾಗಿದ್ದು, ಕಾರು 1111 ಎಂಬ ವಿವಿಐಪಿ ನಂಬರ್ ಪ್ಲೇಟ್ ಹೊಂದಿದೆ. ಎಕ್ಸ್‌ಪ್ರೆಸ್‌ವೇ ಪೊಲೀಸ್ ಠಾಣೆ ಪೊಲೀಸರ ತಂಡ ಸ್ಥಳಕ್ಕೆ ಧಾವಿಸಿ ಚಾಲಕ ಹಾಗೂ ಲ್ಯಾಂಡ್ ರೋವರ್ ಕಾರನ್ನು ವಶಕ್ಕೆ ಪಡೆದಿದ್ದಾರೆ.

ಕತಾರ್ ಏರ್‌ವೇಸ್ ವಿಮಾನದಲ್ಲಿ ಸಸ್ಯಾಹಾರಿಗೆ ಮಾಂಸಾಹಾರ ನೀಡಿ ಯಡವಟ್ಟು: ಪ್ರಯಾಣಿಕ ಸಾವು

ಕೊಲೊಂಬೊ: ಕತಾರ್ ಏರ್‌ವೇಸ್ ವಿಮಾನದಲ್ಲಿ 85 ವರ್ಷದ ಸಸ್ಯಾಹಾರಿ ಪ್ರಯಾಣಿಕನೊಬ್ಬ ಮಾಂಸಾಹಾರಿ ಊಟ ಸೇವಿಸಿ ನಂತರ ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ. ದಕ್ಷಿಣ ಕ್ಯಾಲಿಫೋರ್ನಿಯಾದ ನಿವೃತ್ತ ಹೃದ್ರೋಗ ತಜ್ಞ ಡಾ.ಅಶೋಕ ಜಯವೀರ ಮೃತಪಟ್ಟವರು. ಲಾಸ್ ಏಂಜಲೀಸ್‌ನಿಂದ ಕೊಲಂಬೊಗೆ ವಿಮಾನದಲ್ಲಿ ಪ್ರಯಾಣ ಬೆಳೆಸಿದ್ದರು. ಇವರು ಸಸ್ಯಾಹಾರಿ ಊಟ ಆರ್ಡರ್ ಮಾಡಿದ್ದರು. ಆದರೆ, ವಿಮಾನ ಸಿಬ್ಬಂದಿ ಅದ್ಯಾವುದೂ ಲಭ್ಯವಿಲ್ಲ ಎಂದು ಮಾಂಸಾಹಾರ ಊಟವನ್ನೇ ತಂದುಕೊಟ್ಟರು. ಅದನ್ನೇ ತಿನ್ನುವಂತೆ ಇತರೆ ಪ್ರಯಾಣಿಕರು ಸಲಹೆ ನೀಡಿದರು. ಕೊನೆಗೆ ಮಾಂಸಾಹಾರ ಸೇವಿಸುವಾಗ ಉಸಿರುಗಟ್ಟುವಂತಾಗಿ ಪ್ರಜ್ಞೆ ಕಳೆದುಕೊಂಡರು. ಅವರನ್ನು ಎಚ್ಚರಿಸಲು ಪ್ರಯತ್ನಿಸಲಾಯಿತು. ಆದರೆ, ಅವರ ಆರೋಗ್ಯ ಸ್ಥಿತಿ ಹದಗೆಟ್ಟಿತ್ತು. ವಿಮಾನವು ಸ್ಕಾಟ್ಲೆಂಡ್‌ನ ಎಡಿನ್‌ಬರ್ಗ್‌ನಲ್ಲಿ ಇಳಿಯಿತು. ಅಲ್ಲಿ ಪ್ರಯಾಣಿಕನನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಅಷ್ಟರಲ್ಲಾಗಲೇ ವ್ಯಕ್ತಿ ಮೃತಪಟ್ಟಿದ್ದ. ಅವರು ಆಸ್ಪಿರೇಷನ್ ನ್ಯುಮೋನಿಯಾ ದಿಂದ ಕೊನೆಯುಸಿರೆಳೆದಿದ್ದಾರೆ. ಮೃತ ಪ್ರಯಾಣಿಕನ ಪುತ್ರ ಕತಾರ್ ಏರ್‌ವೇಸ್ ವಿರುದ್ಧ ಮೊಕದ್ದಮೆ ಹೂಡಿ, ಪರಿಹಾರಕ್ಕೂ ಬೇಡಿಕೆ ಇಟ್ಟಿದ್ದಾರೆ.

ಶ್ವಾಸಕೋಶ ಕ್ಯಾನ್ಸರ್ ರೋಗಿಗಳಿಗೆ ಮೆದುಳಿನ ಕ್ಯಾನ್ಸರ್ ಔಷಧ ವಿತರಿಸಿದ ಆರ್‌ಸಿಸಿ!



ತಿರುವನಂತಪುರಂ: ಇಲ್ಲಿನ ಪ್ರಾದೇಶಿಕ ಕ್ಯಾನ್ಸರ್ ಕೇಂದ್ರದಲ್ಲಿ (ಆರ್‌ಸಿಸಿ) ಮೆದುಳಿನ ಕ್ಯಾನ್ಸರ್ ಚಿಕಿತ್ಸೆಗಾಗಿ ನೀಡುವ ಕಿಮೊಥೆರಪಿ ಮಾತ್ರೆಗಳು ತಪ್ಪಾಗಿ ಶ್ವಾಸಕೋಶ ಕ್ಯಾನ್ಸರ್ ರೋಗಿಗಳಿಗೆ ವಿತರಿಸಿರುವ ಘಟನೆ ಬೆಳಕಿಗೆ ಬಂದಿದೆ. ಘಟನೆಗೆ ಪ್ಯಾಕೇಜಿಂಗ್‌ನಲ್ಲಿ ಉಂಟಾದ ಗೊಂದಲವೇ ಕಾರಣವೆಂದು ಅಧಿಕಾರಿಗಳು ತಿಳಿಸಿದ್ದಾರೆ. ಗುಜರಾತ್ ಮೂಲದ ಗ್ಲೋಬೆಲಾ ಫಾರ್ಮಾ ತಯಾರಿಸಿದ ಔಷಧಿ ಪ್ಯಾಕೇಜಿಂಗ್‌ನಲ್ಲಿ ಉಂಟಾದ ತಾಂತ್ರಿಕ ದೋಷದಿಂದ ಈ ಘಟನೆ ನಡೆದಿದೆ. ಮೆದುಳಿನ ಕ್ಯಾನ್ಸರ್ ಚಿಕಿತ್ಸೆಗೆ ಬಳಸುವ ಟೆಮೊಜೊಲೊಮೈಡ್ 100 ಮಾತ್ರೆಗಳ ಬದಲಿಗೆ ಶ್ವಾಸಕೋಶ ಮತ್ತು ವೃಷಣ ಕ್ಯಾನ್ಸರ್‌ಗಳಿಗೆ ಬಳಸುವ ಎಟೊಪೊಸೈಡ್ 50 ಔಷಧ ಪೂರೈಕೆಯಾಗಿತ್ತು. ಪ್ಯಾಕೇಜ್‌ನ ಹೊರಭಾಗದಲ್ಲಿ ಟೆಮೊಜೊಲೊಮೈಡ್ 100 ಎಂದು ಮುದ್ರಿಸಲ್ಪಟ್ಟಿದ್ದರೂ, ಒಳಗಿನ ಬಾಟಲಿಗಳಲ್ಲಿ ಎಟೊಪೊಸೈಡ್ 50 ಎಂದು ಲೇಬಲ್ ಮಾಡಲಾಗಿತ್ತು ಪ್ರತಿ ಬಾಟಲಿಯಲ್ಲಿ 8 ಮಾತ್ರೆಗಳಿದ್ದು, ಟೆಮೊಜೊಲೊಮೈಡ್ ಸಾಮಾನ್ಯವಾಗಿ 5 ಮಾತ್ರೆಗಳ ಪ್ಯಾಕ್ ಇರುತ್ತದೆ ಎಂಬ ವ್ಯತ್ಯಾಸವನ್ನು ಗಮನಿಸಿದ ಸಿಬ್ಬಂದಿ ತಕ್ಷಣ ಉನ್ನತಾಧಿಕಾರಿಗಳಿಗೆ ಮಾಹಿತಿ ನೀಡಿದರು.

ಭಯೋತ್ಪಾದಕ ಗುಂಪು ಜೆಇಎಂ ಮಹಿಳಾ ವಿಭಾಗ ಆರಂಭ



ಇಸ್ಲಾಮಾಬಾದ್: ಪಾಕಿಸ್ತಾನ ಮೂಲದ ಭಯೋತ್ಪಾದಕ ಗುಂಪು ಜೈಶ್-ಎ-ಮೊಹಮ್ಮದ್ ತನ್ನ ಮೊದಲ ಮಹಿಳಾ ವಿಭಾಗ ಜಮಾತ್-ಉಲ್-ಮೊಮಿನಾತ್ ಅನ್ನು ಪ್ರಾರಂಭಿಸುವುದಾಗಿ ಘೋಷಿಸಿದೆ.

ಜೆಇಎಂನ ಪ್ರಚಾರ ಸಂಸ್ಥೆ ಅಲ್-ಕಲಾಮ್ ಮೀಡಿಯಾ ಹಂಚಿಕೊಂಡ ಪತ್ರದ ಪ್ರಕಾರ, ಜಮಾತ್-ಉಲ್-ಮೊಮಿನಾತ್ ಸಂಘಟನೆಯು ಮಹಿಳಾ ಬ್ರಿಗೇಡ್ ಆಗಿ ಕಾರ್ಯ ನಿರ್ವಹಿಸಲಿದೆ. ಬಹಾವಲ್ಪುರ್, ಕರಾಚಿ, ಮುಜಫರಾಬಾದ್, ಕೋಟ್ಲಿ, ಹರಿಪುರ್ ಮತ್ತು ಮನ್ಸೆಹ್ರಾದಲ್ಲಿರುವ ಜೆಇಎಂ ಕೇಂದ್ರಗಳಲ್ಲಿ ಅಧ್ಯಯನ ಮಾಡುತ್ತಿರುವ ಜೆಇಎಂ ಕಮಾಂಡರ್‌ಗಳ ಪತ್ನಿಯರು ಮತ್ತು ಆರ್ಥಿಕವಾಗಿ ದುರ್ಬಲ ಮಹಿಳೆಯರನ್ನು ನೇಮಕಾತಿಗೆ ಪರಿಗಣಿಸಲಾಗುತ್ತದೆ. ಭಾರತೀಯ ಸೇನೆಯು ಆಪರೇಷನ್ ಸಿಂಧೂರ ಸಮಯದಲ್ಲಿ ದಕ್ಷಿಣ ಪಂಜಾಬ್‌ನ ಬಹಾವಲ್ಪುರದಲ್ಲಿರುವ ಜೆಇಎಂ ಪ್ರಧಾನ ಕಚೇರಿಯನ್ನು ಗುರಿಯಾಗಿಸಿಕೊಂಡಿತ್ತು. ದಾಳಿಯ ನಂತರ, ಜೆಇಎಂ ಕಮಾಂಡರ್ ಇಲ್ಯಾಸ್ ಕಾಶ್ಮೀರಿ ಕಳೆದ ತಿಂಗಳು ಬಿಡುಗಡೆ ಮಾಡಿದ ವೀಡಿಯೋದಲ್ಲಿ ಮಸೂದ್ ಅಜರ್ ಕುಟುಂಬದ ಹಲವಾರು ಸದಸ್ಯರು ದಾಳಿಯಲ್ಲಿ ಸಾವನ್ನಪ್ಪಿದ್ದಾರೆ ಎಂದು ಹೇಳಿಕೊಂಡಿದ್ದ.

ಟೇಕಾಫ್ ಆದ ಕೆಲವೇ ಹೊತ್ತಲ್ಲಿ ಹುಲ್ಲಿನ ಮೇಲೆ ಬಿದ್ದ ಪ್ರೈವೇಟ್ ಜೆಟ್



ಲಕ್ನೋ: ಉತ್ತರ ಪ್ರದೇಶದ ಫರೂಕಾಬಾದ್‌ನ ವಾಯುನೆಲೆಯಿಂದ ಭೋಪಾಲ್‌ಗೆ ಹೊರಟಿದ್ದ ಖಾಸಗಿ ಜೆಟ್ ರನ್‌ವೇಯಿಂದ ಟೇಕಾಫ್ ಆದ ಕೆಲವೇ ಸೆಕೆಂಡುಗಳಲ್ಲಿ ಸ್ಕಿಡ್ ಆಗಿ ಹುಲ್ಲಿನ ಮೇಲೆ ಬಿದ್ದ ಘಟನೆ ನಡೆದಿದೆ. ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಖಾಸಗಿ ಆಹಾರ ಸಂಸ್ಕರಣಾ ಕಂಪನಿ ಉನ್ನತ ಸದಸ್ಯರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಈ ಘಟನೆ ಮೊಹಮ್ಮದಾಬಾದ್ ವಾಯುನೆಲೆಯಲ್ಲಿ ನಡೆದಿದೆ. ಅವಘಡ ಸಂಬಂಧ ವಿವರವಾದ ತನಿಖೆ ನಡೆಯುತ್ತಿದೆ. ಜೆಟ್‌ನ ಟೈರ್‌ಗಳಲ್ಲಿ ಕಡಿಮೆ ಗಾಳಿಯ ಒತ್ತಡವು ಘಟನೆಗೆ ಕಾರಣವಾಗಿರಬಹುದು ಎನ್ನಲಾಗಿದೆ. ವುಡ್‌ಪೆಕರ್ ಗ್ರೀನ್‌ಗ್ರಿ ನ್ಯೂಟ್ರಿಯಂಟ್ಸ್ ಪ್ರೈವೇಟ್ ಲಿ.ನ ಸದಸ್ಯರು, ಉಪ ವ್ಯವಸ್ಥಾಪಕ ನಿರ್ದೇಶಕ ಅಜಯ್‌ಅರೋರಾ, ಎಸ್‌ಬಿಐ ಮುಖ್ಯಸ್ಥ ಸುಮಿತ್‌ಶರ್ಮಾ, ಬಿಪಿಒ ರಾಕೇಶ್ ಟಿಕು ಕ್ಯಾಪ್ಟನ್ ನಸೀಬ್ ಬಮಲ್, ಕ್ಯಾಪ್ಟನ್ ಪ್ರತೀಕ್ ಫರ್ನಾಂಡಿಸ್ ಜೆಟ್‌ನಲ್ಲಿದ್ದರು.

ದಸರಾ ಸಂದರ್ಭದ 14 ದಿನಗಳಲ್ಲಿ ಅರಮನೆಗೆ 1,99,703 ಮಂದಿ ಭೇಟಿ

●ಅರಮನೆ ಸಾಂಸ್ಕೃತಿಕ ಕಾರ್ಯಕ್ರಮ, ವಿದ್ಯುತ್ ದೀಪಾಲಂಕಾರದಲ್ಲಿ ಅರಮನೆ ವೀಕ್ಷಣೆ ಸೇರಿದರೆ ಈ ಸಂಖ್ಯೆ ಇನ್ನೂ ಅಧಿಕ ●ಈ ಅವಧಿಯಲ್ಲಿ ಅರಮನೆ ಅಂದ ಕಣ್ತುಂಬಿಕೊಂಡ 1,219 ವಿದೇಶಿಗರು



ಗುರುವಾರ ಸಂಜೆ ಮೈಸೂರು ಅರಮನೆ ವಿದ್ಯುತ್ ದೀಪಾಲಂಕಾರ ಕಣ್ತುಂಬಿಕೊಂಡ ಅಪಾರ ಸಂಖ್ಯೆಯ ಜನ.

> ಜಗದ್ವಿಖ್ಯಾತ ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆ ಅ.2ರ ಗುರುವಾರ ವಿಜೃಂಭಣೆಯಿಂದ ನೆರವೇರಿದೆ. ಅಂದು ಅರಮನೆ ಆವರಣದಲ್ಲಿ ಸುಮಾರು 48 ಸಾವಿರ ಮಂದಿ ಜಂಬೂ ಸವಾರಿ ವೀಕ್ಷಣೆ ಮಾಡಿದ್ದಾರೆ. ದಸರಾ ವೇಳೆ ಅರಮನೆ ವೇದಿಕೆಯಲ್ಲಿ ಪ್ರತಿದಿನ ಸಂಜೆ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಲು ಸಹಸ್ರಾರು ಸಂಖ್ಯೆಯಲ್ಲಿ ಜನ ಆಗಮಿಸುತ್ತಿದ್ದರು. ಇವರಿಗೆಲ್ಲಾ ಪ್ರವೇಶ ಉಚಿತವಿತ್ತು. ಈ ಬಾರಿ ಅರಮನೆ ವೇದಿಕೆ ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಣೆಗೆ ಈ ಹಿಂದಿನ ವರ್ಷಗಳಿಂತ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿದ್ದು ವಿಶೇಷ. ಆಯುಧ ಪೂಜೆ ಹಾಗೂ ವಿಜಯದಶಮಿ ದಿನಗಳಂದು ರಜೆ ಹಿನ್ನೆಲೆಯಲ್ಲಿ ಅರಮನೆ ಭೇಟಿಗೆ ಅವಕಾಶ ಇರಲಿಲ್ಲ. ಈ ದಿನಗಳ ಹೊರತಾಗಿ (ಅ.1 ಮತ್ತು 2 ಹೊರತಾಗಿ) ಸೆ.22ರಿಂದ ಅ.7ರವರೆಗೆ 1,99,703 ಮಂದಿ ಟಿಕೆಟ್ ಖರೀದಿಸಿ (ವಿಐಪಿಗಳನ್ನು ಹೊರತಾಗಿ) ಅರಮನೆ ವೀಕ್ಷಣೆ ಮಾಡಿದ್ದಾರೆ. ಅ.12ರವರೆಗೆ ರಾತ್ರಿ 7ರಿಂದ 9 ಗಂಟೆಯವರೆಗೆ ಅರಮನೆ ವಿದ್ಯುತ್ ದೀಪಾಲಂಕಾರ ಮುಂದುವರೆಯಲಿದೆ. ಅರಮನೆ ವಿದ್ಯುತ್ ದೀಪಾಲಂಕಾರ ವೀಕ್ಷಣೆಗೂ ಉಚಿತ ಪ್ರವೇಶ ಈ ಹಿಂದಿನಂದಲೂ ಇದೆ.
>
> -ಟಿ.ಎಸ್.ಸುಬ್ರಹ್ಮಣ್ಯ, ಉಪನಿರ್ದೇಶಕರು, ಅರಮನೆ ಮಂಡಳಿ, ಮೈಸೂರು ಅರಮನೆ.

ಮೈಸೂರು,ಅ.9(ಪಿಎಂ)– ಈ ಬಾರಿಯ ದಸರಾ ಮಹೋತ್ಸವ ಸಂದರ್ಭದಲ್ಲಿ ಸೆ.22 ರಿಂದ 30ರವರೆಗೆ 9 ದಿನಗಳಲ್ಲಿ 1,00,710 ಮಂದಿ ಮೈಸೂರು ಅರಮನೆ ಅಂದ ಕಣ್ತುಂಬಿಕೊಂಡಿದ್ದಾರೆ. ಅಲ್ಲದೆ, ವಿಜಯ ದಶಮಿ ಮೆರವಣಿಗೆ ಮಾರನೇ ದಿನವಾದ ಅ.3ರಿಂದ 7ರವರೆಗೆ ಐದು ದಿನಗಳಲ್ಲಿ 98,993 ಮಂದಿ ಅರಮನೆಗೆ ಭೇಟಿ ನೀಡಿದ್ದಾರೆ.

ಸೆ.22ರಿಂದ ಅ.7ರವರೆಗೆ (ಅ.1ರ ಆಯುಧ ಪೂಜೆ ಮತ್ತು ಅ.2ರ ವಿಜಯ ದಶಮಿಯ ದಿನಗಳ ಹೊರತಾಗಿ) ಒಟ್ಟಾರೆ 1,99,703 ಮಂದಿ ಅರಮನೆ ಅಂದ ಚಂದ ಕಂಡು ಬೆರಗಾಗಿದ್ದಾರೆ. ಈ ಪೈಕಿ ಅ.4ರಂದು ಅತೀ ಹೆಚ್ಚು ಸಂಖ್ಯೆಯ ಜನ ಭೇಟಿ ನೀಡಿದ್ದು, ಅಂದು 25,106 ಮಂದಿ ಅರಮನೆ ವೀಕ್ಷಿಸಿದ್ದಾರೆ. 14 ದಿನಗಳ ಅವಧಿಯಲ್ಲಿ ಹತ್ತಿರ ಹತ್ತಿರ 2 ಲಕ್ಷ ಮಂದಿ ಅರಮನೆ ವೀಕ್ಷಣೆ ಮಾಡಿದ್ದಾರೆ.

ದೇಶ–ವಿದೇಶದ ಪ್ರವಾಸಿಗರು, ಸ್ಥಳೀಯರು ಹಾಗೂ ನೆರೆ ಜಿಲ್ಲೆಯವರು ಸೇರಿದಂತೆ ದಸರಾ ಸಂದರ್ಭದಲ್ಲಿ ಲಕ್ಷಾಂತರ ಮಂದಿ ಮೈಸೂರು ಅರಮನೆ ವೀಕ್ಷಿಸಿದ್ದಾರೆ. ಇದು ಟಿಕೆಟ್ ಖರೀದಿಸಿ ಪ್ರತಿದಿನ ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಅರಮನೆ ವೀಕ್ಷಣೆ ಮಾಡಿದವರ ಸಂಖ್ಯೆಯಾದರೆ, ಇದರ ಹೊರತಾಗಿ ದಸರಾ ಮಹೋತ್ಸವ ಪ್ರಯುಕ್ತ ಪ್ರತಿದಿನ ಅರಮನೆ ವೇದಿಕೆಯಲ್ಲಿ ನಡೆದ 8 ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಇಂಕ್ಯಾಂಡೇಸ್ಸೆಂಟ್ ಬಲ್ಬ್‌ಗಳಿಂದ ವಿದ್ಯುತ್ ದೀಪಾಲಂಕಾರದೊಂದಿಗೆ ಹೊಂಬಣ್ಣದಲ್ಲಿ ಕಂಗೊಳಿಸುವ ಅರಮನೆ ನೋಡಲೂ ಭಾರೀ ಸಂಖ್ಯೆಯಲ್ಲಿ ಜನ ಭೇಟಿ ನೀಡಿದ್ದಾರೆ.

ಕಳೆದ ವರ್ಷ ದಸರಾ ವೇಳೆಯಲ್ಲಿ (2024ರ ಅ.1ರಿಂದ 10ರವರೆಗೆ 10 ದಿನಗಳು) 1,35,456 ಮಂದಿ ಅರಮನೆ ವೀಕ್ಷಣೆ ಮಾಡಿದ್ದರು (ಸಾಂಸ್ಕೃತಿಕ ಕಾರ್ಯಕ್ರಮ, ಅರಮನೆ ವಿದ್ಯುತ್ ದೀಪಾಲಂಕಾರ ವೀಕ್ಷಣೆ ಹೊರತುಪಡಿಸಿ). ಈ ಬಾರಿ ದಸರಾ ಉದ್ಘಾಟನೆ ದಿನವಾದ ಸೆ.22ರಿಂದ 30ರವರೆಗೆ 9 ದಿನಗಳಲ್ಲಿ 1,00,710 ಮಂದಿ ಭೇಟಿ ನೀಡಿ ಅರಮನೆ ಅಂದ ಸವಿದಿದ್ದಾರೆ.

ಈ ಬಾರಿ ದಸರಾದಲ್ಲಿ (2025) ಸೆ.22 ರಂದು 4189 ಮಂದಿ ಅರಮನೆ ವೀಕ್ಷಿಸಿದ್ದಾರೆ. ಅದೇ ರೀತಿ ಸೆ.23ರಂದು 6191, 24ರಂದು 6946, 25ರಂದು 9485, 26ರಂದು 10627, 27ರಂದು 16892, 28ರಂದು 20856, 29ರಂದು 13570, 30ರಂದು 11954, ಅ.3ರಂದು 22247, 4ರಂದು 25,106, 5ರಂದು 24,397, 6ರಂದು 14,118, 7ರಂದು 13,125 ಮಂದಿ ಅರಮನೆ ವೀಕ್ಷಿಸಿದ್ದಾರೆ. ಈ 14 ದಿನಗಳಲ್ಲಿ 1,99,703 ಮಂದಿ ಭೇಟಿ ನೀಡಿದ್ದು, ಈ ಪೈಕಿ 1,57,767 ಹಿರಿಯರು, 29,880 ಮಕ್ಕಳು, 10837 ವಿದ್ಯಾರ್ಥಿಗಳು, 1185 ವಿದೇಶಿಗರು ಹಾಗೂ 34 ವಿದೇಶಿ ಮಕ್ಕಳು (ಒಟ್ಟು ವಿದೇಶಿಗರು 1,219 ಮಂದಿ) ಸೇರಿದ್ದಾರೆ.

ಕಳೆದ ವರ್ಷ ದಸರಾ ವೇಳೆಯಲ್ಲಿ (2024ರ ಅ.1ರಿಂದ 10ರವರೆಗೆ 10 ದಿನಗಳು) 1,35,456 ಮಂದಿ ಅರಮನೆ ವೀಕ್ಷಣೆ ಮಾಡಿದ್ದರು (ಸಾಂಸ್ಕೃತಿಕ ಕಾರ್ಯಕ್ರಮ, ಅರಮನೆ ವಿದ್ಯುತ್ ದೀಪಾಲಂಕಾರ ವೀಕ್ಷಣೆ ಹೊರತುಪಡಿಸಿ). ಈ ಬಾರಿ ದಸರಾ ಉದ್ಘಾಟನೆ ದಿನವಾದ ಸೆ.22ರಿಂದ 30ರವರೆಗೆ 9 ದಿನಗಳವರೆಗೆ 1,00,710 ಮಂದಿ ಭೇಟಿ ನೀಡಿ ಅರಮನೆ ಅಂದ ಸವಿದಿದ್ದಾರೆ.

ನನ್ನ ಹೆಸರಲ್ಲಿ ಹಣ ಮಾಡುವವರನ್ನು ನೋಡಿಕೊಳ್ಳುವೆ
ಹಣವೆಲ್ಲಾ ಆಸ್ಪತ್ರೆಗೆ ಎಂದು ನುಡಿದ ದೈವ



ಮಂಗಳೂರು, ಅ.9– ನನ್ನ ಹೆಸರಿನಲ್ಲಿ ಹಣ ಮಾಡುವವರನ್ನು ನೋಡಿಕೊಳ್ಳುತ್ತೇನೆ. ಹಣವೆಲ್ಲಾ ಆಸ್ಪತ್ರೆಗೆ ಸೇರುವಂತೆ ಮಾಡುತ್ತೇನೆ. ಅಪಚಾರ ಮಾಡುವವರಿಗೆ ಬುದ್ಧಿ ಕಲಿಸುತ್ತೇನೆ. ಇನ್ನು ಮುಂದೆ ದೈವ ಆಸ್ಥಾನಗಳಲ್ಲಿ ಚಿತ್ರೀಕರಣ ನಿಲ್ಲಿಸಿ ಎಂದು ದೈವವು ನುಡಿದಿದೆ.

ಕಾಂತಾರ ಚಾಪ್ಟರ್ 1 ಸಿನಿಮಾದಿಂದ ದೈವಾರಾಧನೆಗೆ ಅಪಚಾರವಾಗಿದೆ ಎಂದು ದೈವಾರಾಧನ ಸಂರಕ್ಷಣಾ ವೇದಿಕೆ, ದೈವ ನರ್ತಕರು ಮತ್ತು ದೈವಾರಾಧಕರು ಮಂಗಳೂರಿನ ಬಜಪೆಯ ಶ್ರೀ ಕ್ಷೇತ್ರ ಪೆರಾರದಲ್ಲಿರುವ ಬ್ರಹ್ಮದೇವರು, ಬಲವಂಡಿ, ಪಿಲಿಚಂಡಿ ದೈವಸ್ಥಾನದಲ್ಲಿ ದೈವದ ಮುಂದೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ.

ಸಿನಿಮಾದಲ್ಲಿ ದೈವದ ಆವೇಶವನ್ನು ಅನುಕರಿಸುತ್ತಿದ್ದಾರೆ. ದೈವಾರಾಧನೆಯನ್ನು ಹಣ ಮಾಡುವ ಉದ್ದೇಶಕ್ಕೆ ಬಳಸಿಕೊಂಡಿರುವುದು ಸರಿಯಲ್ಲ ಎಂದು ಅವರು ದೂರು ನೀಡಿದ್ದಾರೆ. ಈ ವೇಳೆ ದೈವವು ಅನುಕರಣೆ, ಅಪಹಾಸ್ಯ, ಹಣ ಮಾಡಿದವರಿಗೆ ತಕ್ಕ ಶಾಸ್ತಿ ಮಾಡಲಾಗುವುದು. ದೈವದ ಆಸ್ಥಾನಗಳಲ್ಲಿ ಚಿತ್ರೀಕರಣ ನಿಲ್ಲಿಸಿ. ನೀವು ಹೋರಾಟ ಮುಂದುವರಿಸಿ. ನಾನು ನಿಮ್ಮ ಬೆನ್ನ ಹಿಂದೆ ಇದ್ದೇನೆ ಎಂದು ನುಡಿದಿದೆ.

ಕೆಲವು ದೈವನರ್ತಕರು ಮತ್ತು ದೈವಾರಾಧಕರು ರಿಷಬ್ ಶೆಟ್ಟಿ ಅವರ ಮೇಲೂ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ದೈವದ ಬಗ್ಗೆ ಸಿನಿಮಾ ಮಾಡಬಾರದಿತ್ತು. ದೈವವನ್ನು ಮತ್ತು ದೈವ ನರ್ತನವನ್ನು ಭಕ್ತಿಯಿಂದ ನೋಡಬೇಕು. ಆದರೆ, ಸಿನಿಮಾ ಮಾಡುವ ಮೂಲಕ ಅದನ್ನು ಉದ್ಯಮದ ದೃಷ್ಟಿಯಿಂದ ನೋಡಲಾಗಿದೆ ಎಂದು ಅವರು ದೂರಿದ್ದಾರೆ. ಹಣ ಮಾಡಲು ದೈವವನ್ನು ಬಳಸಿಕೊಂಡಿದ್ದಾರೆ ಎಂದು ಕೆಲವರು ಟೀಕಿಸಿದ್ದಾರೆ.

ಅಪಹಾಸ್ಯದಿಂದ ನಮಗೆ ತುಂಬಾ ಬೇಸರ: ದೈವಾರಾಧಕ ಶ್ರೀಧರ್ ಕವತ್ತಾರ್ ಮಾತನಾಡಿ, ದೈವದ ಅಪಹಾಸ್ಯದಿಂದ ನಮಗೆ ತುಂಬಾ ಬೇಸರ ಆಗಿದೆ. ನಮ್ಮ ಹೋರಾಟಕ್ಕೆ ದೈವವು ಸಂಪೂರ್ಣ ಬೆಂಬಲ ನೀಡಿದೆ. ಈ ರೀತಿಯ ತಪ್ಪನ್ನು ತುಳುವರು ಮಾಡಬೇಡಿ. ದೈವಕ್ಕೆ ಯಾರೇ ಅಪಹಾಸ್ಯ ಮಾಡಿದರೂ ನಾವು ಅದನ್ನು ವಿರೋಧಿಸುತ್ತೇವೆ ಎಂದರು.

ನಾಯಕತ್ವದ ಗೊಂದಲ ಪರಿಹರಿಸಿ; ಸುಗಮ ಆಡಳಿತಕ್ಕೆ ಅವಕಾಶ ಕಲ್ಪಿಸಿ

ಶೀಘ್ರವೇ ವರಿಷ್ಠರ ಬಳಿ ಸಿಎಂ ಸಿದ್ದರಾಮಯ್ಯ ಆಪ್ತ ಸಚಿವರ ನಿಯೋಗ

ಬೆಂಗಳೂರು, ಅ.9(ಕೆಎಂಶಿ)–ನಾಯಕತ್ವ ಗೊಂದಲ ಪರಿಹರಿಸಿ ಸುಗಮ ಆಡಳಿತಕ್ಕೆ ಅವಕಾಶ ಮಾಡಿಕೊಡಿ ಎಂದು ಪಕ್ಷದ ವರಿಷ್ಠರಿಗೆ ಮನವಿ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣಕ್ಕೆ ಸೇರಿದ ಸಚಿವರು ಇಂದಿಲ್ಲಿ ನಿರ್ಧರಿಸಿದ್ದಾರೆ.

ನವೆಂಬರ್‌ನಲ್ಲಿ ಅಧಿಕಾರ ಹಸ್ತಾಂತರ ಊಹಾಪೋಹಗಳಿಗೆ ತೆರೆ ಎಳೆಯಲು ಸಚಿವರುಗಳು ಈ ತೀರ್ಮಾನಕ್ಕೆ ಬಂದಿದ್ದಾರೆ.

ಗೃಹ ಸಚಿವ ಡಾ.ಜಿ.ಪರಮೇಶ್ವರ್, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಇಂದು ಬೆಳಗಿನ ಉಪಹಾರ ನೆಪದಲ್ಲಿ ಗೌಪ್ಯ ಸಭೆ ನಡೆಸಿ ಸಿದ್ದರಾಮಯ್ಯ ಬೆನ್ನಿಗೆ ನಿಲ್ಲಲು ನಿರ್ಧರಿಸಿದ್ದಾರೆ.

ಸಚಿವ ಸ್ಥಾನ ತೊರೆದು ಪಕ್ಷದ ಹುದ್ದೆ ವಹಿಸಿಕೊಳ್ಳಲು ಮುಂದಾಗಿರುವ ಜಾರಕಿಹೊಳಿ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡಬೇಕು. ವರಿಷ್ಠರು ಈ ತೀರ್ಮಾನ ಕೈಗೊಳ್ಳುವುದರಿಂದ ವಾಲ್ಮೀಕಿ ಸಮುದಾಯಕ್ಕೆ ಬೇರೆ ಬೇರೆ ಕಾರಣಗಳಿಂದ ಆಡಳಿತದಲ್ಲಿ ಆಗಿರುವ ಅನ್ಯಾಯ ಸರಿಪಡಿಸಲು ಸಾಧ್ಯವಾಗಲಿದೆ.

ಸಿದ್ದರಾಮಯ್ಯ ಅವರನ್ನೇ ಅಧಿಕಾರದಲ್ಲಿ ಮುಂದುವರೆಸಿದರೆ ಮುಂದಿನ ದಿನಗಳಲ್ಲಿ ಉತ್ತಮ ಆಡಳಿತ ನೀಡಿ ಪಕ್ಷವನ್ನು ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ತರಲು ಸಾಧ್ಯವಾಗುತ್ತದೆ. ಜನ ಬೆಂಬಲ ಮತ್ತು ಶಾಸಕರ ಬೆಂಬಲ ಹೊಂದಿರುವ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಇಳಿಸುವ ಕಾರ್ಯ ಯಾವುದೇ ಕಾರಣಕ್ಕೂ ಆಗಬಾರದು.

ಅಧಿಕಾರ ಹಸ್ತಾಂತರದ ಬಗ್ಗೆ ಎದ್ದಿರುವ ಊಹಾಪೋಹಗಳಿಗೆ ಸ್ಪಷ್ಟ ಸಂದೇಶ ನೀಡಿ, ಇನ್ನು ಮುಂದೆ ಯಾರೂ ಈ ವಿಷಯ ಕುರಿತು ಚಕಾರ ಎತ್ತದಂತೆ ನೋಡಿಕೊಳ್ಳಬೇಕೆಂದು ವರಿಷ್ಠರನ್ನು ಒತ್ತಾಯಿಸಲು ತೀರ್ಮಾನಿಸಿದ್ದಾರೆ.

ಸದ್ಯದಲ್ಲೇ ವಿವಿಧ ಸಮುದಾಯಗಳ ಸಚಿವರುಗಳನ್ನು ಒಳಗೊಂಡ ನಿಯೋಗವನ್ನು ದೆಹಲಿಗೆ ಕೊಂಡೊಯ್ದು ವರಿಷ್ಠರಿಗೆ ನಿಲುವು ತಿಳಿಸಲು ನಿರ್ಧರಿಸಿದ್ದಾರೆ.

ಅಧಿಕಾರ ಹಂಚಿಕೆ ಆಗಲೇಬೇಕೆಂಬ ನಿಲುವು ತೆಗೆದುಕೊಂಡಿದ್ದೇ ಆದಲ್ಲಿ ಪರಿಶಿಷ್ಟ ಸಮುದಾಯಕ್ಕೆ ಸೇರಿದ ವ್ಯಕ್ತಿಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಲಿದ್ದಾರೆ.

ಅಲ್ಲದೆ, ಪರಿಶಿಷ್ಟ ಸಮುದಾಯದ ಬೃಹತ್ ಸಮಾವೇಶವನ್ನು ಮೈಸೂರು, ತುಮಕೂರು ಇಲ್ಲವೇ ದಾವಣಗೆರೆಯಲ್ಲಿ ನಡೆಸಲು ಸಭೆ ನಿರ್ಧರಿಸಿದೆ.

ದೇವೇಗೌಡರು ಆರೋಗ್ಯವಾಗಿದ್ದಾರೆ: ಹೆಚ್.ಡಿ.ಕುಮಾರಸ್ವಾಮಿ ಮಾಹಿತಿ



ಬೆಂಗಳೂರು, ಅ.9– ಮಾಜಿ ಪ್ರಧಾನಿಗಳಾದ ಹೆಚ್.ಡಿ.ದೇವೇಗೌಡರು ಆರೋಗ್ಯವಾಗಿದ್ದಾರೆ. ಯಾರೂ ಆತಂಕಪಡುವ ಅಗತ್ಯವಿಲ್ಲ. ಇನ್ನು ಮೂರು ನಾಲ್ಕು ದಿನದಲ್ಲಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗುತ್ತಾರೆ ಎಂದು ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ಮಾಹಿತಿ ನೀಡಿದ್ದಾರೆ.

ಬೆಂಗಳೂರಿನಲ್ಲಿ ಗುರುವಾರ ತಮ್ಮ ತಂದೆಯವರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದ ನಂತರ ಮಾಧ್ಯಮಗಳ ಜತೆ ಮಾತನಾಡಿ, ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಯಾರೂ ಆತಂಕಪಡುವ ಅಗತ್ಯ ಇಲ್ಲ. ತಂದೆಯವರಿಗೆ ಆರೋಗ್ಯದ ಸಮಸ್ಯೆ ಇಲ್ಲ. ಕಳೆದ ಮೂರು ದಿನಗಳಿಂದ ವೈದ್ಯರು ಚಿಕಿತ್ಸೆ ನೀಡಿದ್ದಾರೆ. ದೇವರ ಮತ್ತು ಜನತೆಯ ಆಶೀರ್ವಾದದಿಂದ ಆರೋಗ್ಯವಾಗಿದ್ದಾರೆ ಎಂದು ಸಚಿವರು ಮಾಹಿತಿ ನೀಡಿದರು.

ಅಭಿವೃದ್ಧಿ ಕಾರ್ಯ ತ್ವರಿತವಾಗಿ ಪೂರ್ಣಗೊಳಿಸಲು ಶಾಸಕ ಕೆ.ಹರೀಶ್ ಗೌಡರ ಸೂಚನೆ



ಸಭೆಯಲ್ಲಿ ಶಾಸಕ ಕೆ.ಹರೀಶ್ ಗೌಡ ಮಾತನಾಡಿದರು.

ಮೈಸೂರು, ಅ.9– ವಲಯ ಕಚೇರಿ 5 ರ ವ್ಯಾಪ್ತಿಯ ವಾರ್ಡ್ ನಂಬರ್ 2,3,4,5 ರ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಒಳಚರಂಡಿ, ಮಳೆ ನೀರು ಚರಂಡಿ ಮುಂತಾದ ಸಮಸ್ಯೆಗಳ ಬಗ್ಗೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಸಭೆ ನಡೆಸಿ ಶೀಘ್ರವಾಗಿ ಆಗಬೇಕಿರುವ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಗುರುವಾರ ಜಲದರ್ಶಿನಿ ಕಚೇರಿಯಲ್ಲಿ ಸಭೆ ನಡೆಸಿ ಕಾಮಗಾರಿಗಳಲ್ಲಿ ಸಮನ್ವಯ ಹೊಂದುವ ನಿಟ್ಟಿನಲ್ಲಿ ಸಲಹೆ ಸೂಚನೆಗಳನ್ನು ಶಾಸಕರು ನೀಡಿದರು.

ಸಭೆಯಲ್ಲಿ ಪಾಲಿಕೆಯ ವಲಯ ಕಚೇರಿ ಅಭಿವೃದ್ಧಿ ಅಧಿಕಾರಿ ಹಿತೇಂದ್ರ, ವಾಣಿ ವಿಲಾಸದ ಸಹಾಯಕ ಅಭಿಯಂತರ ಶುಶ್ರೂತ್, ಮಾಜಿ ನಗರ ಪಾಲಿಕೆ ಸದಸ್ಯರುಗಳಾದ ಜಯರಾಮು, ಶಿವಮಾದು, ಪೈಲ್ವಾನ್ ಶ್ರೀನಿವಾಸ್, ಉಷಾಕುಮಾರ್, ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ, ಮುಖಂಡರಾದ ದಳಪತಿ ರಮೇಶ್, ಕೇಬಲ್ ನಾಗರಾಜ್, ಕೇಬಲ್ ಮಹೇಶ್, ಮಹೇಶ್ ಗೌಡ, ವೆಂಕಟೇಶ್, ಶ್ರೀನಿವಾಸ್, ಶ್ರೀಧರ್, ಡೆಲ್ಲಿ ರವಿ, ಕೇಬಲ್ ಪುಟ್ಟರಾಜು, ಅವಿನಾಶ್, ಮಾಯಮ್ಮ, ರೇಖಾ, ರತ್ನಮ್ಮ, ಜಗದೀಶ್, ಪಾಲಿಕೆಯ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಸುಬ್ಬನರಸಮ್ಮ ನಿಧನ



ಮೈಸೂರು, ಅ.9– ಮೈಸೂರು ಮಹಾನಗರ ಪಾಲಿಕೆ ನಿವೃತ್ತ ನೌಕರ ದಿವಂಗತ ಎಂ.ಎಸ್.ಪುಟ್ಟಸ್ವಾಮಿ ಅವರ ಪತ್ನಿ, ಉತ್ತರಾದಿಮಠದ ರಸ್ತೆ ನಿವಾಸಿ ಶ್ರೀಮತಿ ಸುಬ್ಬನರಸಮ್ಮ(84) ಅವರು ಅ.5ರಂದು ನಿಧನರಾದರು. ಇವರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಸವ ಮಾರ್ಗ ಕೇಂದ್ರದಲ್ಲಿ ವ್ಯಸನದ ದುಷ್ಪರಿಣಾಮದ ಬಗ್ಗೆ ಜಾಗೃತಿ



ಮೈಸೂರಿನ ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದಲ್ಲಿ ಸಂತ ಜೋಸೆಫ್ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಕಿರುನಾಟಕದ ಮೂಲಕ ಕುಡಿತದ ದುಷ್ಪರಿಣಾಮಗಳನ್ನು ಮನಮುಟ್ಟಿಸಿದರು.

ಮೈಸೂರು, ಅ.9– ನಗರದ ಹೆಬ್ಬಾಳಿನಲ್ಲಿರುವ ಬಸವ ಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದಲ್ಲಿ ವ್ಯಸನದಿಂದಾಗುವ ದುಷ್ಪರಿಣಾಮ ಕುರಿತ ಜಾಗೃತಿ ಕಾರ್ಯಕ್ರಮವನ್ನು ಗುರುವಾರ ಆಯೋಜಿಸಲಾಗಿತ್ತು.

ಸಂತ ಜೋಸೆಫ್ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಾದ ದೀಕ್ಷಿತ್, ತೇಜಸ್, ಪೂರ್ವ, ನಿಶಾಂತ್, ಶ್ರೇಯಸ್, ಸೂರಜ್, ತೇಜಶ್ರೀ, ಪ್ರಿಯಾ, ತ್ರಿಷಾ, ದೀಪಿಕಾ ಮತ್ತಿತರರು ಕುಡಿತದಿಂದಾಗುವ ದುಷ್ಪರಿಣಾಮಗಳನ್ನು ಮನೋಜ್ಞ ಅಭಿನಯದ ಮೂಲಕ ಶಿಬಿರಾರ್ಥಿಗಳಿಗೆ ಮನದಟ್ಟು ಮಾಡಿದರು.

ಕುಡಿತ ಕೇವಲ ವ್ಯಕ್ತಿಯನ್ನು ಮಾತ್ರ ಬಲಿ ಪಡೆಯುವುದಿಲ್ಲ. ಜೊತೆಗೆ ಅವರ ಅವಲಂಬಿತರ ಬದುಕನ್ನೂ ಬಲಿ ಪಡೆಯುತ್ತದೆ. ಕುಟುಂಬದಲ್ಲಿ ನೆಮ್ಮದಿಯನ್ನೇ ಹಾಳು ಮಾಡುತ್ತದೆ. ಬೆಳೆಯುವ ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಕುಡಿದು ವಾಹನ ಚಲಾಯಿಸುವುದರಿಂದ ಅಪಘಾತ ಸಂಭವಿಸಿ, ಸಾವು–ನೋವು ಉಂಟಾಗುತ್ತದೆ. ಯುವ ಜನರು ದುರಭ್ಯಾಸಕ್ಕೆ ಬೇಗ ಆಕರ್ಷಿತರಾಗುತ್ತಾರೆ. ಕೆಟ್ಟವರ ಸಹವಾಸ ಮಾಡಿ, ಧೂಮಪಾನ, ಮದ್ಯಪಾನ, ಗಾಂಜಾ ವ್ಯಸನಕ್ಕೆ ಬಲಿಯಾಗುತ್ತಿದ್ದಾರೆ. ಈ ಬಗ್ಗೆ ಯುವ ಜನತೆ ಎಚ್ಚೆತ್ತುಕೊಂಡು ಉತ್ತಮ ಹಾದಿಯಲ್ಲಿ ನಡೆಯಬೇಕೆಂದು ಅರಿವು ಮೂಡಿಸಿದರು.

ಈ ವೇಳೆ ಕಾಂಗ್ರೆಸ್ ಮುಖಂಡ ಆರ್.ರವಿ ಮಾತನಾಡಿ, ಕುಡಿತ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ವ್ಯಕ್ತಿಯ ಮಾನಸಿಕ ಸ್ಥಿತಿಯನ್ನು ಬದಲಾಯಿಸುವುದರ ಜೊತೆಗೆ ಖಿನ್ನತೆ, ಮಾನಸಿಕ ಸಮಸ್ಯೆಗೆ ದೂಡುತ್ತದೆ. ಮದ್ಯಪಾನ, ತಂಬಾಕು, ಗಾಂಜಾ ಸೇರಿದಂತೆ ಇತರೆ ಯಾವುದೇ ಮಾದಕ ವಸ್ತುಗಳು ಸಮಾಜದ ಅಭಿವೃದ್ಧಿಗೆ ಎಂದಿಗೂ ಮಾರಕವಾಗಿವೆ. ಈ ಬಗ್ಗೆ ಪ್ರತಿಯೊಬ್ಬರು ಜಾಗೃತರಾಗುವುದು ಅತ್ಯವಶ್ಯ ಎಂದರು.

ಈ ಸಂದರ್ಭದಲ್ಲಿ ಮಕ್ಕಳ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷೆ ಮಂಜುಳಾ, ಸಂತ ಜೋಸೆಫ್ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಪಿ.ಭುವನಶ್ರೀ, ಸಂಸ್ಥೆಯ ವ್ಯವಸ್ಥಾಪಕ ಮಹೇಶ್, ಸಹ ವ್ಯವಸ್ಥಾಪಕ ಮಂಜುನಾಥ್, ಸಿಬ್ಬಂದಿ ಆನಂದ್, ಉಷಾರಾಣಿ, ರಾಧಿಕಾ, ಅರ್ಚಿತ್ ರಾಮ್ ಮತ್ತಿತರರು ಉಪಸ್ಥಿತರಿದ್ದರು.

ಸಿಜೆಐ ಮೇಲೆ ಶೂ ಎಸೆಯಲೆತ್ನ ಪ್ರಕರಣ: ಮೈಸೂರಲ್ಲಿ ಪ್ರಕರಣ ದಾಖಲು

ಮೈಸೂರು, ಅ.9– ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶರ ಕಡೆಗೆ ಶೂ ಎಸೆಯಲು ಯತ್ನಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನಲ್ಲಿ ಗುರುವಾರ ದೂರು ಸಲ್ಲಿಸಲಾಗಿದೆ. ವಕೀಲ ಎನ್.ಪುನೀತ್ ಅವರು ನಗರದ ಲಕ್ಷ್ಮೀಪುರಂ ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದು, ಅ.6ರಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಮೇಲೆ ವಕೀಲ ರಾಕೇಶ್ ಕಿಶೋರ್ ಶೂ ಎಸೆಯಲು ಯತ್ನಿಸಿದ್ದು, ಇದು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧ ಕೃತ್ಯವಾಗಿದೆ. ರಾಕೇಶ್ ಕಿಶೋರ್ ವಿರುದ್ಧ ಎಫ್‌ಐಆರ್ ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಆಗ್ರಹಿಸಿದ್ದಾರೆ.

ಕಾಂಗ್ರೆಸ್ ಹಿಂದುಳಿದ ವರ್ಗಗಳ ಘಟಕದ ವಿಭಾಗೀಯ ಮಟ್ಟದ ಸಭೆ; ಜಾತಿ ಗಣತಿ ಸಮೀಕ್ಷೆ ವಿಚಾರ ಪ್ರಸ್ತಾಪ



ಮೈಸೂರು ವಿಭಾಗೀಯ ಹಿಂದುಳಿದ ವರ್ಗಗಳ ಮುಖಂಡರ ಸಭೆ ಮಂಗಳೂರಿನಲ್ಲಿ ನಡೆಯಿತು.

ಮೈಸೂರು, ಅ.9– ಕರ್ನಾಟಕ ಪ್ರದೇಶ ಕಾಂಗ್ರೆಸ್ ಹಿಂದುಳಿದ ವರ್ಗಗಳ ಘಟಕಗಳ ಮೈಸೂರು ವಿಭಾಗೀಯ ಮಟ್ಟದ ಸಭೆಯನ್ನು ಮಂಗಳೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ನಡೆಸಲಾಯಿತು.

'ಸಾಮಾಜಿಕ ನ್ಯಾಯ ನಮ್ಮ ಸಂವಿಧಾನ ಬದ್ಧವಾದ ಹಕ್ಕು–ನಾವೆಲ್ಲಾ ಒಂದು' ಶೀರ್ಷಿಕೆಯಡಿ ನಡೆದ ಹಿಂದುಳಿದ ವರ್ಗಗಳ ಮುಖಂಡರ ಸಭೆಯಲ್ಲಿ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಸಂಬಂಧ ಸುದೀರ್ಘ ಚರ್ಚೆ ನಡೆಸಲಾಯಿತು.

ಸಮೀಕ್ಷೆಯಲ್ಲಿ ಬರುವ ಅಂಕಿ ಅಂಶವೇ ಮಾನದಂಡ. ಹಾಗಾಗಿ ನಾವೆಲ್ಲರೂ ಸಕ್ರಿಯವಾಗಿ ಗಣತಿ ಕಾರ್ಯದಲ್ಲಿ ಭಾಗವಹಿಸಬೇಕು. ಗಣತಿಯನ್ನು ವಿರೋಧಿಸುವ ಪಟ್ಟಭದ್ರ ಶಕ್ತಿಗಳ ದುರಾಲೋಚನೆಯನ್ನು ಜನರಿಗೆ ಮನವರಿಕೆ ಮಾಡಿಕೊಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಮುಖಂಡರೂ ಸೂಚಿಸಿ, ಈ ಸಂಬಂಧ ಒಕ್ಕೊರಲಿನ ತೀರ್ಮಾನ ಕೈಗೊಳ್ಳಲಾಯಿತು.

ಹಿಂದುಳಿದ ವರ್ಗಗಳ ರಾಜ್ಯಾಧ್ಯಕ್ಷರೂ ಆದ ಶಿಕ್ಷಣ ಸಚಿವ ಎಸ್.ಮಧು ಬಂಗಾರಪ್ಪ, ವಿಧಾನಪರಿಷತ್ ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ಮಾಜಿ ಸಚಿವ ವಿನಯ್‌ಕುಮಾರ್ ಸೊರಕೆ, ಸಾಗರ ಶಾಸಕ ಗೋಪಾಲಕೃಷ್ಣ ಬೇಳೂರು, ಶಿರಸಿ ಶಾಸಕ ಭೀಮಣ್ಣನಾಯ್ಕ, ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್, ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ, ನಾರಾಯಣ ಗುರುಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಮಂಜುನಾಥ್ ಪೂಜಾರಿ, ದಕ್ಷಿಣ ಕನ್ನಡ ಜಿಲ್ಲಾ ಹಿಂದುಳಿದ ವರ್ಗಗಳ ಅಧ್ಯಕ್ಷ ವಿಶ್ವಾಸ್ ಕುಮಾರ್‌ದಾಸ್, ಮೆಸ್ಕಾಂ ನಿಗಮದ ಅಧ್ಯಕ್ಷ ಕೆ.ಹರೀಶ್‌ಕುಮಾರ್, ಎಐಸಿಸಿ ಕಾರ್ಯದರ್ಶಿ ಪಿ.ವಿ.ಮೋಹನ್, ಮುಖ್ಯಮಂತ್ರಿ ವೈದ್ಯಕೀಯ ಸಲಹೆಗಾರ ಡಾ.ರವಿಕುಮಾರ್, ಕಾಂಗ್ರೆಸ್ ಮುಖಂಡರಾದ ರವಿ ಬೋಸರಾಜ್, ಪದ್ಮರಾಜ್, ರಕ್ಷಿತ್ ಶಿವರಾಂ, ರಾಜ್ಯ ಸಂಯೋಜಕರಾದ ಜಿ.ಡಿ.ಮಂಜುನಾಥ್, ಶಿವಮೊಗ್ಗ ಜಿಲ್ಲಾ ಅಧ್ಯಕ್ಷ ಶಂಕರಘಟ್ಟ ರಮೇಶ್ ಶೆಟ್ಟಿ, ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ಮೈಸೂರು ನಗರಾಧ್ಯಕ್ಷ ಎನ್.ಆರ್. ನಾಗೇಶ್, ಚಾಮರಾಜನಗರ ಜಿಲ್ಲಾ ಅಧ್ಯಕ್ಷ ಆರ್.ಚೇತನ್ ಕುಮಾರ್, ಮಂಡ್ಯ ಜಿಲ್ಲಾಧ್ಯಕ್ಷ ಕೃಷ್ಣ, ಹಾಸನ ಜಿಲ್ಲಾಧ್ಯಕ್ಷ ನಾಗರಾಜ್ ಸೇರಿದಂತೆ ಅನೇಕ ಗಣ್ಯರು, ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮತ್ತೆ ತೆರೆಯಿತು 'ಬಿಗ್ ಬಾಸ್' ಮನೆ



ಸ್ಪರ್ಧಿಗಳು ಮನೆ ಪ್ರವೇಶಿಸುತ್ತಿರುವುದು.

ರಾಮನಗರ, ಅ.9– ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿಯಮದ ಉಲ್ಲಂಘನೆ ಮೇರೆಗೆ ಮುಚ್ಚಲ್ಪಟ್ಟಿದ್ದ ಬಿಗ್ ಬಾಸ್ ಮನೆ ಮತ್ತೆ ತೆರೆದಿದೆ. ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಮಧ್ಯ ಪ್ರವೇಶದ ಬೆನ್ನಲ್ಲೇ ಮಧ್ಯರಾತ್ರಿಯೇ ಸೀಜ್ ಮಾಡಲಾಗಿದ್ದ ಬಿಗ್ ಬಾಸ್ ಮನೆಯನ್ನು ತೆರೆಯಲಾಗಿದೆ.

ನಸುಕಿನ ಜಾವ 2.45ಕ್ಕೆ ಜಿಲ್ಲಾಧಿಕಾರಿ ಯಶವಂತ್ ವಿ ಗುರುಕರ್, ಎಸ್‌ಪಿ ಶ್ರೀನಿವಾಸ್ ಗೌಡ, ತಹಶೀಲ್ದಾರ್ ತೇಜಸ್ವಿನಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಆಗಮಿಸಿ ಜಾಲಿವುಡ್ ಸ್ಟುಡಿಯೋದ ಗೇಟ್ ಸೀಲ್ ಓಪನ್ ಮಾಡಿದ್ದಾರೆ.

ಈ ವೇಳೆ ಪ್ರತಿಕ್ರಿಯೆ ನೀಡಿದ ಬೆಂಗಳೂರು ದಕ್ಷಿಣ ಜಿಲ್ಲಾಧಿಕಾರಿ ಯಶವಂತ್ ವಿ ಗುರುಕರ್, ಡಿಸಿಎಂ ಡಿ.ಕೆ.ಶಿವ ಕುಮಾರ್ ಅವರ ನಿರ್ದೇಶನದಂತೆ ತೆರೆದಿದ್ದೇವೆ. ಜಾಲಿವುಡ್ ಸಂಪೂರ್ಣ ಕಾರ್ಯಾಚರಣೆ ನಡೆಸಲು ಅವಕಾಶ ನೀಡಿಲ್ಲ. ಕೇವಲ ಬಿಗ್ ಬಾಸ್ ಶೋ ಸ್ಪರ್ಧಿಗಳು, ಸಿಬ್ಬಂದಿ ಓಡಾಟ ಹಾಗೂ ಅಗತ್ಯ ವಸ್ತುಗಳ ಬಳಕೆಗೆ ಮಾತ್ರ ಅವಕಾಶ ನೀಡಲಾಗಿದೆ. ಬಿಗ್ ಬಾಸ್ ಶೂಟಿಂಗ್ ಆರಂಭದ ಬಗ್ಗೆ ನಾಳೆ ತೀರ್ಮಾನ ಆಗಲಿದೆ ಎಂದು ತಿಳಿಸಿದರು.

ರಾತ್ರೋರಾತ್ರಿ ಮನೆಗೆ ವಾಪಸ್ ಆದ ಸ್ಪರ್ಧಿಗಳು: ಬಿಗ್ ಬಾಸ್ ಶೋ ನಡೆಯುವ ಜಾಗ ಮಾತ್ರ ತೆರೆಯಲಾಗಿದೆ. ರಾತ್ರೋ ರಾತ್ರಿ ಬಿಗ್ ಬಾಸ್ ಸಿಬ್ಬಂದಿ ಕ್ಯಾಬ್ ಮೂಲಕ ಆಗಮಿಸಿದ್ದಾರೆ. ಇದರ ಜೊತೆ ಬಿಡದಿಯ ರೆಸಾರ್ಟ್‌ನಲ್ಲಿದ್ದ ಸ್ಪರ್ಧಿಗಳು ಮತ್ತೆ ಮನೆಗೆ ಬಂದಿದ್ದಾರೆ.

ಬಿಗ್‌ಬಾಸ್ ಶೋ ಮತ್ತೆ ಪ್ರಾರಂಭ ಆಗುವಲ್ಲಿ ಕಿಚ್ಚ ಸುದೀಪ್ ಅವರ ಶ್ರಮ ಸಾಕಷ್ಟಿದೆ. ಅವರ ಕೆಲವು ಕರೆಗಳಿಂದಲೇ ಶೋ ಪುನಃ ಪ್ರಾರಂಭಕ್ಕೆ ಅವಕಾಶ ದೊರೆತಿದೆ ಎನ್ನಲಾಗಿದೆ. ಜಾಲಿವುಡ್‌ಗೆ ಬೀಗ ಹಾಕುವುದಕ್ಕೂ ಬಿಗ್‌ಬಾಸ್ ಶೋಗೂ ಸಂಬಂಧವಿಲ್ಲ ಎಂದ ಬಳಿಕ ಕಿಚ್ಚ ಸುದೀಪ್ ಅವರು ಕೆಲ ರಾಜಕಾರಣಿಗಳಿಗೆ ಕರೆ ಮಾಡಿ, ಏನೂ ತಪ್ಪಿಲ್ಲದ ಬಿಗ್‌ಬಾಸ್ ಶೋ ಅನ್ನು ಮತ್ತೆ ನಡೆಸಿಕೊಡಲು ಅನುಮತಿ ನೀಡುವಂತೆ ಮನವಿ ಮಾಡಿದ್ದರು. ಅವರೇ ಹೇಳಿರುವಂತೆ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ಕರೆ ಮಾಡಿ ಮನವಿ ಮಾಡಿದ್ದರಂತೆ. ಸುದೀಪ್ ಅವರ ಈ ಕಾರ್ಯದಲ್ಲಿ ನಲಪಾಡ್ ಸಹ ಸಹಾಯ ಮಾಡಿದ್ದಾಗಿ ಅವರೇ ಹೇಳಿಕೊಂಡಿದ್ದಾರೆ.

ಮೈಸೂರು ಪಾಲಿಕೆ ಒಳ ಚರಂಡಿ ವಿಭಾಗದ ಪೌರ ಕಾರ್ಮಿಕರ ಖಾಯಂಗೆ ಸಿಎಂ ಪೂರಕ ಸ್ಪಂದನೆ

●ಪೌರ ಕಾರ್ಮಿಕರ ಸಂಘದ ಗೌರವಾಧ್ಯಕ್ಷರೂ ಆದ ಮಾಜಿ ಮೇಯರ್ ನಾರಾಯಣ್ ಮಾಹಿತಿ ●ತಮ್ಮ ಹೋರಾಟದ ಫಲವಾಗಿ ಒಳ ಚರಂಡಿ ಪೌರ ಕಾರ್ಮಿಕರ ವೇತನ 8 ರಿಂದ 18 ಸಾವಿರಕ್ಕೆ ಹೆಚ್ಚಳ



ನಾರಾಯಣ್

ಮೈಸೂರು, ಅ.9(ಎಂಟಿವೈ)– ಮೈಸೂರು ಮಹಾನಗರ ಪಾಲಿಕೆ ಸೇರಿದಂತೆ ರಾಜ್ಯದ ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ಒಳಚರಂಡಿ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಪೌರ ಕಾರ್ಮಿಕರನ್ನು ಖಾಯಂಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದು, ಅದಕ್ಕೆ ಅವರು ಪೂರಕವಾಗಿ ಸ್ಪಂದಿಸಿದ್ದಾರೆ ಎಂದು ಮೈಸೂರು ಮಹಾನಗರ ಪಾಲಿಕೆಯ ಒಳಚರಂಡಿ ಸಹಾಯಕ ಹಾಗೂ ಪೌರ ಕಾರ್ಮಿಕರ ಸಂಘದ ಗೌರವಾಧ್ಯಕ್ಷ ಮಾಜಿ ಮೇಯರ್ ನಾರಾಯಣ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ 10 ನಗರ ಪಾಲಿಕೆಗಳಲ್ಲಿ 899 ಮಂದಿ ಒಳ ಚರಂಡಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರದು ಕಷ್ಟಕರ ಕೆಲಸ. ಹಲವರು ಕೆಲಸದ ವೇಳೆ ಪ್ರಾಣವನ್ನೇ ಕಳೆದುಕೊಂಡಿದ್ದಾರೆ. ಒಳಚರಂಡಿ ವಿಭಾಗದಲ್ಲಿ ಕೆಲಸ ಮಾಡುತ್ತಿರುವವರಲ್ಲಿ ಅನೇಕರನ್ನು ಇಂದಿಗೂ ಖಾಯಂ ಮಾಡಿಲ್ಲ. ಹೀಗಾಗಿ ಎಲ್ಲರನ್ನೂ ಖಾಯಂಗೊಳಿಸಬೇಕೆಂದು ಸಿಎಂಗೆ ಮನವಿ ಮಾಡಲಾಗಿದ್ದು, ಅದಕ್ಕೆ ಪೂರಕವಾಗಿ ಸ್ಪಂದಿಸಿದ್ದಾರೆ ಎಂದರು.

2020–21ನೇ ಸಾಲಿನಲ್ಲಿ 231 ಮಂದಿ ಸೇರಿ ಮೈಸೂರು ಮಹಾನಗರ ಪಾಲಿಕೆಯ ಒಳಚರಂಡಿ ಸಹಾಯಕ ಹಾಗೂ ಪೌರ ಕಾರ್ಮಿಕರ ಸಂಘವನ್ನು ಸ್ಥಾಪಿಸಲಾಗಿದ್ದು, ಒಳಚರಂಡಿ ವಿಭಾಗದ ಪೌರಕಾರ್ಮಿಕರ ಪರ ಹಲವು ಹೋರಾಟ ನಡೆಸಲಾಗಿದೆ. ಈ ಹಿಂದೆ ಒಳಚರಂಡಿ ವಿಭಾಗದ ಪೌರ ಕಾರ್ಮಿಕರಿಗೆ ಕೇವಲ 7 ಸಾವಿರ ರೂ. ವೇತನ ನೀಡಲಾಗುತ್ತಿತ್ತು. ನಮ್ಮ ಹೋರಾಟದ ಫಲವಾಗಿ ಇಂದು ವೇತನ 18 ಸಾವಿರ ರೂ. ಆಗಿದೆ. ಸಂಘದ ವತಿಯಿಂದ 6 ತಿಂಗಳಿಗೊಮ್ಮೆ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗುತ್ತಿದೆ.

ನೂತನ ಪದಾಧಿಕಾರಿಗಳ ಆಯ್ಕೆ: ಇದೇ ವೇಳೆ ಸಂಘದ ನೂತನ ಪದಾಧಿಕಾರಿಗಳ ಹೆಸರು ಪ್ರಕಟಿಸಲಾಯಿತು. ಗೌರವಾಧ್ಯಕ್ಷ ನಾರಾಯಣ್, ಅಧ್ಯಕ್ಷರಾಗಿ ಶಂಕರ, ಪ್ರಧಾನ ಕಾರ್ಯದರ್ಶಿಯಾಗಿ ಆರ್.ಲೋಕೇಶ್, ಗೌರವ ಉಪಾಧ್ಯಕ್ಷರಾಗಿ ಆರ್. ಶಿವಣ್ಣ, ಉಸ್ತುವಾರಿ ಅಧ್ಯಕ್ಷರಾಗಿ ಕೆ.ಸೋಮು, ಕಾರ್ಯಾಧ್ಯಕ್ಷರಾಗಿ ಸಿ.ಪಿ.ರಾಜೀವ್‌ಕುಮಾರ್, ಉಪಾಧ್ಯಕ್ಷರಾಗಿ ಲಕ್ಷ್ಮಣ್ ಹಾಗೂ ಇನ್ನಿತರ ಹುದ್ದೆಗಳಿಗೆ ಆಯ್ಕೆಯಾಗಿರುವವರ ಹೆಸರನ್ನು ಪ್ರಕಟಿಸಲಾಯಿತು.

ಇದೇ ವೇಳೆ ಮೈಸೂರು ಮಹಾನಗರ ಪಾಲಿಕೆ ಒಳ ಚರಂಡಿ ಸಹಾಯಕ ಹಾಗೂ ಪೌರ ಕಾರ್ಮಿಕರ ಸಂಘದ ವತಿಯಿಂದ ಮಾಜಿ ಮೇಯರ್ ನಾರಾಯಣ ಅವರನ್ನು ಸನ್ಮಾನಿಸಲಾಯಿತು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಮಹಾ ನಗರ ಪಾಲಿಕೆ ಒಳ ಚರಂಡಿ ಸಹಾಯಕ ಹಾಗೂ ಪೌರ ಕಾರ್ಮಿಕರ ಸಂಘದ ಪದಾಧಿಕಾರಿಗಳಾದ ಶಂಕರ, ಆರ್. ಲೋಕೇಶ್, ಆರ್. ಶಿವಣ್ಣ, ಕೆ. ಸೋಮು, ಸಿ.ಪಿ. ರಾಜೀವ್‌ಕುಮಾರ್, ಲಕ್ಷ್ಮಣ್ ಇನ್ನಿತರರು ಇದ್ದರು.

ಅಗ್ನಿ ದುರಂತದಲ್ಲಿ ಸಾವನ್ನಪ್ಪಿದ ಬಾಲಕನ ಕುಟುಂಬದವರಿಗೆ 5 ಲಕ್ಷ ರೂ. ಪರಿಹಾರ


ಗಾಯಾಳುಗಳ ಆರೋಗ್ಯ ವಿಚಾರಿಸುತ್ತಿರುವ ಪೊನ್ನಣ್ಣ.

ಮಡಿಕೇರಿ,ಅ.9– ಹೆರವನಾಡು ಗ್ರಾಮದ ಕಾಟಕೇರಿ ಸಮೀಪ ದೆಹಲಿಯ ಎನ್‌ಜಿಓ ಸಂಸ್ಥೆ ನಡೆಸುತ್ತಿರುವ ಹರ್ ಮಂದಿರ್ ಆಶ್ರಮ ಶಾಲೆ ವಸತಿ ನಿಲಯದಲ್ಲಿ ಗುರುವಾರ ಸಂಭವಿಸಿದ ಬೆಂಕಿ ಅವಘಡದಲ್ಲಿ ಮೃತಪಟ್ಟ ವಿದ್ಯಾರ್ಥಿಯ ಕುಟುಂಬಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 5 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ ಎಂದು ವಿರಾಜಪೇಟೆ ಕ್ಷೇತ್ರ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಮಾಹಿತಿ ನೀಡಿದರು.

ವಸತಿ ಶಾಲೆಯಲ್ಲಿ ಬೆಂಕಿ ಅವಘಡ ಸಂಭವಿಸಿದ ಪರಿಣಾಯ ಗಾಯಗಳಾಗಿ ಜಿಲ್ಲಾಸ್ಪತ್ರೆಯ ತುರ್ತು ವೈದ್ಯಕೀಯ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಇಬ್ಬರು ವಿದ್ಯಾರ್ಥಿಗಳು ಮತ್ತು ವಾರ್ಡನ್ ಅವರನ್ನು ಭೇಟಿಯಾದ ಶಾಸಕ ಪೊನ್ನಣ್ಣ ಅವರ ಆರೋಗ್ಯ ವಿಚಾರಿಸಿ ಧೈರ್ಯ ತುಂಬಿ ಸಾಂತ್ವನ ಹೇಳಿದರು. ಘಟನೆ ಕುರಿತು ವಿದ್ಯಾರ್ಥಿಗಳು ಹಾಗೂ ವಾರ್ಡನ್ ಅವರಿಂದ ಮಾಹಿತಿ ಪಡೆದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಪೊನ್ನಣ್ಣ, ಘಟನೆ ತಿಳಿದ ಸಂದರ್ಭ ಬೆಂಗಳೂರಿನಲ್ಲಿ ನಡೆದ ಕ್ಯಾಬಿನೆಟ್‌ನಲ್ಲಿ ಪಾಲ್ಗೊಂಡಿದ್ದೆ. ಬೆಂಕಿ ಅವಘಡದಲ್ಲಿ 2ನೇ ತರಗತಿಯ ವಿದ್ಯಾರ್ಥಿ ಓರ್ವ ಸಾವನ್ನಪ್ಪಿದ್ದಾನೆ ಎಂದು ಮುಖ್ಯಮಂತ್ರಿಗಳ ಗಮನಕ್ಕೆ ತಂದ ಸಂದರ್ಭ ತಕ್ಷಣವೇ ಸ್ಪಂದಿಸಿದ ಅವರು 5 ಲಕ್ಷ ಪರಿಹಾರ ಘೋಷಿಸಿದ್ದಾರೆ ಎಂದು ಮಾಹಿತಿ ತಿಳಿಸಿದರು.

ಗ್ರಾಮಸ್ಥರು, ವಿದ್ಯಾರ್ಥಿಗಳು ಮತ್ತವರ ಪೋಷಕರನ್ನು ಶಾಲೆಯ ಬಗ್ಗೆ ವಿಚಾರಿಸಿದ ಸಂದರ್ಭ ಎನ್‌ಜಿಓ ಸಂಸ್ಥೆ ನಡೆಸುತ್ತಿರುವ ಶಾಲೆಯ ಬಗ್ಗೆ ಉತ್ತಮ ಪ್ರತಿಕ್ರಿಯೆ ನೀಡಿದ್ದಾರೆ. ಬಡ ವರ್ಗದ ವಿದ್ಯಾರ್ಥಿಗಳೇ ಅಲ್ಲಿ ಉಚಿತ ಶಿಕ್ಷಣ ಪಡೆಯುತ್ತಿರುವ ಮಾಹಿತಿ ಇದೆ. ಈಗಾಗಲೇ ಜಿಲ್ಲಾಧಿಕಾರಿಗಳ ಸಹಿತ ಜಿಲ್ಲಾ ಮಟ್ಟದ ಅಧಿಕಾರಿಗಳು ಘಟನಾ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ತನಿಖೆಗೆ ಸೂಚಿಸಿದ್ದಾರೆ. ಮೇಲ್ನೋಟಕ್ಕೆ ಇದು ವಿದ್ಯುತ್ ಅವಘಡದಿಂದ ಸಂಭವಿಸಿದೆ ಎಂದು ತಿಳಿದು ಬಂದಿದ್ದು, ಪೂರ್ಣ ತನಿಖೆಯಿಂದ ಸತ್ಯಾಂಶ ಹೊರ ಬರಲಿದೆ ಎಂದು ಹೇಳಿದರು. ಶಾಲೆಯಲ್ಲಿ ಸುರಕ್ಷತಾ ಕ್ರಮಗಳ ಬಗ್ಗೆ ನಿರ್ಲಕ್ಷ್ಯ ವಹಿಸಲಾಗಿದ್ದರೆ ಸೂಕ್ತ ಕ್ರಮವೂ ಆಗಬೇಕು ಎಂದು ಶಾಸಕ ಪೊನ್ನಣ್ಣ ಅಭಿಪ್ರಾಯ ವ್ಯಕ್ತಪಡಿಸಿದರು. ಘಟನೆ ನಡೆದ ಸಂದರ್ಭ ಅಲ್ಲಿದ್ದ ಹಿರಿಯ 4 ಮಂದಿ ವಿದ್ಯಾರ್ಥಿಗಳು ಸಮಯ ಪ್ರಜ್ಞೆ ಮೆರೆದಿದ್ದು, ಅವರಿಗೂ ಜಿಲ್ಲೆಯ ಜನತೆಯ ಪರವಾಗಿ ಧನ್ಯವಾದ ಸಲ್ಲಿಸುತ್ತೇನೆ ಎಂದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ ಕೈಜೋಡಿಸಿ


ಅಧಿಕಾರಿಗಳ ಸಭೆ ನಡೆಸುತ್ತಿರುವ ಜಿಲ್ಲಾಧಿಕಾರಿ ವೆಂಕಟ್ ರಾಜಾ .

ಮಡಿಕೇರಿ, ಅ.9– ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಹಾಗೂ ಇತರೆ ಚುನಾವಣೆ ವಿಷಯಗಳ ಕುರಿತು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರ ಅಧ್ಯಕ್ಷತೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಪ್ರಮುಖರೊಂದಿಗೆ ಗುರುವಾರ ಸಭೆ ನಡೆಸಿದರು.

ನಗರದ ಜಿಲ್ಲಾಧಿಕಾರಿ ಅವರ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಅವರು ಭಾರತ ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು ಪ್ರಾರಂಭಿಸಲು ನಿರ್ಧರಿಸಿದೆ. ಈ ಹಿನ್ನೆಲೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕುರಿತಂತೆ ಜಿಲ್ಲೆಯಲ್ಲಿಯೂ ಸಹ ಪೂರ್ವ ಸಿದ್ಧತೆ ಕೈಗೊಳ್ಳಲಾಗಿದೆ ಎಂದರು. 2002 ರಲ್ಲಿ ರಾಜ್ಯದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ನಡೆಸಲಾಗಿತ್ತು, ಆ ದಿಸೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಬೂತ್ ಮಟ್ಟದ ಏಜೆಂಟರನ್ನು ನೇಮಿಸಿಕೊಳ್ಳುವಂತಾಗಬೇಕು ಎಂದು ಕೋರಿದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧಿಸಿದಂತೆ ನಮೂನೆ–6 ರಲ್ಲಿ ಮತದಾರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ನಮೂನೆ–07 ಮತದಾರರ ಪಟ್ಟಿಯಿಂದ ಹೆಸರು ತೆಗೆಯುವುದು, ನಮೂನೆ–08 ರಲ್ಲಿ ತಿದ್ದುಪಡಿ, ಸ್ಥಳಾಂತರ, ಎಪಿಕ್ ಕಾರ್ಡ್ ಬದಲಾವಣೆ, ಪಿಡಬ್ಲ್ಯುಡಿ ಮಾರ್ಕಿಂಗ್ (ವಿಕಲಚೇತನರನ್ನು ಗುರುತಿಸುವುದು) ಈ ಕೆಲಸವನ್ನು ಬೂತ್ ಮಟ್ಟದ ಏಜೆಂಟರು ಮಾಡಿದ್ದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣಾ ಕಾರ್ಯ ಸಮರ್ಪಕವಾಗಲಿದೆ ಎಂದರು. ಬೂತ್ ಮಟ್ಟದಲ್ಲಿ ಮತದಾರರ ವಿವರ, ನಮೂನೆ–6, 07 ಮತ್ತು 08 ರ ಬಗ್ಗೆ ಸ್ಥಳೀಯರಿಗೆ ಮಾಹಿತಿ ನೀಡುವಂತಾಗಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ಸಲಹೆ ಮಾಡಿದರು.

ವಿವಿಧ ರಾಜಕೀಯ ಪಕ್ಷಗಳು ತಾವು ನೇಮಕ ಮಾಡುವ ಬೂತ್ ಮಟ್ಟದ ಏಜೆನ್ಸಿಗಳ ಪಟ್ಟಿಯನ್ನು ಜಿಲ್ಲಾ ಚುನಾವಣಾ ಕಚೇರಿಗೆ ಒದಗಿಸುವಂತಾಗಬೇಕು. ಆ ನಿಟ್ಟಿನಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧ ಎಲ್ಲೆಡೆ ಜಾಗೃತಿ ಮೂಡಿಸುವಂತಾಗಬೇಕು ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ವಿವಿಧ ಪಕ್ಷದ ಪ್ರಮುಖರಾದ ತೆನ್ನಿರಾ ಮೈನಾ(ಕಾಂಗ್ರೆಸ್), ಸಜ್ಜಿಲ್ ಕೃಷ್ಣ(ಬಿಜೆಪಿ), ಗುಲಾಬಿ ಜನಾರ್ದನ(ಜೆಡಿಎಸ್), ರಮೇಶ್(ಸಿಪಿಐಎಂ), ಸೋಮಪ್ಪ (ಸಿಪಿಐ), ಪೃಥ್ವಿ(ಎಎಪಿ) ಅವರು ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಹಾಗೂ ಬೂತ್ ಮಟ್ಟದ ಏಜೆಂಟರ ನೇಮಕ ಸಂಬಂಧಿಸಿದಂತೆ ಹಲವು ಮಾಹಿತಿ ನೀಡಿದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ: ವಿರಾಜಪೇಟೆ ಶಾಖಾ ವ್ಯಾಪ್ತಿಯ ಬಿ ಶೆಟ್ಟಿಗೇರಿ ಮಾರ್ಗದಲ್ಲಿ ಕೊಡಗು ವಿದ್ಯುತ್ ಜಾಲದ ಬಲವರ್ಧನೆ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ, ಅ.10 ರಂದು ಬೆಳಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ವಿರಾಜಪೇಟೆ ಪಟ್ಟಣದ ಪಂಜರಪೇಟೆ, ಕಲ್ಲುಬಾಣೆ, ನಿಸರ್ಗ ಬಡಾವಣೆ, ಕಾವೇರಿ ಕಾಲೇಜು, ಚಾಮುಂಡಿ ಬಡಾವಣೆ ಮತ್ತು ಬಿ.ಶೆಟ್ಟಿಗೇರಿ ಫೀಡರ್‌ನ ಬಿಟ್ಟಂಗಾಲ, ಬಾಳುಗೋಡು, ವಿ ಬಾಡಗ, ಕುಟ್ಟಂದಿ, ಕೊಂಗಾಣ, ಟಿ.ಶೆಟ್ಟಿಗೇರಿ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಅ.12 ರಂದು ಕಬಡ್ಡಿ ಪಂದ್ಯಾವಳಿ

ಆಹ್ವಾನ ಪತ್ರಿಕೆ, ಟ್ರೋಫಿಗಳ ಅನಾವರಣ



ಕಬಡ್ಡಿ ಪಂದ್ಯಾವಳಿಯ ಆಹ್ವಾನ ಪತ್ರಿಕೆ ಮತ್ತು ಟ್ರೋಫಿಗಳ ಬಿಡುಗಡೆ ಸಂದರ್ಭ.

ಮಡಿಕೇರಿ,ಅ.9– ಮಡಿಕೇರಿ ದಸರಾ ಕ್ರೀಡಾ ಸಮಿತಿಯಿಂದ ಅ.12ರಂದು ನಗರದ ಗಾಂಧಿ ಮೈದಾನದಲ್ಲಿ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ ನಡೆಯಲಿದ್ದು, ಪಂದ್ಯಾವಳಿಯ ಆಹ್ವಾನ ಪತ್ರಿಕೆ ಮತ್ತು ಆಕರ್ಷಕ ಟ್ರೋಫಿಗಳನ್ನು ಸಮಿತಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಅನಾವರಣಗೊಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಅಧ್ಯಕ್ಷ ಪ್ರದೀಪ್ ಕರ್ಕೆರ, ದಸರಾ ಉತ್ಸವದ ಸಂದರ್ಭ ನಡೆಯಬೇಕಿದ್ದ ಕಬಡ್ಡಿ ಪಂದ್ಯಾವಳಿಯನ್ನು ಮಳೆಯ ಕಾರಣಗಳ ಹಿನ್ನೆಲೆ ಇದೀಗ ನಡೆಸಲಾಗುತ್ತಿದೆ. ಪಂದ್ಯಾವಳಿ ಮುಕ್ತವಾಗಿದ್ದು, ಸುಮಾರು 20 ತಂಡಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಪುರುಷರ ವಿಭಾಗದ ಕಬಡ್ಡಿ ಪಂದ್ಯಾವಳಿಗೆ ಪ್ರವೇಶ ಶುಲ್ಕವಾಗಿ ಪ್ರತಿ ತಂಡಕ್ಕೆ 10 ಸಾವಿರ ರೂ, ಮಹಿಳಾ ವಿಭಾಗಕ್ಕೆ 2 ಸಾವಿರ ರೂ. ಪ್ರವೇಶ ಶುಲ್ಕವನ್ನು ನಿಗದಿಪಡಿಸಲಾಗಿದೆ. ಪಂದ್ಯಾವಳಿ ನಡೆಯುವ ದಿನದವರೆಗೆ ತಂಡಗಳು ನೋಂದಣಿ ಮಾಡಿಕೊಳ್ಳಬಹುದಾಗಿದೆ. ಪಂದ್ಯಾವಳಿ ಮಧ್ಯಾಹ್ನ 2 ಗಂಟೆಗೆ ಆರಂಭಗೊಳ್ಳಲಿದ್ದು ಅಂತಿಮ ಪಂದ್ಯವು ಅಂದು ರಾತ್ರಿಯೆ ಹೊನಲು ಬೆಳಕಿನಡಿ ನಡೆಯಲಿದೆ ಎಂದು ಸ್ಪಷ್ಟಪಡಿಸಿದರು.

ವಿಜೇತರಿಗೆ ಲಕ್ಷ ಬಹುಮಾನ: ಕಬಡ್ಡಿ ಪಂದ್ಯಾವಳಿ ವಿಜೇತ ತಂಡಕ್ಕೆ 1 ಲಕ್ಷದ 1 ರೂ, ದ್ವಿತೀಯ 50 ಸಾವಿರದ 1 ರೂ, ತೃತೀಯ 25 ಸಾವಿರದ 1 ರೂ. ಹಾಗೂ ಮಹಿಳಾ ಮಹಿಳಾ ವಿಭಾಗದಲ್ಲಿ ಪ್ರಥಮ 15 ಸಾವಿರದ 1 ರೂ, ದ್ವಿತೀಯ 10 ಸಾವಿರದ 1 ರೂ. ಸಹಿತ ಅತ್ಯಾಕರ್ಷಕ ಟ್ರೋಫಿಯನ್ನು ಬಹುಮಾನವಾಗಿ ನೀಡಲಾಗುವುದು ಎಂದು ಮಾಹಿತಿ ನೀಡಿದರು. ಪಂದ್ಯಾವಳಿಯ ವಿಜೇತರಿಗೆ ನೀಡುವ ಅತ್ಯಾಕರ್ಷಕ ಟ್ರೋಫಿಗಳನ್ನು ಸಮಿತಿ ಅಧ್ಯಕ್ಷ ಪ್ರದೀಪ್ ಕರ್ಕೆರ ಮತ್ತು ಪದಾಧಿಕಾರಿಗಳು ಅನಾವರಣಗೊಳಿಸಿದರು. ಆಹ್ವಾನ ಪತ್ರಿಕೆಯನ್ನು ಬಿಡುಗಡೆ ಮಾಡಿದರು.

ಮುತ್ತವ್ವ ನಿಧನ



ನಾಪೋಕ್ಲು, ಅ.9– ಪೇರೂರು ಗ್ರಾಮದ ನಿವಾಸಿ ಬಲ್ಲಮಾವಟಿ ಗ್ರಾಮ ಪಂಚಾಯಿತಿಯ ಮಾಜಿ ಮಂಡಲ ಪ್ರಧಾನ ಮೂವೇರ ನಾಣಪ್ಪ ಅವರ ಧರ್ಮಪತ್ನಿ ಮುತ್ತವ್ವ(80) ಗುರುವಾರ ನಿಧನರಾದರು.

ಮೃತರ ಅಂತ್ಯಕ್ರಿಯೆ ಶುಕ್ರವಾರ ಪೇರೂರು ಗ್ರಾಮದಲ್ಲಿರುವ ಕುಟುಂಬಸ್ಥರ ರುದ್ರಭೂಮಿಯಲ್ಲಿ ನಡೆಯಲಿದೆ. ಮೃತರು ಪತಿ ಮೂವೇರ ನಾಣಪ್ಪ, ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

ರಸ್ತೆ ಅಭಿವೃದ್ಧಿಗೆ ಆಗ್ರಹಿಸಿ ಮಂಡ್ಯ–ಪಾಂಡವಪುರ ಮುಖ್ಯ ರಸ್ತೆ ತಡೆದು ಗ್ರಾಮಸ್ಥರ ಪ್ರತಿಭಟನೆ

ಕೆಲಕಾಲ ಸಂಚಾರ ಅಸ್ತವ್ಯಸ್ತ, ಅಧಿಕಾರಿಗಳ ವಿರುದ್ಧ ಆಕ್ರೋಶ

ಸ್ಥಳಕ್ಕೆ ಭೇಟಿ ನೀಡಿದ ಪಿಡಬ್ಲ್ಯೂಡಿ ಅಧಿಕಾರಿಗೆ ಬೈಕಿನಲ್ಲಿ ಕರೆದೊಯ್ದು ರಸ್ತೆಗಳ ದರ್ಶನ



ಸಂಪರ್ಕ ರಸ್ತೆಯನ್ನು ಅಭಿವೃದ್ಧಿಪಡಿಸುವಂತೆ ಆಗ್ರಹಿಸಿ ಚಿಕ್ಕಮರಳಿ ಗ್ರಾಮಸ್ಥರು ಗುರುವಾರ ಪ್ರತಿಭಟನೆ ನಡೆಸಿದರು.

ಪಾಂಡವಪುರ, ಅ.9– ರಸ್ತೆ ಅಭಿವೃದ್ಧಿಪಡಿಸುವಂತೆ ಆಗ್ರಹಿಸಿ ಚಿಕ್ಕಮರಳಿ ಗ್ರಾಮಸ್ಥರು ಮಂಡ್ಯ–ಪಾಂಡವಪುರ ಮುಖ್ಯರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಮಂಡ್ಯ–ಪಾಂಡವಪುರ ಮುಖ್ಯ ರಸ್ತೆಯ ಮಡಿಕೆಪಟ್ಟಣ ಗೇಟ್ ಬಳಿ ಸೇರಿದ ಚಿಕ್ಕಮರಳಿ ಗ್ರಾಮಸ್ಥರು, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು, ಶಾಸಕರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮಂಡ್ಯ–ಪಾಂಡವಪುರ ಮುಖ್ಯರಸ್ತೆಯ ಚಿಕ್ಕಮರಳಿ ಗೇಟ್ ಬಳಿ ಗುಂಡಿಬಿದ್ದು ಅಧ್ವಾನಗೊಂಡಿದೆ. ಹಲವಾರು ವರ್ಷಗಳಿಂದಲೂ ರಸ್ತೆ ಗುಂಡಿಬಿದ್ದು ಇರುವ ಕಾರಣ ವಾಹನ ಸವಾರರು ನಿತ್ಯ ಪರದಾಡುವಂತಾಗಿದೆ. ಬೈಕ್ ಸವಾರರು ಬಿದ್ದು ಗಾಯಗೊಂಡಿರುವ ಸಾಕಷ್ಟು ಉದಾಹರಣೆಗಳಿವೆ. ಹೀಗಿದ್ದರೂ ಸಹ ಸಂಬಂಧಪಟ್ಟ ಲೋಕೋಪಯೋಗಿ ಅಧಿಕಾರಿಗಳು, ಶಾಸಕರು ಗುಂಡಿ ಮುಚ್ಚಿಸದೆ ಜನರ ಜೀವನದ ಜತೆ ಚೆಲ್ಲಾಟವಾಡುತ್ತಿದ್ದಾರೆ. ಅಧಿಕಾರಿಗಳು ಗುಂಡಿ ಬಿದ್ದಿರುವ ರಸ್ತೆಯನ್ನು ಬಿಟ್ಟು ಚೆನ್ನಾಗಿರುವ ರಸ್ತೆಗೆ ಡಾಂಬರೀಕರಣ ಮಾಡಿದ್ದಾರೆ. ಇನ್ನೂ ಮಡಿಕೆ ಪಟ್ಟಣದ ಗೇಟ್ ಬಳಿಯಿಂದ ಚಿಕ್ಕಮರಳಿ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆಯೂ ಸಹ ಸಂಪೂರ್ಣವಾಗಿ ಅಧ್ವಾನಗೊಂಡಿದೆ. ರಸ್ತೆತುಂಬೆಲ್ಲ ಬರೀ ಗುಂಡಿಗಳೇ ಬಿದ್ದಿರುವುದರಿಂದ ರಸ್ತೆಯಲ್ಲಿ ಓಡಾಡುವ ಜನರು ನಿತ್ಯ ನರಕಯಾತನೆ ಅನುಭವಿಸುವಂತಾಗಿದೆ. ಜೊತೆಗೆ ರಸ್ತೆಯೂ ಸಹ ಸುತ್ತಮುತ್ತ ಒತ್ತುವರಿಯಾಗಿದೆ, ಕೆಲವರು ರಸ್ತೆಗೆ ಸೀಮೆಕಡ್ಡಿ ನೆಟ್ಟಿದ್ದಾರೆ, ಇದರಿಂದ ಸಾಕಷ್ಟು ಅಪಘಾತಗಳು ಸಂಭವಿಸುತ್ತಿವೆ, ರಸ್ತೆಯನ್ನು ಅಭಿವೃದ್ಧಿ ಪಡಿಸುವಂತೆ ಹಲವಾರು ಬಾರಿ ಮನವಿ ಮಾಡಿದರೂ ಸಹ ಸಂಬಂಧಿಸಿದ ಅಧಿಕಾರಿಗಳು ತಲೆಕೆಡಿಸಿಕೊಳ್ಳುತ್ತಿಲ್ಲ ಎಂದು ಕಿಡಿಕಾರಿದರು.

ಸ್ಥಳಕ್ಕೆ ದಾವಿಸಿದ ಲೋಕೋಪಯೋಗಿ ಇಲಾಖೆಯ ಅಧಿಕಾರಿಯನ್ನು ಹೋರಾಟಗಾರರು ತರಾಟೆಗೆ ತೆಗೆದುಕೊಂಡರು. ಬಳಿಕ ಅಧಿಕಾರಿಯನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಗುಂಡಿರಸ್ತೆಯನ್ನು ದರ್ಶನ ಮಾಡಿಸಿದರು. ಅಧಿಕಾರಿಗೆ ಮನವಿ ಪತ್ರ ನೀಡಿದರು, ಮನವಿ ಸ್ವೀಕರಿಸಿದ ಲೋಕೋಪಯೋಗಿ ಎಇಇ ಜೈಕುಮಾರ್ ಮಾತನಾಡಿ, ಮಂಡ್ಯ ಮುಖ್ಯರಸ್ತೆಯಲ್ಲಿ ಬಿದ್ದಿರುವ ಗುಂಡಿ ಮುಚ್ಚಿಸಲು ಅನುದಾನ ಬಿಡುಗಡೆಯಾಗಿದೆ. ಗುಂಡಿ ಜಾಗದಲ್ಲಿ ಡಾಂಬರೀಕರಣ ಮಾಡಲಾಗುವುದು, ಇನ್ನೂ ಚಿಕ್ಕಮರಳಿ ಗ್ರಾಮದ ರಸ್ತೆ ಅಭಿವೃದ್ಧಿಗೂ ಅನುದಾನಕ್ಕೆ ಸರಕಾರಕ್ಕೆ ಕಳುಹಿಸಲಾಗಿದೆ, ಅನುದಾನ ಬಿಡುಗಡೆಯಾದ ಬಳಿಕ ರಸ್ತೆಯನ್ನು ಸರ್ವೆ ನಡೆಸಿ ಒತ್ತುವರಿ ತೆರವುಗೊಳಿಸಿ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಭರವಸೆ ನೀಡಿದರು. ಪ್ರತಿಭಟನೆಯಿಂದಾಗಿ ಅರ್ಧ ಗಂಟೆಗೂ ಹೆಚ್ಚುಕಾಲ ಮಂಡ್ಯ–ಪಾಂಡವಪುರ ರಸ್ತೆಯಲ್ಲಿ ಸಂಚಾರ ಸ್ಥಗಿತಗೊಂಡಿತ್ತು.

ಪ್ರತಿಭಟನೆಯಲ್ಲಿ ಚಿಕ್ಕಮರಳಿ ಗ್ರಾಮದ ಮುಖಂಡರಾದ ತಾಪಂ ಮಾಜಿ ಸದಸ್ಯ ಮಂಗಳ ನವೀನ್ ಕುಮಾರ್, ಗ್ರಾಪಂ ಉಪಾಧ್ಯಕ್ಷ ಈರಾಚಾರಿ, ಸುರೇಂದ್ರ, ವಿಶ್ವನಾಥ್, ಪ್ರವೀಣ್, ಸತೀಶ್, ಪಾಂಡಿದೊರೆ, ನವೀನ್ ಕುಮಾರ್, ಚನ್ನಮಾದೇಗೌಡ, ಉಮೇಶ್, ಚೇತನ್, ರಾಜೇಶ್, ಮಧುಸೂದನ್, ಕಂಚಯ್ಯರ ಕುಮಾರ್, ಕಾಂತರಾಜು, ಕುಮಾರ್, ಅರುಣ ಸೇರಿದಂತೆ ಹಲವಾರು ಯುವಕರು ಭಾಗವಹಿಸಿದ್ದರು.

ಮೇಲುಕೋಟೆಯಲ್ಲಿ ಮಂಗಗಳ ಕಾಟ ತಡೆಗೆ ಮನವಿ

ಮೇಲುಕೋಟೆ: ಮೇಲುಕೋಟೆಯಲ್ಲಿ ಮಂಗಗಳ ಕಾಟ ಹೆಚ್ಚಾಗಿದ್ದು, ಅವುಗಳ ಕಾಟ ತಪ್ಪಿಸಲು ಗ್ರಾಪಂ ಮುಂದಾಗಿದೆ. ಮಂಗಗಳನ್ನು ಹಿಡಿದು ಅಭಯಾರಣ್ಯಕ್ಕೆ ಬಿಡಲು ಸಹಕಾರ ನೀಡುವಂತೆ ಅರಣ್ಯ ಇಲಾಖೆಗೆ ಪತ್ರ ಬರೆದಿದೆ. ಮೇಲುಕೋಟೆಯಲ್ಲಿ ನೂರಾರು ಸಂಖ್ಯೆಯ ಮಂಗಗಳ ಪ್ರತ್ಯೇಕ ಗುಂಪುಗಳಿದ್ದು ಕಂಡಕಂಡಲ್ಲಿ ವಾಸಿಸುತ್ತಿವೆ. ಇತ್ತೀಚೆಗೆ ಭಕ್ತರ ಮೇಲೆ ದಾಳಿಮಾಡಿ ಗಾಯಗೊಳಿಸುವ ಘಟನೆಗಳು ಹೆಚ್ಚಾಗಿದೆ. ಈ ಕೋತಿಕಾಟದ ಬಗ್ಗೆ ಪ್ರಕಟವಾದ ವರದಿಗಳನ್ನು ಉಲ್ಲೇಖಿಸಿ ಉಪಟಳ ನಿಯಂತ್ರಿಸಲು ಕೋತಿಗಳನ್ನು ಹಿಡಿದು ಅಭಯಾರಣ್ಯಕ್ಕೆ ಬಿಡಲು ಸಹಕಾರ ನೀಡುವಂತೆ ಪಿಡಿಓ ರಾಜೇಶ್ವರ್ ಮತ್ತು ಪ್ರಭಾರಿ ಅಧ್ಯಕ್ಷ ಜಿ.ಕೆ ಕುಮಾರ್ ವಲಯ ಅರಣ್ಯಾಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.

ಕಳೆದ ವೈರಮುಡಿ ಜಾತ್ರಾ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಶಾಸಕರು ನೀಡಿದ ಸೂಚನೆಗೆ ಸ್ಪಂದಿಸಿದ್ದ ಅರಣ್ಯಾಧಿಕಾರಿಗಳು ಮಂಗಗಳನ್ನು ಹಿಡಿದು ನಾಗರಹೊಳೆ ಅಥವಾ ಬಂಡೀಪುರ ಕಾಡಿಗೆ ಬಿಡುವ ಭರವಸೆ ನೀಡಿದ್ದರು. ಆದರೆ ಈ ಭರವಸೆ ಈಡೇರದ ಹಿನ್ನೆಲೆಯಲ್ಲಿ ಪತ್ರವನ್ನು ಬರೆಯಲಾಗಿದೆ.

ಕೆಆರ್‌ಎಸ್ ಕೊನೆ ಭಾಗದ ನಾಲೆಗಳಿಗೆ ಗೂಳಿಗೌಡ ಭೇಟಿ

ನಾಲೆಗಳಿಗೆ ನೀರು ಹರಿಸಲು ಅಧಿಕಾರಿಗಳಿಗೆ ಸೂಚನೆ


ರೈತರಿಂದ ಅಹವಾಲು ಸ್ವೀಕರಿಸುತ್ತಿರುವ ಶಾಸಕ ದಿನೇಶ್ ಗೂಳಿಗೌಡ.

ಮದ್ದೂರು, ಅ.9– ತಾಲೂಕಿನ ಸಾವಿರಾರು ಎಕರೆ ಪ್ರದೇಶಗಳಿಗೆ ನೀರು ಹರಿಸುವ ಕೆಆರ್‌ಎಸ್ ಕೊನೆ ಭಾಗದ ನಾಲೆಗಳಿಗೆ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ಹಾಗೂ ಶಾಸಕ ದಿನೇಶ್ ಗೂಳಿಗೌಡ ಭೇಟಿ ನೀಡಿ ರೈತರ ಅಹವಾಲು ಸ್ವೀಕರಿಸಿದರು.

ಕೆಆರ್‌ಎಸ್ ಕೊನೆ ಭಾಗದ ನಾಲೆಗಳಾದ ಕೊಪ್ಪ, ಕೌಡ್ಲೆ, ಕಿರಂಗೂರು, ಅಬಲವಾಡಿ, ಹೊಸಗಾವಿ ಸೇರಿದಂತೆ ಹಲವು ಭಾಗಗಳಿಗೆ ಭೇಟಿ ನೀಡಿ ನಾಲೆಗಳ ಸ್ಥಿತಿಗತಿ ಪರಿಶೀಲಿಸಿದರು. ನಾಲೆಗಳ ಆಧುನೀಕರಣ ಹಾಗೂ ನಾಲೆಯ ಕೊನೆಯ ಹಂತದವರೆಗೆ ನೀರು ಹರಿಸುವ ಬಗ್ಗೆ ರೈತರೊಂದಿಗೆ ಚರ್ಚಿಸಿದರು.

ಈ ವೇಳೆ ಮಾತನಾಡಿದ ಅವರು, ಕಳೆದ ವರ್ಷಕ್ಕಿಂತ ಈ ವರ್ಷ ಬಿತ್ತನೆ ಪ್ರಮಾಣ ಹೆಚ್ಚಳವಾಗಿದೆ. ಈ ವರ್ಷ ಜಿಲ್ಲೆಯಲ್ಲಿ 1,92,103 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದ್ದು 1,96,478 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಬಿತ್ತನೆ ವಿಸ್ತೀರ್ಣ 12,817 ಹೆಕ್ಟೇರ್ ಪ್ರದೇಶ ಹೆಚ್ಚಳವಾಗಿದೆ ಎಂದರು.

ಕೊನೆ ಭಾಗದ ನಾಲೆಗಳಿಗೆ 285 ಕ್ಯೂಸೆಕ್ ನೀರು ಬರುತ್ತಿದೆ. ಕಾವೇರಿ ಜಲಾನಯನ ಪ್ರದೇಶ ಹಾಗೂ ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ಮಳೆ ಕೊರತೆಯಿಂದ ನೀರಿನ ಹರಿವಿನ ಪ್ರಮಾಣ ಕಡಿಮೆಯಾಗಿದೆ. ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ ಎಂದರು.

ಕೃಷಿ ಚಟುವಟಿಕೆಗಳಿಗಾಗಿ ಜಿಲ್ಲಾ ಸಹಕಾರ ಬ್ಯಾಂಕ್ ನಿಂದ 30.9.2025ರ ಅಂತ್ಯಕ್ಕೆ 38 ಸಾವಿರ ರೈತರಿಗೆ 338 ಕೋಟಿ ರೂ. ಗಳನ್ನು ಶೂನ್ಯ ಬಡ್ಡಿ ದರದಲ್ಲಿ ವಿತರಣೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ನಮ್ಮ ಸರ್ಕಾರ ರೈತರಿಗೆ ಸಮರ್ಪಕವಾದಂತಹ ಬಿತ್ತನೆ ಬೀಜ, ರಸಗೊಬ್ಬರವನ್ನು ಹಾಗೂ ಶೂನ್ಯ ಬಡ್ಡಿ ದರದಲ್ಲಿ ಬೆಳೆ ಸಾಲವನ್ನು ರೈತರ ಅಗತ್ಯಕ್ಕೆ ತಕ್ಕಂತೆ ಕಲ್ಪಿಸಿಕೊಡಲು ಜಿಲ್ಲಾ ಉಸ್ತುವಾರಿ ಸಚಿವರಾದ ಚಲುವರಾಯಸ್ವಾಮಿ ಅವರ ಮಾರ್ಗದರ್ಶನದಲ್ಲಿ ಎಲ್ಲಾ ಇಲಾಖೆಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಿದರು.

ಭೇಟಿ ಸಂದರ್ಭದಲ್ಲಿ ಕಾವೇರಿ ನೀರಾವರಿ ನಿಗಮದ ಸೂಪರಿಂಟೆಂಡೆಂಟ್ ಇಂಜಿನಿಯರ್ ರಘುರಾಮ್, ಎಕ್ಸಿಕ್ಯೂಟಿವ್ ಇಂಜಿನಿಯರ್ ನಂಜುಂಡೇಗೌಡ, ಕೊಪ್ಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರಾದ ದೀಪಕ್ ರಾಘವೇಂದ್ರ ಉಪಸ್ಥಿತರಿದ್ದರು.

ಲಕ್ಷ್ಮಮ್ಮ ನಿಧನ



ಪಾಂಡವಪುರ, ಅ.9– ತಾಲೂಕಿನ ಚಿಕ್ಕಮರಳಿ ಗ್ರಾಮದ ದಂತ ವೈದ್ಯ ಡಾ.ಶ್ರೀನಿವಾಸ್ ಅವರ ತಾಯಿ ಲಕ್ಷ್ಮಮ್ಮ(80) ವಯೋ ಸಹಜ ಕಾಯಿಲೆಯಿಂದ ಗುರುವಾರ ಬೆಳಿಗ್ಗೆ ನಿಧನರಾದರು.

ಚಿಕ್ಕಮರಳಿ ಗ್ರಾಮದ ತಮ್ಮ ನಿವಾಸದಲ್ಲಿ ಬೆಳಗ್ಗೆ ಮಲಗಿದ್ದಲ್ಲಿಯೇ ಲಕ್ಷ್ಮಮ್ಮ ನಿಧನರಾಗಿದ್ದಾರೆ. ಮೃತರು ದಂತ ವೈದ್ಯ ಡಾ.ಶ್ರೀನಿವಾಸ್, ಪುತ್ರಿಯರಾದ ಗೀತಾ, ಪುಷ್ಪ, ಸವಿತ, ಜಯಶ್ರೀ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಚ್.ತ್ಯಾಗರಾಜು ಸೇರಿದಂತೆ ಹಲವು ಗಣ್ಯರು, ಚುನಾಯಿತ ಜನಪ್ರತಿನಿಧಿಗಳು, ಮುಖಂಡರು ಅಂತಿಮ ದರ್ಶನಪಡೆದು ಕುಟುಂಬಸ್ಥರಿಗೆ ಸಾಂತ್ವಾನ ಹೇಳಿದರು. ಚಿಕ್ಕಮರಳಿ ಗ್ರಾಮದ ಹೊರವಲಯದ ಜಮೀನಿನಲ್ಲಿ ಗುರುವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು.

'ಜಗವೆಲ್ಲಾ ನಗುತಿರಲಿ, ಜಂಜಾಟ ನನಗಿರಲಿ' ಎಂದು ಬದುಕಿದವರು ರಾಜೇಂದ್ರ ಶ್ರೀಗಳು

ರಾಜೇಂದ್ರ ಶ್ರೀಗಳ ಶತೋತ್ತರ ದಶಮಾನೋತ್ಸವದಲ್ಲಿ ಸುತ್ತೂರು ಶ್ರೀಗಳ ಬಣ್ಣನೆ


ಡಾ.ಶಿವರಾತ್ರಿ ರಾಜೇಂದ್ರಸ್ವಾಮೀಜಿಯವರ 110ನೇ ಜಯಂತಿ ಕಾರ್ಯಕ್ರಮವನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರಸ್ವಾಮೀಜಿ ಉದ್ಘಾಟಿಸಿದರು.

ಗುಂಡ್ಲುಪೇಟೆ, ಅ.9– ಜಗವೆಲ್ಲಾ ನಗುತಿರಲಿ, ಜಂಜಾಟ ನನಗಿರಲಿ ಎಂದು ಸಮಾಜದ ಒಳಿತಿಗಾಗಿ ಬದುಕಿದವರು ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಎಂದು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಹೇಳಿದರು.

ಗುರುವಾರ ಪಟ್ಟಣದ ಜೆಎಸ್‌ಎಸ್ ಅನುಭವ ಮಂಟಪದಲ್ಲಿ ಆಯೋಜಿಸಿದ್ದ ಶಿವರಾತ್ರಿ ರಾಜೇಂದ್ರಸ್ವಾಮೀಜಿಯವರ ಶತೋತ್ತರ ದಶಮಾನೋತ್ಸವದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ರಾಜ್ಯದಲ್ಲಿ ವೀರಶೈವ ಮಠಗಳ ಸೇವೆ ಅಪಾರವಾಗಿದೆ. ಇದರೊಂದಿಗೆ ಇನ್ನೂ ವಿಸ್ತಾರಗೊಂಡು ದೇಶಾದ್ಯಂತ ಶಿಕ್ಷಣ ಮತ್ತು ಸಂಸ್ಕೃತಿಯನ್ನು ಪಸರಿಸುತ್ತಿದೆ. ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡಿ ಗುರುಸೇವೆ ಮಾಡಿ ವಿದ್ಯೆ ಕಲಿತಿದ್ದ ರಾಜೇಂದ್ರ ಶ್ರೀಗಳು ಸಮಾಜದ ಒಳಿತಿಗಾಗಿ ಬದುಕಿ ಬಾಳಿದರು. ಮಾತೃ ಹೃದಯವನ್ನು ಹೊಂದಿದ ಅವರು ಗ್ರಾಮೀಣ ಹಾಗೂ ಬಡ ಜನರ ಮಕ್ಕಳಿಗೆ ಶಿಕ್ಷಣ ನೀಡಲು ಶಾಲೆಗಳನ್ನು ತೆರೆದಿದ್ದರು ಎಂದು ಹೇಳಿದರು. ಶ್ರೀ ಮಠದ ಧಾರ್ಮಿಕ ಪ್ರಕಿಯೆಗಳ ಗಡಿರೇಖೆಯನ್ನು ಸಮಾಜಮುಖಿಯಾಗಿ ವಿಸ್ತರಿಸಿ, ಶ್ರೀಮಠದ ಗುರುಪರಂಪರೆಗೆ ಭಾಷ್ಯ ಬರೆದ ಕೀರ್ತಿ ರಾಜೇಂದ್ರಶ್ರೀಗಳಿಗೆ ಸಲ್ಲುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿದರು. ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ನಂದೀಶ್ ಹಂಚೆ ಮಾತನಾಡಿ, ಲೋಕತೃಪ್ತಿ ಹಾಗೂ ಆತ್ಮತೃಪ್ತಿಯಿಂದ ಕೆಲಸ ಮಾಡಿದ್ದ ರಾಜೇಂದ್ರ ಶ್ರೀಗಳು ಸಮಾಜಮುಖಿಯಾಗಿದ್ದರಿಂದ ಹೆಚ್ಚಿನ ಜನತೆಗೆ ಶಿಕ್ಷಣ ದೊರಕುವಂತಾಗಿದೆ ಎಂದರು. ಇದಕ್ಕೂ ಮೊದಲು ರಾಜೇಂದ್ರಶ್ರೀಗಳ ಮೂರ್ತಿಯನ್ನು ಅಲಂಕೃತ ವಾಹನದಲ್ಲಿರಿಸಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷ ಪಿ. ಶಶಿಧರ್(ದೀಪು), ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಕಮರಹಳ್ಳಿ ರವಿ, ಕಾಲೇಜಿನ ಪ್ರಾಂಶುಪಾಲೆ ಡಾ.ಮಹದೇವಮ್ಮ ವೀರಶೈವ ಮುಖಂಡರಾದ ಹೆಚ್.ಎಸ್. ನಂಜುಂಡಪ್ರಸಾದ್, ದೇಪಾಪುರ ಸಿದ್ದಪ್ಪ, ಕೊಡಸೋಗೆ ಶಿವಬಸಪ್ಪ, ಹುಂಡೀಪುರ ಮಲ್ಲಿಕಾರ್ಜುನಸ್ವಾಮಿ, ಮುಖಂಡರು, ಯುವಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕರ್ತವ್ಯ ಲೋಪ; ಪಿಡಿಒ, ಕಾರ್ಯದರ್ಶಿ ಅಮಾನತು





ಚಾಮರಾಜನಗರ : ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ತಾಲೂಕಿನ ವೆಂಕಟಯ್ಯನಛತ್ರ ಗ್ರಾಪಂ ಪಿಡಿಒ ಆರ್. ಮಹೇಶ್ ಮತ್ತು ಇದೇ ಪಂಚಾಯಿತಿಯಲ್ಲಿ ಪ್ರಭಾರ ಪಿಡಿಒ ಆಗಿ ಕಾರ್ಯ ನಿರ್ವಹಿಸಿ ಪ್ರಸ್ತುತ ಕೊತ್ತಲವಾಡಿಯಲ್ಲಿ ಗ್ರೇಡ್–1 ಕಾರ್ಯದರ್ಶಿ ಆಗಿರುವ ಎಲ್.ರಾಜೇಂದ್ರ ಪ್ರಸಾದ್‌ನನ್ನು ಅಮಾನತುಗೊಳಿಸಲಾಗಿದೆ. 1–4–2022 ರಿಂದ 25–5–23ರವರೆಗೆ, 5–3–24 ರಿಂದ 31–3–24ರ ಅವಧಿಯಲ್ಲಿನ ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದಿರುವ ಲೋಪಗಳ ಹಿನ್ನೆಲೆಯಲ್ಲಿ ಮಹೇಶ್ ಅವರನ್ನು ಅಮಾನತುಗೊಳಿಸಲಾಗಿದೆ.

ಇದೇ ರೀತಿ ರಾಜೇಂದ್ರ ಪ್ರಸಾದ್ ಅವರು ಸದರಿ ಪಂಚಾಯಿತಿಯಲ್ಲಿ 26–5–23 ರಿಂದ 4–3–24ರವರೆಗೆ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿನ ಲೆಕ್ಕ ಪರಿಶೋಧನಾ ಸಂದರ್ಭದಲ್ಲಿ ಕಂಡು ಬಂದಿರುವ ಲೋಪಗಳ ಮೇರೆಗೆ ಅವರನ್ನು ಸಹ ಅಮಾನತುಗೊಳಿಸಲಾಗಿದೆ ಎಂದು ಜಿಪಂ ಸಿಇಒ ಮೋನಾರೋತ್ ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಎಚ್.ಡಿ.ದೇವೇಗೌಡರು ಗುಣಮುಖರಾಗಲೆಂದು ಶ್ರೀ ಚಾಮರಾಜೇಶ್ವರಸ್ವಾಮಿಗೆ ವಿಶೇಷಪೂಜೆ


ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಶೀಘ್ರ ಗುಣಮುಖರಾಗಲೆಂದು ಶ್ರೀ ಚಾಮರಾಜೇಶ್ವರ ಸ್ವಾಮಿಗೆ ವಿಶೇಷಪೂಜೆ ಸಲ್ಲಿಸಿ, ಈಡುಗಾಯಿ ಒಡೆದು ಪ್ರಾರ್ಥಿಸಲಾಯಿತು.

ಚಾಮರಾಜನಗರ: ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಶೀಘ್ರ ಗುಣಮುಖರಾಗಲೆಂದು ಕೋರಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಶ್ರೀಚಾಮರಾಜೇಶ್ವರ ಸ್ವಾಮಿಗೆ ವಿಶೇಷಪೂಜೆ ಸಲ್ಲಿಸಿ ಈಡುಗಾಯಿ ಒಡೆದು ಪ್ರಾರ್ಥಿಸಲಾಯಿತು.

ಕರ್ನಾಟಕ ಸೇನಾಪಡೆಯ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಎಚ್.ಡಿ. ದೇವೇಗೌಡರ ಹೆಸರಿನಲ್ಲಿ ಅರ್ಚನೆ ಮಾಡಿಸಿ ಚಾಮರಾಜೇಶ್ವರಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀನಿವಾಸಗೌಡ ಮಾತನಾಡಿ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಶೀಘ್ರ ಗುಣಮುಖರಾಗಲೆಂದು ಹಾರೈಸಿ ಕರ್ನಾಟಕ ಸೇನಾಪಡೆ ವತಿಯಿಂದ ಶ್ರೀಚಾಮರಾಜೇಶ್ವರ ದೇವಸ್ಥಾನದಲ್ಲಿ ಎಚ್.ಡಿ. ದೇವೇಗೌಡರ ಹೆಸರಿನಲ್ಲಿ ಅರ್ಚನೆ ಮಾಡಿಸಿ, ವಿಶೇಷಪೂಜೆ ಸಲ್ಲಿಸಿ ಈಡುಗಾಯಿ ಒಡೆದು ಪ್ರಾರ್ಥಿಸಲಾಯಿತು ಎಂದರು.

ಈ ಸಂದರ್ಭದಲ್ಲಿ ಪಣ್ಯದಹುಂಡಿ ರಾಜು, ರವಿಚಂದ್ರಪ್ರಸಾದ್ ಕಹಳೆ, ಚಿನ್ನಸ್ವಾಮಿ, ರಘು, ಮಹೇಶ್‌ಗೌಡ, ಶಿವಣ್ಣ, ಲೋಕೇಶ್, ಮುತ್ತುರಾಜ್, ಮಾದೇಶ್, ರಾಜಣ್ಣ, ರಾಜ್, ರಾಚಪ್ಪ, ಜಗದೀಶನ್, ಮಹೇಶ್, ಮಾದೇಶ್, ನಾಗೇಂದ್ರ ಇತರರು ಹಾಜರಿದ್ದರು.

ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲು ಯತ್ನ ಖಂಡಿಸಿ ವಕೀಲರ ಪ್ರತಿಭಟನೆ



ಯಳಂದೂರು, ಅ.9– ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲು ಯತ್ನಿಸಿದ ಘಟನೆಯನ್ನು ಖಂಡಿಸಿ ಪಟ್ಟಣದ ನ್ಯಾಯಾಲಯದ ಮುಂಭಾಗ ತಾಲೂಕು ವಕೀಲರ ಸಂಘದ ವತಿಯಿಂದ ನ್ಯಾಯಾಲಯದ ಕಲಾಪದಿಂದ ಹೊರಗುಳಿದು ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಹಿರಿಯ ವಕೀಲ ಬಸವಟ್ಟಿ ಮಹದೇವಸ್ವಾಮಿ ಮಾತನಾಡಿ, ಸನಾತನ ಧರ್ಮಕ್ಕೆ ಅಪಮಾನ ಮಾಡಿದ್ದಾರೆ ಎಂದು ಆರೋಪಿಸಿ ವಕೀಲರೊಬ್ಬರು ನ್ಯಾಯಾಧೀಶರ ಮೇಲೆ ಶೂ ಎಸೆಯಲು ಯತ್ನಿಸಿದ ಘಟನೆ ಸಂವಿಧಾನ ವಿರೋಧಿಯಾಗಿದೆ. ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮೇಲೆ ವಕೀಲ ರಾಕೇಶ್ ಕಿಶೋರ್ ಶೂ ಎಸೆಯಲು ಯತ್ನಿಸಿ ಸಂವಿಧಾನಕ್ಕೆ ಅಪಮಾನ ಮಾಡಿದ್ದಾರೆ ಎಂದರು.

ಅಧ್ಯಕ್ಷ ಎಂ.ರಾಜಣ್ಣ, ವಕೀಲರ ಸಂಘದ ಉಪಾಧ್ಯಕ್ಷ ಕಾಂತರಾಜು, ಕಾರ್ಯದರ್ಶಿ ಕುಮಾರಸ್ವಾಮಿ, ಪಿ.ನಾಗರಾಜು, ಅಂಬಳೆ, ಸಿ.ಎಂ.ಮಹದೇವಸ್ವಾಮಿ, ಅಂಬಳೆ ಸಿದ್ದರಾಜು, ಕೆ.ಬಿ.ಶಶಿಧರ್, ಸಿ.ಎನ್.ನಾಗರಾಜು, ಶಾಂತರಾಜು, ಎಂ.ರವೀಶ್, ಅನೇಕರು ಇದ್ದರು.

■ ಸತ್ಯಮೂರ್ತಿ ತೋಳಹುಣಸೆ


'ಗ್ರೀನ್' ಟ್ರೈಲರ್ ಶಿವಣ್ಣ ಬಿಡುಗಡೆ



ಸೈಕಾಲಜಿಕಲ್ ಥ್ರಿಲ್ಲರ್ ಕಥಾ ಹಂದರ ಹೊಂದಿರುವ ಗ್ರೀನ್ ಚಿತ್ರದ ಟ್ರೈಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ರಾಜ್‌ವಿಜಯ್ ಹಾಗೂ ಬಿ.ಎನ್. ಸ್ವಾಮಿ ಅವರ ನಿರ್ಮಾಣದ ಹಾಗೂ ರಾಜ್‌ವಿಜಯ್ ಅವರ ನಿರ್ದೇಶನದ ಗ್ರೀನ್ ಚಿತ್ರದ ಟ್ರೈಲರ್‌ಗೆ ನಟ ಶಿವರಾಜ ಕುಮಾರ್ ಚಾಲನೆ ನೀಡಿ ಶುಭ ಹಾರೈಸಿದ್ದಾರೆ. ಬಾಲಾಜಿ ಮನೋಹರ್, ಗೋಪಾಲಕೃಷ್ಣ ದೇಶಪಾಂಡೆ, ಆರ್.ಜೆ.ವಿಕ್ಕಿ ಈ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಚಿತ್ರದ ನಿರ್ದೇಶಕ ರಾಜ್‌ವಿಜಯ್, ನನ್ನ ನಿರ್ದೇಶನದ ಮೊದಲ ಚಿತ್ರವಿದು. ಚಿಕ್ಕ ವಯಸ್ಸಿನಿಂದಲೂ ನನಗೆ ಸಿನಿಮಾ ನಿರ್ದೇಶಕನಾಗಬೇಕೆಂಬ ಆಸೆಯಿತ್ತು. ಅದು ಈ ಚಿತ್ರದಿಂದ ಈಡೇರಿದೆ. ಈ ಹಿಂದೆ ನಾನು ಕನ್ನಡದ ಕೆಲವು ನಿರ್ದೇಶಕರ ಬಳಿ ಸಹನಿರ್ದೇಶಕನಾಗಿ ಕೆಲಸ ಮಾಡಿದ್ದೆ. ಇನ್ನು ಗ್ರೀನ್ ಚಿತ್ರದಲ್ಲಿ ಸೈಕಲಾಜಿಕಲ್ ಥ್ರಿಲ್ಲರ್, ಪರಿಸರ ಕಾಳಜಿಯ ಜತೆಗೆ ಅಪರೂಪ ಎನ್ನಬಹುದಾದ ಸೈಕಾಲಜಿಕಲ್ ಮೈಂಡ್‌ಬೆಂಡಿಂಗ್ ಥ್ರಿಲ್ಲರ್ ಕಥಾಹಂದರವಿದೆ. ಇದೊಂದು ಮನೋವೈಜ್ಞಾನಿಕ ಹಾಗೂ ಬೆರಗುಗೊಳಿಸುವ ಥ್ರಿಲ್ಲರ್ ಚಿತ್ರವೂ ಹೌದು. ತನ್ನ ಜೀವನವನ್ನೇ ನಿಯಂತ್ರಿಸುತ್ತಿರುವ ತನ್ನೊಳಗಿನ ರಾಕ್ಷಸನಿಂದ ಹೊರಬರಲು ಹೋರಾಡುವ ನಾಯಕನ ಕಥೆಯನ್ನು ಗ್ರೀನ್ ಚಿತ್ರದ ಮೂಲಕ ಹೇಳಿದ್ದೇವೆ. ಇದು ಬಹುತೇಕ ಕಾಡಿನಲ್ಲೇ ನಡೆಯುವ ಥ್ರಿಲ್ಲರ್ ಕಥೆಯಾಗಿದ್ದು, ಊಟಿಯ ಬಳಿ ಹೆಚ್ಚಿನ ಚಿತ್ರೀಕರಣ ನಡೆಸಿದ್ದೇವೆ. ಜಗತ್ತಿನ ಹೆಸರಾಂತ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಗ್ರೀನ್ ಚಿತ್ರ ಪ್ರದರ್ಶನವಾಗಿ, 21ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಗೆದ್ದುಕೊಂಡಿದೆ. ವಿದೇಶಿಗರು ಸಹ ಮೆಚ್ಚಿಕೊಂಡಿರುವ ನಮ್ಮ ನೆಲದ ಚಿತ್ರವನ್ನು ಸ್ವದೇಶಿಗರು, ಅದರಲ್ಲೂ ಕನ್ನಡಿಗರು ಮೆಚ್ಚುವರೆಂಬ ನಂಬಿಕೆಯಿದೆ ಎಂದರು.

ನಾಯಕ ಆರ್.ಜೆ.ವಿಕ್ಕಿ ಮಾತನಾಡುತ್ತಾ, ನನ್ನ ಪಾತ್ರಕ್ಕೆ ತುಂಬಾ ಪ್ರಾಮುಖ್ಯತೆಯಿದೆ. ವೀಲ್ ಚೇರ್ ಮೇಲೆ ಕುಳಿತು ನಟಿಸಿದ ಅನುಭವ ವಿಶೇಷವಾಗಿತ್ತು ಎಂದು ಹೇಳಿದರು. ಈ ಚಿತ್ರದಲ್ಲಿ ನಟಿಸಿರುವ ಶಿವಮಂಜು, ಛಾಯಾಗ್ರಾಹಕ ಮಧುಸೂದನ್ ಹಾಗೂ ಸಂಗೀತ ನಿರ್ದೇಶಕ ಶಕ್ತಿಸ್ಯಾಕ್ ಇವರೆಲ್ಲ ಗ್ರೀನ್ ಚಿತ್ರದ ಕುರಿತಂತೆ ಮಾತನಾಡಿದರು. ಮುರುಡಯ್ಯ, ರಾಮಚಂದ್ರ, ಗಿರೀಶ್ ಮುಂತಾದವರು ಚಿತ್ರದ ಇತರೆ ತಾರಾ ಬಳಗದಲ್ಲಿದ್ದಾರೆ.



ಶ್ರೀಮತಿ ಸಿಂಧೂರ

ಗ್ರಾಮೀಣ ಯುವಕ ವಿಜಯ ರಾಘವೇಂದ್ರ



ಈ ಹಿಂದೆ ಗ್ರೀನ್ ಸಿಗ್ನಲ್ ಚಿತ್ರ ನಿರ್ಮಿಸಿದ್ದ ಡಿ.ಎನ್.ನಾಗೀರೆಡ್ಡಿ ಅವರ ನಿರ್ಮಾಣದ, ಆರ್. ಅನಂತರಾಜು ಅವರ ನಿರ್ದೇಶನದ ಶ್ರೀಮತಿ ಸಿಂಧೂರ ಚಿತ್ರದ ಮುಹೂರ್ತ ಸಮಾರಂಭ ಇತ್ತೀಚೆಗೆ ನಡೆಯಿತು. ನಾಯಕನಾಗಿ ವಿಜಯ ರಾಘವೇಂದ್ರ, ಹಳ್ಳಿ ಹುಡುಗಿಯಾಗಿ ಪ್ರಿಯಾ ಹೆಗಡೆ, ಮತ್ತೊಬ್ಬ ನಾಯಕಿಯಾಗಿ ರೇಷ್ಮಾ.ವಿ. ಗೌಡ, ಕಾಂತಾರ ಖ್ಯಾತಿಯ ಮಾನಸಿ ಸುಧೀರ್ ನಟಿಸಿರುವ ಈ ಚಿತ್ರಕ್ಕೆ ರಾಜೇಶ್ ರಾಮನಾಥ್ ಮ್ಯೂಸಿಕ್ ಮಾಡುತ್ತಿದ್ದಾರೆ. ಪಿ.ಕೆ.ಹೆಚ್. ದಾಸ್ ಅವರ ಛಾಯಾಗ್ರಹಣವಿದೆ,

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕರು, ನಿರ್ಮಾಪಕರು ಹೇಳಿದ ಒಂದು ಎಳೆ ಇಟ್ಟುಕೊಂಡು ಈ ಚಿತ್ರಕಥೆ ಹೆಣೆದಿದ್ದೇವೆ. ಹುಡುಗಿಯೊಬ್ಬಳು ಮದುವೆ ಆದರೆ ಶ್ರೀಮತಿ ಆಗುತ್ತಾಳೆ. ಸಿಂಧೂರ ಎನ್ನುವುದು ಆಕೆಗೆ ಸಿಗುವ ಗೌರವ. ಅದೇ ರೀತಿ ಜವಬ್ದಾರಿಯುತ ಹುಡುಗನೊಬ್ಬ ತಾನು ಇಷ್ಟಪಟ್ಟ ಹುಡುಗಿಯನ್ನು ಮದುವೆಯಾಗುತ್ತಾನೆ. ಮುಂದೆ ಆತನ ಜೀವನದಲ್ಲಿ ಅನೇಕ ತಿರುವುಗಳು ಎದುರಾಗಿ ಆತನ ಜೀವನ ಯಾವ ದಿಕ್ಕಿಗೆ ಹೋಗುತ್ತೆ, ಏನೇನೆಲ್ಲಾ ಬದಲಾವಣೆಗಳಾಗುತ್ತದೆ. ನಾವು ನಂಬಿದ ದೇವರು ನಮ್ಮನ್ನು ಯಾವತ್ತೂ ಕೈಬಿಡುವುದಿಲ್ಲ ಎಂದು ಚಿತ್ರದ ಮೂಲಕ ಹೇಳಲಿದ್ದೇವೆ, ಕೌಟುಂಬಿಕ ಕಥೆಯಿರುವ ಮನರಂಜನಾತ್ಮಕ ಚಿತ್ರ. ಬೀದರ್ ಮೂಲದ 6.4 ಅಡಿ ಎತ್ತರದ ಮಾರುತಿ ಆಂಜನೇಯ ಸ್ವಾಮಿಯಾಗಿ ಚಿತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಮೂಡಿಗೆರೆ, ಸಕಲೇಶಪುರ, ಚಿಕ್ಕಮಗಳೂರು ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಸಲಾಗುವುದು ಎಂದು ಹೇಳಿದರು.

ನಾಯಕ ವಿಜಯ ರಾಘವೇಂದ್ರ ಮಾತನಾಡುತ್ತಾ, ಇತ್ತೀಚಿನ ದಿನಗಳಲ್ಲಿ ಕೌಟುಂಬಿಕ ಕಥೆಗಳ ಸಿನಿಮಾ ವಿರಳವಾಗುತ್ತಿವೆ ನಾನು ಒಳ್ಳೆಯ ಸ್ಕ್ರಿಪ್ಟ್, ಪಾತ್ರ ಇದ್ದರೆ ಖಂಡಿತ ನಟಿಸುತ್ತೇನೆ ಆ ಸಾಲಿಗೆ ಈ ಚಿತ್ರವೂ ಸೇರಿದೆ. ಊರಿನ ಜವಾಬ್ದಾರಿಯುತ ಕುಟುಂಬದ ಮಗನಾಗಿ ನಾನು ಕಾಣಿಸಿಕೊಳ್ಳುತ್ತಿದ್ದೇನೆ ಎಂದರು.

ನಾಯಕಿ ಪ್ರಿಯಾ ಹೆಗಡೆ ಮಾತನಾಡಿ, ನಾನು ಹಳ್ಳಿ ಹುಡುಗಿಯಾಗಿ ನಟಿಸುತ್ತಿರುವ ಪ್ರಥಮ ಚಿತ್ರವಿದು ಎಂದು ಹೇಳಿದರು.



ಶೋಷಣೆಯ ವಿರುದ್ಧ ಹೋರಾಡಿದ ದಿಟ್ಟ ಮಹಿಳೆಯ ಕಥೆ


ನಗ್ನಸತ್ಯ



ಬಹಳ ದಿನಗಳ ನಂತರ ನಿರ್ದೇಶನಕ್ಕಿಳಿದಿರುವ ರಮೇಶ್ ಕಾಮತ್ ಅವರೀಗ ನಗ್ನಸತ್ಯ ಎಂಬ ಕೊಂಕಣಿ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಶ್ರೀಮತಿ ಕಿರಣ್ಮಯಿ ಅವರು ಆದಿತ್ಯ ಸಿನಿ ಕ್ರಿಯೇಶನ್ಸ್ ಅಡಿ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಬನ್ನೇರುಘಟ್ಟದ ಗೋಡಂಬಿ ಕಾರ್ಖಾನೆಯಲ್ಲಿ ನಡೆದ ಮುಹೂರ್ತ ಕಾರ್ಯಕ್ರಮದಲ್ಲಿ ಹಿರಿಯ ನಟ ಸುರೇಶ್ ಹೆಬ್ಳಿಕರ್ ಅವರು ಪ್ರಥಮ ದೃಶ್ಯಕ್ಕೆ ಕ್ಲಾಪ್ ಮಾಡಿ ಶುಭ ಹಾರೈಸಿದರು.

ಚಿತ್ರದ ಮುಖ್ಯ ಪಾತ್ರದಲ್ಲಿ ಆದ್ಯಾ ನಾಯಕ್. ಲೋಕಾಯುಕ್ತರಾಗಿ ಗಣೇಶ್ ಪ್ರಭು. ಉಳಿದಂತೆ ಗೋಪಿನಾಥ ಭಟ್, ಆನಂದ್‌ನಗರಕರ್, ಗೋಪಿಭಟ್, ವಿಶ್ವನಾಥ್ ಕಿಣಿ ಮುಂತಾದವರಿದ್ದಾರೆ. ಶ್ರೀಸುರೇಶ್ ಅವರ ಸಂಗೀತ, ಪಿ.ವಿ. ಆರ್.ಸ್ವಾಮಿ ಅವರ ಛಾಯಾಗ್ರಹಣ, ನಾಗೇಶ್. ಎನ್ ಅವರ ಸಂಕಲನ ಈ ಚಿತ್ರಕ್ಕಿದೆ.

ಮುಹೂರ್ತದ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸುರೇಶ್ ಹೆಬ್ಳಿಕರ್, ಈ ಚಿತ್ರದ ಶೀರ್ಷಿಕೆಯೇ ತುಂಬಾ ಚೆನ್ನಾಗಿದೆ. ಚಿತ್ರಕ್ಕೆ ಪ್ರಥಮ ಯಶಸ್ಸು ಇದರಲ್ಲೇ ಸಿಕ್ಕಿದೆ. ಇದನ್ನು ಉತ್ತಮವಾಗಿ ಉಪಯೋಗಿಸಿಕೊಂಡರೆ ಕಮರ್ಷಿಯಲ್ ಆಗಿ ಗೆಲ್ಲಬಹುದು. ಕೊಂಕಣಿ ಸಣ್ಣ ಭಾಷೆಯಾದರೂ ದೊಡ್ಡ ಇತಿಹಾಸವಿದೆ. ಗಿರೀಶ್ ಕಾರ್ನಾಡ್, ಯಶವಂತ್ ಚಿತ್ತಾರ, ಜಯಂತ್ ಕಾಯ್ಕಿಣಿ ಇಲ್ಲಿನವರೇ ಆಗಿದ್ದಾರೆ. ಸಿನಿಮಾ ಮಾಡಿ ಹೋಗೋದು ಮುಖ್ಯವಲ್ಲ. ಇಂಥ ವಿಷಯಗಳನ್ನು ಕೇಂದ್ರೀಕರಿಸುವುದು ಮುಖ್ಯ. ನೀವು ಇದೆಲ್ಲವನ್ನೂ ಚಿತ್ರದಲ್ಲಿ ತೋರಿಸುತ್ತೀರೆಂಬ ನಂಬಿಕೆಯಿದೆ ಎಂದರು.



ರಮೇಶ್ ಕಾಮತ್
ನಿರ್ದೇಶಕ




ಶ್ರೀಮತಿ ಕಿರಣ್ಮಯಿ
ನಿರ್ಮಾಪಕಿ

ನಂತರ ನಿರ್ದೇಶಕ ರಮೇಶ್ ಕಾಮತ್ ಮಾತನಾಡುತ್ತಾ, ಕೆಲ ವರ್ಷಗಳ ಹಿಂದೆ ಭೂಪಾಲ್‌ನಲ್ಲಿ ಮಹಿಳೆಯೊಬ್ಬಳ ಮೇಲೆ ನಡೆದ ಶೋಷಣೆಯ ಪ್ರಕರಣದ ಎಳೆಯನ್ನು ತೆಗೆದುಕೊಂಡು ಈ ಚಿತ್ರಕಥೆ ಮಾಡಿದ್ದೇವೆ. ಸಮಾಜದಲ್ಲಿ ಹೆಣ್ಣು ಮಗಳೊಬ್ಬಳು ಹಿಂಸೆಗೆ ಗುರಿಯಾಗುತ್ತಾಳೆ. ಆಗ ಆಕೆ ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗ ಈ ಮೂರರ ಮೊರೆ ಹೋಗುತ್ತಾಳೆ, ಆದರೂ ಆಕೆಗೆ ನ್ಯಾಯ ಸಿಗುವುದಿಲ್ಲ. ನಂತರ ಸ್ವತಃ ತಾನೊಬ್ಬಳೇ ಈ ವ್ಯವಸ್ಥೆಯ ವಿರುದ್ಧ ನಿಂತು ಹೋರಾಡಿ, ಸಮಾಜಕ್ಕೆ ಯಾವರೀತಿಯ ಎಚ್ಚರಿಕೆ ಕೊಡುತ್ತಾಳೆ ಎಂಬುದನ್ನು ಈ ಚಿತ್ರದಲ್ಲಿ ಹೇಳಲು ಪ್ರಯತ್ನಿಸಿದ್ದೇವೆ. ಬೆಂಗಳೂರು ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಸಲಾಗುವುದು. ರಾಜ್ಯದಲ್ಲಿ ಈವರೆಗೆ 10 ಕೊಂಕಣಿ ಚಿತ್ರಗಳು ನಿರ್ಮಾಣವಾಗಿದ್ದು, ಅದರಲ್ಲಿ ನಾನೇ 5 ಚಿತ್ರಗಳನ್ನು ನಿರ್ದೇಶಿಸಿದ್ದೇನೆ ಎಂದು ಮಾಹಿತಿ ಹಂಚಿಕೊಂಡರು.

ಸಿನಿಪದಬಂಧ-597



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಚಪ್ಪಟೆಯ ವಸ್ತುವನ್ನು ಚೌಕದೊಳಗೆ ಹಾಕಿ, ದಾಟಿ ಆಡುವ ಆಟ ! 4
3. ಶ್ರೀನಾಥ್ - ಮಂಜುಳಾ ಸರಿಸಿದ ಹಿಮ ಪರದೆ 5
5. 'ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ....', ಗೀತೆಯ ಚಿತ್ರ 6
7. ಕ್ರೇಜಿ _ _ 2
8. ದ್ವಾಪಾರ ಯುಗದ ಜೋಡಿಗಳಿಗೆ ಭಾರ್ಗವ ನಿರ್ದೇಶಕ 5
9. ಆಂಗ್ಲದ 'ಕಥಾನಾಯಕ' 2
11. ಏಳು ಬಣ್ಣಗಳ ಇಂದ್ರ ಧನುಸ್ಸು 5
13. ತವರಿನಲ್ಲಿ ಎಳೆದ ರಥ 2
14. ಕಿಚ್ಚ ಸುದೀಪ್ ಕವಿಯೊಬ್ಬನನ್ನು ನೆನಪಿಸುತ್ತಾನೆ 2
18. ಚಿಗುರಿದ ಎಲೆ ಮೇಲೆ ಒಲವಿನ ಓಲೆ ಬರೆದವನು 3
19. ಕೃಷ್ಣಮೂರ್ತಿ ಪುರಾಣಿಕ್ ಕಾದಂಬರಿ ವಿಷ್ಣುವರ್ಧನ್ ಅಭಿನಯವಿದೆ 6
20. ಬಳ್ಳಾರಿಯಲ್ಲಿ ಹೆಡೆ ಬಿಚ್ಚಿದವನು 2
21. ಇರುಳಿನಲ್ಲಿ ಕಾಣಿಸಿಕೊಂಡ ನಟಿ 3

ಮೇಲಿನಿಂದ ಕೆಳಕ್ಕೆ

2. ಒಂದು ಬಗೆಯ ಆಟದೊಂದಿಗಿರುವ ಹಾಸ್ಯ ನಟ 5
3. ಡಿ.ವಿ.ಗುಂಡಪ್ಪ ಅವರ ಕಗ್ಗ ನೆನಪಿಸಿಕೊಂಡರೆ ದ್ವಾರಕೀಶ್ ಚಿತ್ರ ಪ್ರತ್ಯಕ್ಷ ! 4
4. ಅಂಬರೀಷ್‌ಗೆ ಇರುವ ಬಿರುದು 5
6. ಹಾವಿನ ದ್ವೇಷ ಹನ್ನೆರಡು ವರ್ಷವಾದ್ರೆ ವಿಷ್ಣುವಿನ ಆವೇಶ ಕ್ಕೆ ಜೋಸೈಮನ್ ನಿರ್ದೇಶಕ 9
10. _ _ ವೀಣೆ ನುಡಿಯಿತು 2
11. ಅಮರೀಶ್ ಪುರಿಯ ಅರಣ್ಯ 2
12. ವಿಜಯ ಶಾಂತಿ ನಮ್ಮ ದೇಶದ ಹೆಣ್ಣು 5
15. ಯು. ಆರ್. ಅನಂತಮೂರ್ತಿ ಕಾದಂಬರಿಗೆ ಪಟ್ಟಾಭಿ ರಾಮರೆಡ್ಡಿ ನಿರ್ದೇಶಕ 3
16. ಪ್ರೇಮ್ _ _ _ 3
17. ದುನಿಯಾ ವಿಜಯ್ - ಶುಭಾಪೂಂಜಾ ಅಭಿನಯದ ಚಿತ್ರ 2

ಸಿನಿ ಪದಬಂಧ 596ರ ಉತ್ತರ

ಅಂ	ಗಾ	ರ	ಕ				ಈ			ಹೆ
ದ		ಸಿ		ಪ್ರೇ	ಮಾ	ನು	ಬಂ	ಧ		ಣ್ಣು
ದ		ಕ		ಮ			ಧ			ಮು
ಅ	ನು	ರ	ಕ್ತೆ		ಜೀ	ವ	ನ	ಜೋ	ಕಾ	ಲಿ
ರ		ರಾ			ವ				ಕ	
ಮ		ಜ	ಲ	ಜ	ನ	ಕ		ಕ	ನ	ಸು
ನೆ			ಹ		ಜ್ಯೋ		ಅ		ಕೋ	
	ಲ	ಗೋ	ರಿ		ತಿ		ಭ	ರಾ	ಟೆ	
	ವ್		ನ				ಯ್			
	ಸ್ಟೋ		ಯ		ಕೋ				ಗಾ	
	ರಿ		ನ	ವ	ಕೋ	ಟಿ	ನಾ	ರಾ	ಯ	ಣ

ವಿಜೇತರು: ಅರ್ಪಿತಾ D/O ಬಸವರಾಜ ಕಲಶೆಟ್ಟಿ, ಇನ್ಫೋಸಿಸ್ ಸಾಫ್ಟ್‌ವೇರ್ ಕಂಪನಿ, ಹೂಟಗಳ್ಳಿ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ರಾಜ್ ಅಭಿಮಾನಿಯಾದ ಕರಿಸುಬ್ಬು




ಹಿರಿಯನಟ ಕರಿಸುಬ್ಬು ಅವರು ರಾಜಕುಮಾರ್ ಅಪ್ಪಟ ಅಭಿಮಾನಿಯಂತೆ. ಹೌದು, ಅವರು ಶ್ರೀಗಂಧದಗುಡಿ ಎಂಬ ಸೀರಿಯಲ್‌ನಲ್ಲಿ ರಾಜಣ್ಣನ ಅಭಿಮಾನಿಯಾಗಿ ಕಾಣಿಸಿಕೊಂಡಿದ್ದಾರೆ. ಹೆಣ್ಣು ದಿಕ್ಕಿಲ್ಲದ, ಬರೀ ಗಂಡಸರೇ ಒಟ್ಟಾಗಿ ಬದುಕ್ತಿರೋ ಮನೆಯ ಹೆಸರೇ ಶ್ರೀಗಂಧದ ಗುಡಿ. ಆ ಮನೆಗೆ ಬರುವ ಸೊಸೆಯೊಬ್ಬಳು ಆ ಮನೆಯ ಸದಸ್ಯರೆಲ್ಲರ ಮನಸನ್ನು ಹೇಗೆ ಬದಲಾಯಿಸುತ್ತಾಳೆ ಎನ್ನುವುದೇ ಕಥೆಯ ತಿರುಳು. ಕೌಟುಂಬಿಕ ಕಥಾಹಂದರ ಇರುವ ಸೀರಿಯಲ್ ಕಲರ್ಸ್ ವಾಹಿನಿಯಲ್ಲಿ ಪ್ರಸಾರವಾಗುತ್ತಿದೆ. ಆ ಮನೆಯ ಯಜಮಾನ ಹಾಗೂ ಅಣ್ಣಾವ್ರ ದೊಡ್ಡ ಫ್ಯಾನ್ ಆಗಿ ಹಿರಿನಟ ಕರಿಸುಬ್ಬು ನಟಿಸಿದ್ದಾರೆ. ಬಹಳ ದಿನಗಳ ನಂತರ ನಟಿ ಸಂಜನಾಬುರ್ಲಿ ಅವರು ನಾಯಕಿಯಾಗಿ ನಟಿಸಿದ್ದಾರೆ.

ಡಾ.ರಾಜ್ ಅಭಿಮಾನಿ ನಟರಾಜ ಆ ಕುಟುಂಬದ ಯಜಮಾನ. ತನ್ನ ಮಕ್ಕಳಿಗೂ ಮುತ್ತುರಾಜ, ಸತ್ಯಹರಿಶ್ಚಂದ್ರ, ಕಂಠೀರವ, ಮಯೂರ ಎಂದು ರಾಜ್ ಚಿತ್ರಗಳ ಹೆಸರನ್ನೇ ಇಟ್ಟಿರುತ್ತಾನೆ. ಆದರೆ ಆ ನಾಲ್ಕು ಮಕ್ಕಳದ್ದು ಒಂದೊಂದು ಹಾದಿ. ಗೊತ್ತು ಗುರಿಯಿಲ್ಲದ ಬೇಜವಾಬ್ದಾರಿ ನಟರಾಜನ ಕಾರಣದಿಂದ ಆತನ ಮಕ್ಕಳಿಗೂ ಕೆಟ್ಟ ಹೆಸರು ಬರುತ್ತೆ ಇಂಥ ಮನೆಗೆ ಯಾವ ಹೆಣ್ಣೂ ಸೊಸೆಯಾಗಿ ಬರಲು ಒಪ್ಪಲ್ಲ.

ಅಂಥಾ ಮನೆಗೆ ಕಥಾನಾಯಕಿ ಯಾಕೆ ಬರುತ್ತಾಳೆ. ಆಕೆಯ ಉದ್ದೇಶವಾದರೂ ಏನಾಗಿತ್ತು. ಆಕೆ ಬಂದ ಮೇಲೆ ಅದೇ ಮನೆಯಲ್ಲಿ ಯಾಕೆ ಉಳೀತಾಳೆ, ಈ ಎಲ್ಲ ಪ್ರಶ್ನೆಗಳಿಗೆ ಶ್ರೀಗಂಧದಗುಡಿಯಲ್ಲಿ ಉತ್ತರವಿದೆ. ನಿರ್ದೇಶಕ ಪ್ರಕಾಶ್ ಮುಚ್ಚಳಗುಡ್ಡ ಮಾತನಾಡಿ, ಒಂದು ಹೆಣ್ಣು ಮನೆಗೆ ಬಂದರೆ, ಆ ಮನೆಗೆ ತಾಯಿ, ತಂಗಿ, ಅಕ್ಕ, ಅತ್ತಿಗೆ, ಸೊಸೆ, ಮಡದಿಯೊಬ್ಬಳು ಸಿಗುತ್ತಾಳೆ. ಆಕೆ ಆ ಮನೆಯನ್ನು ಹೇಗೆ ತನ್ನ ಮಮತೆಯ ಮಡಿಲಿನಲ್ಲಿ ತೂಗಿಸಿಕೊಂಡು ಹೋಗುತ್ತಾಳೆ, ಅದನ್ನು ಹೇಗೆ ಶ್ರೀಗಂಧದ ಗುಡಿಯನ್ನಾಗಿ ಮಾಡುತ್ತಾಳೆ ಎಂಬುದನ್ನು ಈ ಕಥೆಯ ಮೂಲಕ ಹೇಳೋ ಪ್ರಯತ್ನ ಮಾಡಿದ್ದೇವೆ ಎಂದರು. ಕಥಾಕ್ರಿಯೇಷನ್ಸ್ ಬ್ಯಾನರ್‌ಅಡಿ ಪರೀಕ್ಷಿತ್ ಎಂ.ಎಸ್. ಹಾಗೂ ಪ್ರದೀಪ್ ಆಜ್ರಿ ಶ್ರೀಗಂಧದಗುಡಿಯ ನಿರ್ಮಾಪಕರು.

ಶ್ರೀ ಮುರಳಿ ಕೈಲೀಗ 'ಉಗ್ರಾಯುಧಮ್'



ನಿದ್ರಾದೇವಿ ನೆಕ್ಸ್ಟ್ ಡೋರ್ ನಿರ್ಮಾಪಕರ ಮತ್ತೊಂದು ಚಿತ್ರ ಉಗ್ರಾಯುಧಮ್. ಪುನೀತ್ ರುದ್ರನಾಗ್ ಅವರ ನಿರ್ದೇಶನದ ಈ ಚಿತ್ರದಲ್ಲಿ ಶ್ರೀಮುರಳಿ ನಾಯಕರಾಗಿ ನಟಿಸುತ್ತಿದ್ದು, ಇತ್ತೀಚೆಗೆ ಈ ಚಿತ್ರದ ಮುಹೂರ್ತ ಸಮಾರಂಭ ಶ್ರೀ ಬಂಡೆ ಮಾಂಕಾಳಮ್ಮ ದೇವಸ್ಥಾನದಲ್ಲಿ ನೆರವೇರಿತು. ನಿರ್ಮಾಪಕ ಜಯರಾಮ್ ದೇವಸಮುದ್ರ ಮಾತನಾಡುತ್ತಾ, ಪಿರಿಯಾಡಿಕ್ ಡ್ರಾಮಾ ಕಥೆಯಿರುವ ಚಿತ್ರವನ್ನು ನಮ್ಮ ಸಂಸ್ಥೆಯಡಿ ನಿರ್ಮಿಸುತ್ತಿದ್ದೇವೆ. ನಿರ್ದೇಶಕರು ತುಂಬಾ ಚೆನ್ನಾಗಿ ಕಥೆ ಮಾಡಿಕೊಂಡಿದ್ದಾರೆ. ಕಾಲ್ಪನಿಕ ಕಥೆಯನ್ನು ರಾಜಮನೆತನದ ಹಿನ್ನೆಲೆಯಲ್ಲಿ ಹೇಳೋ ಪ್ರಯತ್ನವಿದು. ದೊಡ್ಡಮಟ್ಟದಲ್ಲಿ ಚಿತ್ರವನ್ನು ಮಾಡಹೊರಟಿದ್ದೇವೆ ಎಂದರು.

ನಿರ್ದೇಶಕ ಪುನೀತ್ ಮಾತನಾಡುತ್ತಾ, ನಾನು ಹೇಳಿದ ಒಂದು ಲೈನ್ ಕೇಳಿಯೇ ನಿರ್ಮಾಪಕರು, ಶ್ರೀಮುರಳಿ ಅವರು ಚಿತ್ರ ಮಾಡಲು ಒಪ್ಪಿದರು. 700 ವರ್ಷಗಳ ಹಿಂದಿನ ಪಿರಿಯಾಡಿಕ್ ಡ್ರಾಮಾ ಕಥೆಯಿದು. ಸಕಲೇಶಪುರದ ಬಳಿ 135 ಎಕರೆ ಪ್ರದೇಶದಲ್ಲಿ ಅದ್ದೂರಿ ಸೆಟ್ ಹಾಕಲಾಗುತ್ತಿದ್ದು, ಅಲ್ಲೇ ಹೆಚ್ಚಿನ ಚಿತ್ರೀಕರಣ ನಡೆಯಲಿದೆ. ರಾಜ್‌ಕುಮಾರ್ ಅವರ ಚಿತ್ರಗಳೇ ನಾನು ಈ ಚಿತ್ರ ಮಾಡಲು ಸ್ಫೂರ್ತಿ ಎಂದರು.

ನಾಯಕ ಶ್ರೀಮುರಳಿ ಮಾತನಾಡುತ್ತಾ, ನಾನು ಬಘೀರ ಚಿತ್ರದ ನಂತರ 200ಕ್ಕೂ ಹೆಚ್ಚು ಕಥೆಗಳನ್ನು ಕೇಳಿದ್ದೇನೆ. ಅದರಲ್ಲಿ ನನಗೆ ಇಷ್ಟವಾಗಿದ್ದು ಮೂರು ಕಥೆ ಮಾತ್ರ, ಅವುಗಳಲ್ಲಿ ಈ ಕಥೆಯೂ ಒಂದು. ಈ ಚಿತ್ರದ ಮೂಲಕ ನಿರ್ದೇಶಕ ಪುನೀತ್ ರುದ್ರನಾಗ್ ಅವರು 600-700 ವರ್ಷಗಳ ಹಿಂದಿನ ಅದ್ಭುತವಾದ ಪಿರಿಯಾಡಿಕ್ ಕಥೆಯನ್ನು ತೆರೆ ಮೇಲೆ ತರಲು ಮುಂದಾಗಿದ್ದಾರೆ. ಅಷ್ಟು ಹಿಂದೆ ಹೋಗಲು ಒಂದು ಕಾರಣವೂ ಇದೆ. ನಿಜಕ್ಕೂ ಅವರು ಮಾಡಿಕೊಂಡಿರುವ ಕಥೆ ಬಹಳ ಚೆನ್ನಾಗಿದೆ. ಚಿತ್ರ ಜನರಿಗೆ ಇಷ್ಟವಾಗುತ್ತೆ ಎಂಬ ನಂಬಿಕೆಯಿದೆ, ನನ್ನ ಹುಟ್ಟುಹಬ್ಬಕ್ಕೆ ಚಿತ್ರದ ಫಸ್ಟ್‌ಲುಕ್ ರಿಲೀಸ್ ಮಾಡುತ್ತಿದ್ದೇವೆ. ಸಾಕಷ್ಟು ಪ್ರತಿಭಾವಂತರಿಗೆ ಈ ಚಿತ್ರದಲ್ಲಿ ಅವಕಾಶ ನೀಡುತ್ತಿದ್ದೇವೆ ಎಂದರು.

ದೊಡ್ಡಸ್ವಾಮೇಗೌಡರ 75ನೇ ಜನ್ಮ ದಿನೋತ್ಸವ ಪ್ರಯುಕ್ತ

ಅ.12ಕ್ಕೆ ಆರೋಗ್ಯ ತಪಾಸಣಾ ಶಿಬಿರ, ಬೃಹತ್ ಉದ್ಯೋಗ ಮೇಳ


ಜಿಲ್ಲಾ ಕುರುಬರ ಸಂಘದ ನಿರ್ದೇಶಕ ಹೇಮಂತ್ ಕಾರ್ಯಕ್ರಮದ ಕರಪತ್ರ ವಿತರಿಸಿದರು.

ಕೆ.ಆರ್.ನಗರ, ಅ.9– ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರು ಹಾಗೂ ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡರ 75ನೇ ಜನ್ಮ ದಿನೋತ್ಸವ ಅ.12 ರಂದು ನಡೆಯಲಿದ್ದು, ಇದರ ಅಂಗವಾಗಿ ಪಟ್ಟಣದ ಬಯಲು ರಂಗಮಂದಿರದಲ್ಲಿ ಆಯೋಜಿಸಿರುವ ಆರೋಗ್ಯ ತಪಾಸಣಾ ಶಿಬಿರ ಹಾಗೂ ಬೃಹತ್ ಉದ್ಯೋಗ ಮೇಳಕ್ಕೆ ನೀವು ಬನ್ನಿ, ನಿಮ್ಮ ಸ್ನೇಹಿತರನ್ನು ಕರೆ ತನ್ನಿ ಎಂದು ಜಿಲ್ಲಾ ಕುರುಬರ ಸಂಘದ ನಿರ್ದೇಶಕ ಗಂಧನಹಳ್ಳಿ ಹೇಮಂತ್ ಮನವಿ ಮಾಡಿದರು.

ತಾಲೂಕಿನ ಗಂಧನಹಳ್ಳಿಯಲ್ಲಿ ಮನೆ ಮನೆಗೆ ತೆರಳಿ ಕಾರ್ಯಕ್ರಮದ ಪೋಸ್ಟರ್ ಹಾಗೂ ಕರಪತ್ರ ಹಂಚಿ ಮಾತನಾಡಿದ ಅವರು, ಶಾಸಕ ಡಿ.ರವಿಶಂಕರ್ ಅವರ ನೇತೃತ್ವದಲ್ಲಿ ಬಡ ಹಾಗೂ ಮಧ್ಯಮ ವರ್ಗದವರ ಅನುಕೂಲಕ್ಕಾಗಿ ಆರೋಗ್ಯ ತಪಾಸಣಾ ಶಿಬಿರ ಹಾಗೂ ಉದ್ಯೋಗ ಮೇಳದಂತಹ ಜನಪರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಆರೋಗ್ಯ ತಪಾಸಣಾ ಶಿಬಿರದದಲ್ಲಿ ಹೃದಯ ಸಂಬಂಧಿ ಖಾಯಿಲೆ, ಮಧುಮೇಹ, ಕಣ್ಣಿನ ತಪಾಸಣೆ, ಮೂಳೆ ಮತ್ತು ಕೀಲು ಸಾಂದ್ರತೆ ಪರೀಕ್ಷೆ, ದಂತ ಚಿಕಿತ್ಸೆ ಸೇರಿದಂತೆ ಇನ್ನಿತರ ತಪಾಸಣೆಯನ್ನು ಜಿಲ್ಲೆಯ ಹೆಸರಾಂತ ಆಸ್ಪತ್ರೆಗಳ ನುರಿತ ತಜ್ಞ ವೈದ್ಯರ ತಂಡ ಮತ್ತು ಸಿಬ್ಬಂದಿ ಮಾಡಲಿದ್ದಾರೆ ಎಂದರು.

ಇದೇ ಮೊದಲ ಬಾರಿಗೆ ಕ್ಷೇತ್ರದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದ್ದು, ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಶಾಸಕ ಡಿ.ರವಿಶಂಕರ್ ಈಗಾಗಲೇ ನೂರಕ್ಕೂ ಹೆಚ್ಚು ಐಟಿಬಿಟಿ ಕಂಪನಿಗಳು, ಕಾರ್ಖಾನೆ, ಸಂಸ್ಥೆಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಲಿವೆ ಎಂದು ತಿಳಿಸಿದ್ದು, 18 ರಿಂದ 35 ವರ್ಷದ ಉದ್ಯೋಗಾಂಕ್ಷಿಗಳು ಅಗತ್ಯ ದಾಖಲಾತಿಗಳೊಂದಿಗೆ ನಿಗದಿತ ಸಮಯಕ್ಕೆ ಹಾಜರಾಗಿ ಎಂದು ಮನವಿ ಮಾಡಿದರು.

ಈ ವೇಳೆ ಜಿಲ್ಲಾ ಕಾಂಗ್ರೆಸ್ ಮುಖಂಡ ಕೆಂಪರಾಜು, ಯುವ ಮುಖಂಡರಾದ ಜಿ.ಜಿ.ಅಂಗಡಿ ಮಧು, ಚೇತನ್, ಅಭಿ, ಜಿ.ಎಂ. ಅಶ್ವಿನಿ ಕುಮಾರ್, ವೈಭವ್ ಸೂರ್ಯ, ಗಗನ್, ದುಷ್ಯಂತ್, ಚಿಗಾಂಗ್, ಶಿವಪ್ಪ, ಸಂದೇಶ್ ಇತರರಿದ್ದರು.

ಅಕ್ರಮ ಗಾಂಜಾ ಮಾರಾಟ: ವ್ಯಕ್ತಿ ಬಂಧನ

ಭೇರ್ಯ, ಅ.9– ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಮಾಲು ಸಮೇತ ಬಂಧಿಸುವಲ್ಲಿ ಸಾಲಿಗ್ರಾಮ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಭೇರ್ಯ ಗ್ರಾಮದ ನಿವಾಸಿ ವಾಸೀಂ ಅಕ್ರಂ(48) ಬಂಧಿತ ಆರೋಪಿ. ಈತನಿಂದ ಪೊಲೀಸರು 130 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ. ಈತ ಭೇರ್ಯ ಗ್ರಾಮದ ಕೆ.ಆರ್.ಪೇಟೆ ಮುಖ್ಯರಸ್ತೆಯಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಆತನನ್ನು ಬಂಧಿಸಿ ಪ್ರಕರಣ ದಾಖಲಿಸಿದ್ದಾರೆ.

ಸಾಲಿಗ್ರಾಮ ಠಾಣೆಯ ವೃತ್ತ ನೀರಿಕ್ಷಕ ಶಶಿಕುಮಾರ್ ಅವರ ಮಾರ್ಗದರ್ಶನದಲ್ಲಿ ಎಎಸ್ಐ ಆರ್.ಸಿದ್ದರಾಜು, ಮುಖ್ಯಪೇದೆ ಆನಂದ್, ಸಿಬ್ಬಂದಿಗಳಾದ ಕೆಂಪರಾಜು, ಗೋವಿಂದು, ಯಶವಂತ್, ಮಂಜು, ರಘು, ಬಸವರಾಜು, ಚಾಲಕ ದಿನೇಶ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಮೇಲೆ ಶೂ ಎಸೆಯಲು ಯತ್ನ ಖಂಡಿಸಿ

ವಿವಿಧೆಡೆ ವಕೀಲರು, ಪ್ರಗತಿಪರ ಸಂಘಟನೆಗಳಿಂದ ಪ್ರತಿಭಟನೆ

ಮೈಸೂರು, ಅ.9– ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಹಿರಿಯ ವಕೀಲ ರಾಕೇಶ್ ಕಿಶೋರ್ ಶೂ ಎಸೆಯಲು ಯತ್ನಿಸಿರುವ ಘಟನೆ ಖಂಡಿಸಿ ತಿ.ನರಸೀಪುರದಲ್ಲಿ ವಕೀಲರು ಹಾಗೂ ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು, ಹೆಚ್.ಡಿ.ಕೋಟೆಯಲ್ಲಿ ಜೀವಿಕ ಸಂಘಟನೆ ಮುಖಂಡರು, ಹುಣಸೂರಲ್ಲಿ ಸಮಾನ ಮನಸ್ಕ ಸಂಘಟನೆ ಮುಖಂಡರು, ಕೆ.ಆರ್.ನಗರದಲ್ಲಿ ವಕೀಲರು ಪ್ರತಿಭಟನೆ ನಡೆಸಿದರು.


ತಿ.ನರಸೀಪುರದಲ್ಲಿ ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ತಿ.ನರಸೀಪುರ: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲು ಯತ್ನಿಸಿದ ವಕೀಲನ ವಿರುದ್ಧ ಪಟ್ಟಣದಲ್ಲಿ ವಕೀಲರು ಹಾಗೂ ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು ಗುರುವಾರ ಪ್ರತ್ಯೇಕ ಪ್ರತಿಭಟನೆ ನಡೆಸಿದರು.

ನ್ಯಾಯಾಲಯದ ಕಲಾಪದಿಂದ ಹೊರಗುಳಿದ ವಕೀಲರು ತಾಲೂಕು ಕಚೇರಿಗೆ ಮೆರವಣಿಗೆಯಲ್ಲಿ ತೆರಳಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿ ಗ್ರೇಡ್–2 ತಹಸೀಲ್ದಾರ್ ರಾಜಾಕಾಂತ್ ಅವರಿಗೆ ಮನವಿ ಸಲ್ಲಿಸಿದರು.


ಕೆ.ಆರ್.ನಗರದಲ್ಲಿ ವಕೀಲರು ಕೋರ್ಟ್ ಕಲಾಪ ಬಹಿಷ್ಕರಿಸಿದರು.

ವಕೀಲರ ಸಂಘದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ಸಂವಿಧಾನದ ಅಡಿ ರಚನೆಯಾಗಿರುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾನೂನು ಮತ್ತು ಸರ್ವಜನ ಹಿತರಕ್ಷಣೆ ಪ್ರಮುಖವಾಗಿದೆ. ಸಮಾಜ ವಿರೋಧಿ, ದೇಶ ವಿರೋಧಿ, ಸಂವಿಧಾನ ವಿರೋಧಿ ಮತ್ತು ಪ್ರಜಾಪ್ರಭುತ್ವ ವಿರೋಧಿ ಮನಸ್ಥಿತಿಯವರಿಂದ ಈ ಘಟನೆ ನಡೆದಿದೆ. ಹಿರಿಯ ವಕೀಲರೊಬ್ಬರು ನ್ಯಾಯಮೂರ್ತಿಗಳಿಗೆ ಚಪ್ಪಲಿ ಎಸೆಯಲು ಯತ್ನಿಸಿರುವುದು ನ್ಯಾಯಾಂಗ ವ್ಯವಸ್ಥೆ ಮತ್ತು ವಕೀಲ ವೃತ್ತಿಗೆ ದೊಡ್ಡ ಅವಮಾನವಾಗಿದೆ. ಹೀಗಾಗಿ ಕೇಂದ್ರ ಸರ್ಕಾರ ಆತನ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ವೇಳೆ ವಕೀಲರ ಸಂಘದ ಮಾಜಿ ಅಧ್ಯಕ್ಷ ಕೆ.ಜಿ.ಪಾಲಾಕ್ಷ ಮೂರ್ತಿ, ಉಪಾಧ್ಯಕ್ಷ ಎಸ್.ಸಿ.ಶಾಂತ ನಾಗರಾಜು, ಕಾರ್ಯದರ್ಶಿ ಕೆ.ಸೋಮಣ್ಣ, ಸಹ ಕಾರ್ಯದರ್ಶಿ ಟಿ.ಎಂ.ಮಹದೇವಸ್ವಾಮಿ, ಖಜಾಂಚಿ ಎಂ.ಮಹದೇವಸ್ವಾಮಿ, ವಕೀಲರಾದ ಜಗದೀಶ್, ಶ್ರೀಧರ್, ರಾಜಣ್ಣ, ಸಿದ್ದರಾಜು, ಉಮೇಶ್ ಕುಮಾರ್, ಕೃಷ್ಣಮೂರ್ತಿ, ರಾಜು, ಬಸವಣ್ಣ, ರಂಗರಾಜು, ರಂಗಯ್ಯ, ರಂಗಪ್ಪ, ಜಯಪ್ರಕಾಶ್, ವಿನಯ್, ಪಿ.ಸತೀಶ್, ನಿಧಿ, ಶಿವಕುಮಾರ್, ಉದಯ್ ಕುಮಾರ್, ಸಿದ್ದೇಗೌಡ, ನಾಗಮ್ಮ, ರಾಘವೇಂದ್ರ, ಮಂಜುನಾಥ್, ಲಿಂಗಣ್ಣ ಸೇರಿದಂತೆ ಮತ್ತಿತರರಿದ್ದರು.

ಪ್ರಗತಿಪರರ ಪ್ರತಿಭಟನೆ: ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಳಿ ಜಮಾಯಿಸಿದ ವಿವಿಧ ದಲಿತ ಸಂಘಟನೆ ಹಾಗೂ ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲು ಯತ್ನಿಸಿದ ಘಟನೆ ಖಂಡಿಸಿ ಮಾನವ ಸರಪಳಿ ರಚಿಸಿ ಆರೋಪಿ ರಾಕೇಶ್ ಚೌಧರಿ ಭಾವಚಿತ್ರವನ್ನು ತುಳಿದು ಟೈರ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.


ಹೆಚ್.ಡಿ.ಕೋಟೆಯಲ್ಲಿ ಜೀವಿಕಾ ಸಂಘಟನೆ ಸದಸ್ಯರು ಪ್ರತಿಭಟನೆ ನಡೆಸಿದರು.

ಈ ವೇಳೆ ಅಂಬೇಡ್ಕರ್ ಅಭಿವೃದ್ಧಿ ಜಿಲ್ಲಾಧ್ಯಕ್ಷ ಜೆ.ಮಹದೇವ, ಸಾರಿಕಾರಿಟಿ ಯೂತ್ ಮೂವ್‌ಮೆಂಟ್‌ನ ರಾಜ್ಯ ಕಾರ್ಯದರ್ಶಿ ಮುದಾಸಿರ್, ಹಿರಿಯ ದಲಿತ ಮುಖಂಡ ವರದರಾಜು, ದಸಂಸ ಜಿಲ್ಲಾ ಸಂಘದ ಅಧ್ಯಕ್ಷ ಮಹದೇವಯ್ಯ ಮಾತನಾಡಿ, ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಮೇಲೆ ವಕೀಲರೊಬ್ಬರು ಚಪ್ಪಲಿ ಎಸೆಯಲು ಯತ್ನಿಸಿರುವುದು ಖಂಡನಾರ್ಹ. ಹೀಗಾಗಿ ತಪ್ಪು ಮಾಡಿರುವ ಆರೋಪಿ ಕೂಡಲೇ ದೇಶದ ಜನತೆಯ ಕ್ಷಮೆಯಾಚಿಸಬೇಕು. ಅವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ದಸಂಸ ರಾಜ್ಯ ವಿಭಾಗೀಯ ಸಂಚಾಲಕ ಡಾ.ಚಂದ್ರ ಶೇಖರ್, ಸೋಸಲೆ ರಾಜಶೇಖರ ಮೂರ್ತಿ, ಎ.ಶಿವಕುಮಾರ್, ಎಸ್.ಸಿ.ಗಣೇಶಸ್ವಾಮಿ, ಜಿ.ಪಿ.ನಿರಂಜನ್, ಮಂಜು, ಶಿವಣ್ಣ ಮರಿಸ್ವಾಮಿ, ಮನೋಜ್ ಕುಮಾರ್, ರಾಚಪ್ಪ, ಪ್ರಸನ್ನ, ಗವಿಸಿದ್ದಯ್ಯ, ಪರಶುರಾಮ, ಶಾಂತಕುಮಾರ, ಅರ್ಜುನ್, ರವಿಕಾಂತ್, ಗೋವಿಂದರಾಜು, ಸ್ವಾಮಿ, ಅರ್ಜುನ್, ಡಿ.ಎಸ್.ಪ್ರೇಮಕುಮಾರ್, ರಾಜೇಂದ್ರ ಮತ್ತಿತರರಿದ್ದರು.

ಹುಣಸೂರು: ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲು ಯತ್ನಿಸಿದ ಪ್ರಕರಣ ಖಂಡಿಸಿ ನಗರದ ಸಂವಿಧಾನ ಸರ್ಕಲ್‌ನಲ್ಲಿ ಸಮಾನ ಮನಸ್ಕ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು. ಈ ವೇಳೆ ಸೋಷಿಯಲ್ ಜಸ್ಟೀಸ್ ಫೋರಂ ಸಂಘಟನಾ ಸಂಚಾಲಕ ಕೃಷ್ಣ, ಪ್ರಕಾಶ್, ವೇಣುಕುಮಾರ್, ಜಿಲ್ಲಾ ಮಹಿಳಾ ಸಂಚ ಸಂಚಾಲಕಿ ಮಹದೇವಮ್ಮ, ರೇಣುಕಾ, ಪುಟ್ಟಮಲ್ಲು, ಮುಖಂಡರಾದ ಕಾಂತರಾಜ, ನಂಜುಂಡ, ಮುಜಾಮಿಲ್, ಅಜೀಜುಲ್ಲಾ ಸೇರಿದಂತೆ ಇತರರಿದ್ದರು.


ಹುಣಸೂರಲ್ಲಿ ಸಮಾನ ಮನಸ್ಕ ಸಂಘಟನೆಗಳ ಮುಖಂಡರು ಪ್ರತಿಭಟಿಸಿದರು.

ಹೆಚ್.ಡಿ.ಕೋಟೆ: ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲು ಯತ್ನಿಸಿದ ಪ್ರಕರಣ ಖಂಡಿಸಿ ಕೋಟೆಯಲ್ಲೂ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಜೀವಿಕ ಸಂಘಟನೆ ಜಿಲ್ಲಾ ಸಂಚಾಲಕ ಬಸವರಾಜು, ರಾಜ್ಯ ಸಂಚಾಲಕ ಉಮೇಶ, ತಾಲೂಕು ಸಂಚಾಲಕ ಚಂದ್ರಶೇಖರ, ಆದಿ ಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಶಿವರಾಜು, ಪುಟ್ಟಮಾದು, ಕುಮಾರ, ಅಂತರಸಂತೆ ಜಿ.ಎಲ್.ಧರ್ಮ, ಕೆ.ಎಂ.ಕಾರ್ತಿಕ್, ಬಿಪಿನ್, ಮಲ್ಲೇಶ್, ಸುನೀಲ್, ಅರುಣ್, ದಿನೇಶ್, ಜೆ.ಕೆ.ಶಿವರಾಜು, ಪುರುಷೋತ್ತಮ, ಗಾಯತ್ರಿ, ಕೆ.ಪಿ.ಮಂಜುನಾಥ್, ಜಯರಾಮೇಗೌಡ, ತಿಮ್ಮೇಗೌಡ, ಶಶಿ ಕಾಂತ್, ಹೆಚ್.ಕೆ.ಉದಯ್, ಡಿ.ಆರ್. ರಮೇಶ್, ನೇತ್ರಾವತಿ, ಎಚ್.ಕೆ.ಹರೀಶ್, ಪಿ.ದಯಾನಂದ, ಕೆ.ಪಿ.ರಮೇಶ್ ಭಾಗವಹಿಸಿದ್ದರು.

ಪ್ರಗತಿಪರ ಒಕ್ಕೂಟದ ಪ್ರಕಾಶ್, ಜೀವಿಕ ಸಂಘಟನೆಯ ಶಿವಣ್ಣ, ನಟರಾಜು, ಶಿವರಾಜು, ಚೆನ್ನ, ಮಹೇಶ ಇದ್ದರು.

ಕೆಆರ್.ನಗರ: ಪಟ್ಟಣದಲ್ಲಿ ಘಟನೆ ಖಂಡಿಸಿ ವಕೀಲರು ನ್ಯಾಯಾಲಯದ ಕಲಾಪ ಬಹಿಷ್ಕರಿಸಿ ಪ್ರತಿಭಟನೆ ನಡೆಸಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ ಹಿರಿಯ ವಕೀಲ ರಾಕೇಶ್ ಕಿಶೋರ್ ಅವರನ್ನು ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.


ಈ ವೇಳೆ ಹಿರಿಯ ವಕೀಲ ರುದ್ರಮೂರ್ತಿ, ಜಿ.ಆರ್.ರಾಮೇಗೌಡ, ವಕೀಲರಾದ ಎಸ್.ನಾಗರಾಜು, ಕೆ.ಎಸ್.ದಿಲೀಪ್, ತಿಮ್ಮಪ್ಪ, ಬಿ.ಎಸ್.ಶಿವಶಂಕರ್, ಬಿ.ಎಸ್.ಮಹದೇವಸ್ವಾಮಿ, ಮೂರ್ತಿ, ಡಿ.ಸಿ.ಗೋವಿಂದರಾಜು, ಎಂ.ಆರ್. ರಘು,

ನಿಂಗಪ್ಪ ನಿಧನ



ನಂಜನಗೂಡು, ಅ.9– ನಗರದ ಚಾಮಲಾಪುರದ ಹುಂಡಿ ಬಡಾವಣೆ ನಿವಾಸಿ, ಮಾಜಿ ಪುರಸಭೆ ಸದಸ್ಯ ನಿಂಗಪ್ಪ (60) ಗುರುವಾರ ನಿಧನರಾದರು. ಮೃತರು ಪತ್ನಿ, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ನಗರದ ಮಿಲ್ರಿ ಮಾಳದ ಬಳಿಯ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಲಯಪ್ಪ



ಹೆಚ್.ಡಿ.ಕೋಟೆ, ಅ.9– ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ಮಲಯಪ್ಪ(85) ಗುರುವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಕೊಳ್ಳೇಗಾಲ ತಾಲೂಕಿನ ಸರಗೂರು ಗ್ರಾಮದ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂರನೇ ಪುಟದಿಂದ

ಅನ್ನಭಾಗ್ಯದ ಐದು ಕೆಜಿ ಅಕ್ಕಿ ಕಡಿತ

ನೋಂದಾಯಿತ ಶ್ರಮಿಕರ ಮಕ್ಕಳ ಶಿಕ್ಷಣಕ್ಕಾಗಿ 405.55 ಕೋಟಿ ರೂ. ವೆಚ್ಚದಲ್ಲಿ 11 ಶ್ರಮಿಕ ವಸತಿ ಶಾಲೆಗಳನ್ನು ರಾಜ್ಯಾದ್ಯಂತ ನಿರ್ಮಿಸಲು ನಿರ್ಧರಿಸಲಾಗಿದೆ.

ಸೇತುವೆಗಳ ನಿರ್ಮಾಣ, ರಿಪೇರಿ: ಸೇತುವೆಗಳ ಪುನರ್ ನಿರ್ಮಾಣ ಹಾಗೂ ಪುನಃಶ್ಚೇತನ ಕಾಮಗಾರಿಗಳನ್ನು 2,000 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ತಾತ್ವಿಕ ಅನುಮೋದನೆ ನೀಡಲಾಗಿದೆ. ಅಲ್ಲದೆ, 39 ಬೃಹತ್ ಸೇತುವೆ ನಿರ್ಮಾಣ ಕೈಗೆತ್ತಿಕೊಳ್ಳಲು 1,000 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಕೇಂದ್ರ ಪುರಸ್ಕೃತ ಯೋಜನೆಯಡಿ ಪೊಲೀಸ್ ಇಲಾಖೆಗೆ ಗಣಕ ಯಂತ್ರಗಳ ಖರೀದಿಗೆ 89.22 ಕೋಟಿ ರೂ. ನೀಡಲಾಗಿದೆ.

ಹೊಸ ತಂತ್ರಾಂಶ: ಭದ್ರತಾ ಕಾರ್ಯಾಚರಣೆ ಕೇಂದ್ರ ನವೀಕರಣ ಮತ್ತು ಸೈಬರ್ ಭದ್ರತೆ ಬಲಪಡಿಸಲು 38.33 ಕೋಟಿ ರೂ. ಅಂದಾಜು ಮೊತ್ತದಲ್ಲಿ ಹೊಸ ತಂತ್ರಾಂಶ ಅಳವಡಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಸರ್ಕಾರದ ಖಾತರಿ: ಪ್ರಸಕ್ತ ಸಾಲಿನಲ್ಲಿ ರಸಗೊಬ್ಬರ ದಾಸ್ತಾನಿಗೆ ಬೀಜ ನಿಗಮ ಹಾಗೂ ಕರ್ನಾಟಕ ಸಹಕಾರ ಮಹಾಮಂಡಳ ತಲಾ 200 ಕೋಟಿ ರೂ. ವರೆಗೆ ಸಾಲ ಪಡೆಯಲು ಸರ್ಕಾರದ ಖಾತ್ರಿ ನೀಡಲಾಗುವುದು ಎಂದರು.


ಸಿಪಿಸಿ ಪಾಲಿಟೆಕ್ನಿಕ್ ಪುನಶ್ಚೇತನಕ್ಕೆ 120 ಕೋಟಿ

ಬೆಂಗಳೂರು, ಅ.9(ಕೆಎಂಶಿ)–ಮೈಸೂರಿನ ಸಿಪಿಸಿ ಪಾಲಿಟೆಕ್ನಿಕ್ ಹಳೇ ಕಟ್ಟಡ ನವೀಕರಣ ಮತ್ತು ಇನ್ನಿತರ ಮೂಲ ಸೌಕರ್ಯ ಕಲ್ಪಿಸಲು ರಾಜ್ಯ ಸಚಿವ ಸಂಪುಟ 120 ಕೋಟಿ ರೂ.ಗಳಿಗೆ ಅನುಮೋದನೆ ಮಾಡಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚಿನ ದಿನಗಳಲ್ಲಿ ತಮ್ಮ ಜಿಲ್ಲೆ ಮೈಸೂರಿನಲ್ಲಿ ಮೂಲಸೌಕರ್ಯ ಕಲ್ಪಿಸಲು ವಿವಿಧ ಯೋಜನೆಗಳಿಗೆ ಸಂಪುಟದ ಅನುಮತಿ ದೊರಕಿಸಿಕೊಟ್ಟಿದ್ದಾರೆ. ಇದೀಗ ಅತ್ಯಂತ ಹಳೆಯದಾದ ಸಿಪಿಸಿ ಪಾಲಿಟೆಕ್ನಿಕ್ ಆವರಣದಲ್ಲಿ ಸಭಾಂಗಣ ನಿರ್ಮಿಸಲು ಹಾಗೂ ಇತರ ಮೂಲಸೌಕರ್ಯ ಕಲ್ಪಿಸಲು ಈ ಹಣ ಬಿಡುಗಡೆ ಮಾಡಿದ್ದಾರೆ.

ಬಾಲಕ ಸಾವು, ಮೂವರಿಗೆ ಗಾಯ





ದಟ್ಟ ಹೊಗೆ ಮತ್ತು ಬೆಂಕಿಯ ಕೆನ್ನಾಲಿಗೆ ನಡುವೆ ಸಿಲುಕಿದ್ದ ವಿದ್ಯಾರ್ಥಿ ಪುಷ್ಪಕ್ ಹೊರ ಬರಲಾರದೆ ಸ್ಥಳದಲ್ಲಿಯೇ ಸಜೀವ ದಹನವಾಗಿದ್ದಾನೆ.

ಬೆಂಕಿ ನಂದಿಸುವ ಕಾರ್ಯಾಚರಣೆ ವೇಳೆ ಪುಷ್ಪಕ್‌ನ ಮೃತದೇಹ ಬಹುತೇಕ ಸುಟ್ಟು ಹೋದ ಸ್ಥಿತಿಯಲ್ಲಿ ವಸತಿ ನಿಲಯದ ಕೊಠಡಿಯಲ್ಲಿ ಪತ್ತೆಯಾಗಿದ್ದು ಮಡಿಕೇರಿ ಗ್ರಾಮಾಂತರ ಪೊಲೀಸರು ವಶಕ್ಕೆ ಪಡೆದರು. ಬಳಿಕ ಸ್ಥಳದಲ್ಲೇ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಪೋಷಕರಿಗೆ ದೇಹ ಹಸ್ತಾಂತರಿಸಿದರು.

ಘಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ವೆಂಕಟ್ ರಾಜಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಬಾರಿಕೆ ದಿನೇಶ್, ಮಡಿಕೇರಿ ತಹಶೀಲ್ದಾರ್ ಶ್ರೀಧರ್, ಡಿಡಿಪಿಐ ಗಂಗಾಧರಪ್ಪ, ಅಗ್ನಿಶಾಮಕ ದಳದ ಅಧಿಕಾರಿ, ಮಡಿಕೇರಿ ಕ್ಷೇತ್ರ ಶಿಕ್ಷಣಾಧಿಕಾರಿ, ಚೆಸ್ಕಾಂ ಹಿರಿಯ ಅಧಿಕಾರಿಗಳು, ಗ್ರಾಮಾಂತರ ಠಾಣಾ ಪೊಲೀಸ್, ವಿಧಿ ವಿಜ್ಞಾನ ತಜ್ಞರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಘಟನೆಯ ತನಿಖೆ ನಡೆಯಲಿದೆ

ಸ್ಥಳಕ್ಕಾಗಮಿಸಿದ ಜಿಲ್ಲಾಧಿಕಾರಿ ವೆಂಕಟ್ ರಾಜಾ ಮೃತ ಬಾಲಕನ ಪೋಷಕರಿಗೆ ಸಾಂತ್ವನ ಹೇಳಿದರಲ್ಲದೇ ಘಟನೆ ಬಗ್ಗೆ ವಿಷಾಧ ವ್ಯಕ್ತಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿಗಳು, ಈ ಬೆಂಕಿ ಘಟನೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಹಾಗೂ ಓರ್ವ ವಾರ್ಡನ್‌ಗೆ ಸಣ್ಣಪುಟ್ಟ ಗಾಯಗಳಾಗಿದ್ದು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ ಎಂದು ಹೇಳಿದರು. ಶಾಲೆಗೆ ಶಿಕ್ಷಣ ಇಲಾಖೆ ಅನುಮತಿ ನೀಡಿತ್ತೇ, ಶಾಲೆ ಮತ್ತು ವಸತಿ ನಿಲಯದಲ್ಲಿ ಎಷ್ಟು ಮಕ್ಕಳಿದ್ದರು. ಶಾಲೆ ಹೇಗೆ ನಡೆಯುತ್ತಿತ್ತು, ಸಂಬಂಧಿಸಿದ ಇಲಾಖೆಗಳಿಂದ ಅನುಮತಿ ಪಡೆಯಲಾಗಿತ್ತೇ, ಸುರಕ್ಷಾ ಕ್ರಮಗಳನ್ನು ಮಾಡಿದ್ದರೇ ಎನ್ನುವ ಕುರಿತು ಸಂಬಂಧಿಸಿದ ಇಲಾಖೆಯ ಉನ್ನತ ಅಧಿಕಾರಿಗಳಿಂದ ತನಿಖೆ ಮಾಡಿಸಲಾಗುತ್ತದೆ ಎಂದು ಹೇಳಿದರು. ಮೃತ ವಿದ್ಯಾರ್ಥಿಯ ಕುಟುಂಬಕ್ಕೆ ಪರಿಹಾರ ನೀಡುವ ವಿಚಾರವಾಗಿ ಸರಕಾರದ ಗಮನ ಸೆಳೆಯಲಾಗು ತ್ತದೆ. ನೊಂದ ಕುಟುಂಬದ ಜೊತೆ ಜಿಲ್ಲಾಡಳಿತ ಇರಲಿದೆ ಎಂದು ಭರವಸೆ ನೀಡಿದರು.

ಗುರುವಾರ ಮುಂಜಾನೆ 4 ಗಂಟೆಯ ಸಮಯದಲ್ಲಿ ಬೆಂಕಿ ದುರಂತ ನಡೆದಿದೆ. ಶಾಲಾ ಸಿಬ್ಬಂದಿ 52 ಮಕ್ಕಳನ್ನು ರಕ್ಷಿಸಿದ್ದಾರೆ. ಘಟನಾ ಸ್ಥಳವನ್ನು ಪರಿಶೀಲನೆ ನಡೆಸಲಾಗಿದ್ದು, ಪೊಲೀಸ್ ಇಲಾಖೆ ತನಿಖೆ ನಡೆಸುತ್ತದೆ. ಸಾರ್ವಜನಿಕ ಶಿಕ್ಷಣ ಇಲಾಖೆ, ಡಿಡಿಪಿಐ ಕೂಡ ಘಟನೆಯ ತನಿಖೆ ನಡೆಸಲಿದ್ದಾರೆ. ಓರ್ವ ವಿದ್ಯಾರ್ಥಿ ಹೇಗೆ ಒಳಗೆ ಸಿಲುಕಿಕೊಂಡ ಎಂಬುದು ನಂತರ ತಿಳಿದು ಬರಬೇಕಿದೆ. ಸ್ಥಳದಲ್ಲೇ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಹಸ್ತಾಂತರಿಸಲಾಗಿದೆ. - ಬಾರಿಕೆ ದಿನೇಶ್, ಕೊಡಗು ಎಡಿಷನಲ್ ಎಸ್.ಪಿ.

ಆರೋಪಿ ಕಾಲಿಗೆ ಗುಂಡು

ಆರೋಪಿ ಪತ್ತೆಗೆ ತಾಂತ್ರಿಕ ತಂಡದ ಚಾಣಾಕ್ಷತನ: ಕಳೆದ ರಾತ್ರಿ ಹೆತ್ತವರೊಂದಿಗೆ ಶೆಡ್ ಒಳಗೆ ಮಲಗಿದ್ದ ಬಾಲಕಿ ಬೆಳಗಾಗುವಷ್ಟರಲ್ಲಿ ಹತ್ಯೆಗೀಡಾಗಿದ್ದಳು. ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿಗಳೇ ಇಲ್ಲದಿರುವಾಗ ಪೊಲೀಸ್ ಇಲಾಖೆಯ ತಾಂತ್ರಿಕ ತಂಡ ಕಾರ್ಯೋನ್ಮುಖವಾಗಿದೆ. ಘಟನೆ ನಡೆದಿದ್ದ ದಸರಾ ವಸ್ತುಪ್ರದರ್ಶನ ಮೈದಾನದ ಸುತ್ತಮುತ್ತಲಿನ ಸಿಸಿ ಕ್ಯಾಮರಾಗಳ ದೃಶ್ಯಾವಳಿಗಳನ್ನು ಒಂದು ತಂಡ ಪರಿಶೀಲಿಸುತ್ತಿದ್ದರೆ, ಮತ್ತೊಂದು ತಂಡ ಅತ್ಯಾಚಾರವೆಸಗಿ ಹತ್ಯೆ ಮಾಡುವ ಅಪರಾಧಿಗಳ ಕೇಸ್ ಹಿಸ್ಟರಿಯ ಹುಡುಕಾಟದಲ್ಲಿ ತೊಡಗಿದೆ. ಅದೇ ವೇಳೆ ಮುಂಜಾನೆ ಹಾರ್ಡಿಂಜ್ ಸರ್ಕಲ್‌ನಲ್ಲಿ ವ್ಯಕ್ತಿಯೋರ್ವ ನಡೆದುಕೊಂಡು ಹೋಗುತ್ತಿರುವ ದೃಶ್ಯಾವಳಿಯನ್ನು ತಾಂತ್ರಿಕ ತಂಡ ಪತ್ತೆ ಮಾಡಿದೆ. ಆದರೆ ಆತನೇ ಈ ದುಷ್ಕೃತ್ಯ ಎಸಗಿರಬಹುದೇ ಎಂಬುದು ಆ ಸಂದರ್ಭದಲ್ಲಿ ಗೊತ್ತಾಗಲಿಲ್ಲವಾದರೂ, ಅತ್ಯಾಚಾರವೆಸಗಿ ಹತ್ಯೆಗೈಯ್ಯುವವರ ಕೇಸ್ ಹಿಸ್ಟರಿಯನ್ನು ಜಾಲಾಡುತ್ತಿದ್ದ ತಂಡವು ಸಿಸಿ ಕ್ಯಾಮರಾ ದೃಶ್ಯಾವಳಿಯಲ್ಲಿ ಕಂಡು ಬಂದ ವ್ಯಕ್ತಿಯ ಗುರುತನ್ನು ಪತ್ತೆ ಹಚ್ಚಿದೆ.

2019ರ ಅಕ್ಟೋಬರ್ 26ರಂದು ಸಂಜೆ ಕೊಳ್ಳೇಗಾಲದ ಜೆಎಸ್‌ಎಸ್ ಕಾಲೇಜು ಸೇತುವೆ ಬಳಿ ಯುವತಿಯ ಮೇಲೆ ಅತ್ಯಾಚಾರವೆಸಗಲು ಯತ್ನಿಸಿ, ಸೇತುವೆಯ ಕೆಳಗೆ ನೀರಿನಲ್ಲಿ ಮುಳುಗಿಸಿ ಆಕೆಯನ್ನು ಹತ್ಯೆಗೈಯ್ಯಲು ಪ್ರಯತ್ನಿಸಿದ್ದ ಆರೋಪದ ಮೇರೆಗೆ 2025ರ ಫೆ.22ರಂದು ಕೊಳ್ಳೇಗಾಲದ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ 4 ವರ್ಷ ಜೈಲು ಶಿಕ್ಷೆಗೆ ಗುರಿಯಾಗಿದ್ದ ವ್ಯಕ್ತಿ ಈತ ಎಂಬುದನ್ನು ಪೊಲೀಸರ ತಂಡ ಖಚಿತಪಡಿಸಿಕೊಂಡಿದೆ.

ಜೈಲಿನಲ್ಲಿರಬೇಕಾದ ಈತ ಹೇಗೆ ಇಲ್ಲಿಗೆ ಬರಲು ಸಾಧ್ಯ ಎಂಬುದರ ಬಗ್ಗೆ ಪರಿಶೀಲನೆ ನಡೆಸಿದ ವೇಳೆ ಈತ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ ಜಾಮೀನು ಪಡೆದು ಹೊರ ಬಂದಿದ್ದಾನೆ ಎಂಬ ವಿಷಯ ಪೊಲೀಸರಿಗೆ ಲಭ್ಯವಾಗಿದೆ.

ಇಷ್ಟು ವಿವರಗಳು ತಾಂತ್ರಿಕ ತಂಡದಿಂದ ಹೊರ ಬರುತ್ತಿದ್ದಂತೆಯೇ ಆರೋಪಿ ಬಂಧನಕ್ಕಾಗಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ವಿಶೇಷ ತಂಡವನ್ನು ರಚಿಸಿದ್ದರು. ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಆಧರಿಸಿ ಈತ ಕೊಳ್ಳೇಗಾಲಕ್ಕೆ ಹೋಗಿರಬಹುದು ಎಂಬ ಸಂಶಯದ ಮೇರೆಗೆ ಒಂದು ತಂಡ ಕಾರ್ಯೋನ್ಮುಖವಾಗಿದೆ. ಅದೇ ವೇಳೆ ಕೊಳ್ಳೇಗಾಲ ಪಟ್ಟಣ ಪೊಲೀಸರ ನೆರವನ್ನು ಪಡೆಯಲಾಗಿದೆ ಎಂದು ಹೇಳಲಾಗಿದೆ. ಸಂಜೆ 5.45ರ ಸುಮಾರಿನಲ್ಲಿ ಕಾರ್ತಿಕ್‌ನನ್ನು ಕೊಳ್ಳೇಗಾಲದಲ್ಲಿ ವಶಕ್ಕೆ ಪಡೆದ ಪೊಲೀಸರು, ನಜರ್‌ಬಾದ್ ಠಾಣೆಗೆ ಕರೆತಂದು ವಿಚಾರಣೆ ನಡೆಸುತ್ತಿದ್ದ ವೇಳೆ ಪ್ರಾಥಮಿಕ ಹಂತದಲ್ಲೇ ಈತನೇ ಬಾಲಕಿಯ ಅತ್ಯಾಚಾರವೆಸಗಿ ಹತ್ಯೆ ಮಾಡಿದ್ದಾನೆ ಎಂಬುದು ಖಚಿತಪಟ್ಟಿದೆ.

ತನಿಖೆಯ ಭಾಗವಾಗಿ ಸಬ್ ಇನ್ಸ್‌ಪೆಕ್ಟರ್ ಜೈಕೀರ್ತಿ ನೇತೃತ್ವದ ಪೊಲೀಸರ ತಂಡ ಕಾರ್ತಿಕ್‌ನನ್ನು ಬಿಎಂಶ್ರೀ ನಗರಕ್ಕೆ ಕರೆದೊಯ್ಯುತ್ತಿರುವ ವೇಳೆ ಗೂಡ್ಸ್‌ಶೆಡ್ ರಸ್ತೆಯ ನಿರ್ಜನ ಪ್ರದೇಶದಲ್ಲಿ ಮೂತ್ರ ವಿಸರ್ಜನೆ ಮಾಡಬೇಕೆಂದು ವಿನಂತಿಸಿಕೊಂಡಿದ್ದಾನೆ. ವಾಹನದಿಂದ ಕೆಳಗಿಳಿಯುತ್ತಿದ್ದಂತೆಯೇ ಪೊಲೀಸರ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸುತ್ತಿದ್ದ ಕಾರ್ತಿಕ್‌ನ ಕಾಲಿಗೆ ಸಬ್ ಇನ್ಸ್‌ಪೆಕ್ಟರ್ ಜೈಕೀರ್ತಿ ಗುಂಡು ಹಾರಿಸಿದ್ದಾರೆ.

ಬಾಲಕಿ ಅತ್ಯಾಚಾರ-ಹತ್ಯೆ

ಅಲಿಯಾಸ್ ಗಿಲ್ಕಿ ವೆಂಕಟೇಶ್ ನನ್ನು ಆರು ಮಂದಿಯ ಗುಂಪೊಂದು ಇದೇ ಸ್ಥಳದಲ್ಲಿ ಮನಸೋಇಚ್ಛೆ ಕೊಚ್ಚಿ ಕೊಲೆಗೈದಿತ್ತು. ಆ ಘಟನೆ ಯಿಂದ ಬೆಚ್ಚಿಬಿದ್ದಿದ್ದ ಸುತ್ತಮುತ್ತಲಿನ ಜನರಿಗೆ ಇದೀಗ ಅಪ್ರಾಪ್ತ ಬಾಲಕಿ ಯನ್ನು ಬರ್ಬರವಾಗಿ ಹತ್ಯೆಗೈದಿರುವುದು ತೀವ್ರ ಆತಂಕ ತಂದಿದೆ. ಘಟನಾ ಸ್ಥಳಕ್ಕೆ ನಗರ ಪೊಲೀಸ್ ಕಮಿಷನರ್ ಸೀಮಾ ಲಟ್ಕರ್, ಡಿಸಿಪಿಗಳಾದ ಆರ್.ಎನ್. ಬಿಂಧುಮಣಿ, ಕೆ.ಎಸ್. ಸುಂದರ್‌ರಾಜ್, ದೇವರಾಜ ಉಪ ವಿಭಾಗದ ಎಸಿಪಿ ರಾಜೇಂದ್ರ, ಬೆರಳಚ್ಚು ಮುದ್ರೆ ವಿಭಾಗ ಹಾಗೂ ಶ್ವಾನ ದಳದ ಸಿಬ್ಬಂದಿ ದಾವಿಸಿ ಪರಿಶೀಲನೆ ನಡೆಸಿದರು.



ರಾತ್ರಿ ಗಸ್ತು ವಿಫಲ !

ಮಂಗಳವಾರ ವೆಂಕಟೇಶ್ ಹತ್ಯೆ ನಡೆದ ಹಿನ್ನಲೆಯಲ್ಲಿ ಪೊಲೀಸರು ಎಚ್ಚೆತ್ತು ಅಂದು ರಾತ್ರಿಯಿಂದಲೇ ಮೈಸೂರು ನಗರದಾದ್ಯಂತ ಎಲ್ಲಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವಿಶೇಷ ಗಸ್ತು ಕಾರ್ಯಾಚರಣೆ ಆರಂಭಿಸಿದ್ದರು. ಅದರನ್ವಯ ರಾತ್ರಿಯಿಡೀ ನಜರ್‌ಬಾದ್ ಪೊಲೀಸರು ತಮ್ಮ ವ್ಯಾಪ್ತಿಯಲ್ಲಿ ಗಸ್ತು ಕಾರ್ಯಾಚರಣೆ ನಡೆಸಿದ್ದರೆ ಖಂಡಿತವಾಗಿಯೂ ಅಪ್ರಾಪ್ತ ಬಾಲಕಿ ಕೊಲೆಯನ್ನು ತಪ್ಪಿಸಬಹುದಿತ್ತು. ಮೈಸೂರಲ್ಲಿ ಪುಂಡು–ಪೋಕರಿಗಳಿಗೆ ಪೊಲೀಸರ ಭಯವೇ ಇಲ್ಲದಂತಾಗಿದೆ. ಪೊಲೀಸರು ಅಷ್ಟೇ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಹಿಂಜರಿಯುತ್ತಿದ್ದಾರೆ. ಇದರ ಪರಿಣಾಮವೇ ಇಂತಹ ಅಮಾಯಕರು ಬಲಿಯಾಗುತ್ತಿದ್ದಾರೆ ಎಂದು ಸಾರ್ವಜನಿಕರು ಆತಂಕ ಪಡುತ್ತಿದ್ದಾರೆ.

ಋತುಚಕ್ರ ರಜೆ

ಅಗತ್ಯದ ದಿನಗಳಲ್ಲಿ ಈ ರಜೆಯನ್ನು ಬಳಸಿಕೊಳ್ಳಬೇಕು ಎಂದು ಅವರು ಮನವಿ ಮಾಡಿದರು. ಸರ್ಕಾರದ ಈ ನಿರ್ಧಾರವನ್ನು ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘವು ಮುಕ್ತವಾಗಿ ಸ್ವಾಗತಿಸಿದೆ. ಸಂಘದ ಅಧ್ಯಕ್ಷೆ ರೋಷಿನಿಗೌಡ ಅವರು ಪ್ರತಿಕ್ರಿಯೆ ನೀಡಿ, ಇದು ಸರ್ಕಾರ ತೆಗೆದುಕೊಂಡಿರುವ ಐತಿಹಾಸಿಕ ತೀರ್ಮಾನ. ಈ ನಿರ್ಧಾರ ನಮಗೆ ಬಹಳ ಹೆಮ್ಮೆಯ ಸಂಗತಿಯಾಗಿದೆ. ಸಂಘವು ಬಹಳ ವರ್ಷಗಳಿಂದ ಈ ಋತುಚಕ್ರ ರಜೆ ನೀತಿಗಾಗಿ ಹೋರಾಟ ನಡೆಸುತ್ತಾ ಬಂದಿತ್ತು, ಹಲವು ಸಭೆಗಳ ಮೂಲಕ ಸರ್ಕಾರದ ಗಮನ ಸೆಳೆಯ ಲಾಗಿತ್ತು. ನಮ್ಮ ಸಂಘಟನೆಯ ಹೋರಾಟಕ್ಕೆ ಇಂದು ಪ್ರತಿಫಲ ಸಿಕ್ಕಿದೆ. ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ನಮ್ಮ ಶುಭಾಶಯಗಳು ಎಂದು ರೋಷಿನಿಗೌಡ ತಿಳಿಸಿದರು.

ಸಚಿವರೊಂದಿಗೆ ಸಿಎಂ ಡಿನ್ನರ್ ಮೀಟಿಂಗ್

ಸಿಎಂ ಸರ್ಕಾರಿ ನಿವಾಸ ಕಾವೇರಿಯಲ್ಲಿ ಈ ಡಿನ್ನರ್ ಮೀಟಿಂಗ್ ನಡೆಯಲಿದೆ. ಬಿಹಾರ ಚುನಾವಣೆ ಬಳಿಕ ರಾಜ್ಯ ಕಾಂಗ್ರೆಸ್‌ನಲ್ಲಿ ಸಾಕಷ್ಟು ಬದಲಾವಣೆ ಎಂಬ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿರುವುದರಿಂದ, ಜೊತೆಗೆ 10–15 ಮಂದಿ ಸಚಿವರನ್ನು ಸಂಪುಟದಿಂದ ಕೈಬಿಡುವ ಸಾಧ್ಯತೆಯೂ ಇರುವುದರಿಂದ ಸಂಪುಟ ಸಹೋದ್ಯೋಗಿಗಳನ್ನು ಸಮಾಧಾನಪಡಿಸುವ ಸಲುವಾಗಿ ಔತಣಕೂಟದ ಮೂಲಕ ಸಿಎಂ ಸಿದ್ದರಾಮಯ್ಯ ವಿಶ್ವಾಸಕ್ಕೆ ಪಡೆಯಲು ಪ್ರಯತ್ನ ನಡೆಸಿದ್ದಾರೆ.

ಜೊತೆಗೆ ಆಯಾ ಕ್ಷೇತ್ರದಲ್ಲಿ ಮತ್ತು ಜಿಲ್ಲೆಯಲ್ಲಿ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ಟಾಸ್ಕ್ ನೀಡಿ, ಪಕ್ಷ ಬಲವರ್ಧನೆಗೆ ಶ್ರಮ ಪಡಲು ಸೂಚನೆ ನೀಡಲಾಗುತ್ತದೆ.

ಸಂಪುಟಕ್ಕೆ ಸೇರ್ಪಡೆಯಾಗುವವರ ಸಂಭಾವ್ಯ ಪಟ್ಟಿ

ಮಾಹಿತಿ ಪ್ರಕಾರ ಅನೇಕ ಮಂದಿ ಸಚಿವ ಸ್ಥಾನದ ರೇಸ್‌ನಲ್ಲಿದ್ದು, ಆ ಪೈಕಿ ಮುಂಚೂಣಿಯಲ್ಲಿರುವ ಟಿ.ಬಿ.ಜಯಚಂದ್ರ (ಶಿರಾ), ಯು.ಟಿ.ಖಾದರ್ (ಉಳ್ಳಾಲ), ಆರ್.ವಿ.ದೇಶಪಾಂಡೆ (ಹಳಿಯಾಳ), ಬಿ.ಕೆ.ಹರಿಪ್ರಸಾದ್ (ಎಂಎಲ್‌ಸಿ), ರಾಘವೇಂದ್ರ ಹಿಟ್ನಾಳ್ (ಕೊಪ್ಪಳ), ನಾರಾಯಣಸ್ವಾಮಿ (ಬಂಗಾರಪೇಟೆ), ಅನಿಲ್ ಚಿಕ್ಕಮಾದು (ಹೆಚ್.ಡಿ.ಕೋಟೆ), ರಘುಮೂರ್ತಿ (ಚಳ್ಳಕೆರೆ), ಶಿವಲಿಂಗೇಗೌಡ (ಅರಸೀಕೆರೆ), ರೂಪಾ ಶಶಿಧರ್ (ಕೆಜಿಎಫ್), ಎಂ ಕೃಷ್ಣಪ್ಪ (ವಿಜಯನಗರ), ತನ್ವೀರ್‌ಸೇಠ್ (ನರಸಿಂಹರಾಜ), ಯಶವಂತರಾಯ ಗೌಡ ಪಾಟೀಲ್ (ಇಂಡಿ), ಲಕ್ಷ್ಮಣ ಸವದಿ (ಅಥಣಿ) ಇವರಲ್ಲಿ ಬಹುತೇಕ ಮಂದಿಗೆ ಸಚಿವ ಸ್ಥಾನ ಸಿಗುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ.


ಇದರ ಜೊತೆಗೆ ಮುಖ್ಯವಾಗಿ ತಳಮಟ್ಟದಿಂದ ಪಕ್ಷ ಸಂಘಟನೆ ಮಾಡುವುದು, ಕಾರ್ಯಕರ್ತರ ಜೊತೆಗೆ ಸಂಪರ್ಕ ಸಭೆಗಳ ನಡೆಸುವುದು ಇನ್ನಿತರ ಜವಾಬ್ದಾರಿಗಳನ್ನು ನೀಡಲಾಗುತ್ತದೆ. ಈ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರು ಡಿನ್ನರ್ ಸಭೆಯಲ್ಲಿ ಹಿರಿಯರಿಗೆ ಅಸಮಾಧಾನಗೊಳ್ಳದಂತೆ ಪಾಠ ಮಾಡಲಿದ್ದಾರೆ ಎಂದು ಹೇಳಲಾಗಿದೆ.

ಶೇ.80 ಕಮಿಷನ್: ಆದರೆ ಮುಖ್ಯಮಂತ್ರಿಗಳ ಡಿನ್ನರ್ ಮೀಟಿಂಗ್‌ಗೆ ಹೈಕಮಾಂಡ್ ಎಚ್ಚರಿಕೆ ಹಿನ್ನೆಲೆಯಲ್ಲಿ ಆಯೋಜನೆಯಾಗುತ್ತಿದೆ ಎಂದು ಬಲ್ಲಮೂಲಗಳು ತಿಳಿಸಿವೆ. ಇತ್ತೀಚೆಗೆ ರಾಜ್ಯ ಗುತ್ತಿಗೆದಾರರ ಸಂಘ ಕಮಿಷನ್ ಶೇ.80ರವರೆಗೆ ತಲುಪಿದೆ ಎಂದು ಆರೋಪಿಸಿತ್ತು. ಇದರಿಂದ ಪಕ್ಷ ಹಾಗೂ ಸರ್ಕಾರಕ್ಕೆ ಭಾರಿ ಡ್ಯಾಮೇಜ್ ಆಗಿದ್ದು, ಇದನ್ನು ಕಂಟ್ರೋಲ್ ಮಾಡುವಂತೆ ಹೈಕಮಾಂಡ್ ಸಿಎಂ ಸಿದ್ದರಾಮಯ್ಯ ಅವರಿಗೆ ತಾಕೀತು ಮಾಡಿದೆ. ಹಾಗಾಗಿ ಮುಖ್ಯಮಂತ್ರಿಗಳು ಸಚಿವರಿಗೆ ಔತಣಕೂಟ ಏರ್ಪಡಿಸಿ, ಅಲ್ಲಿ ಕೆಲವು ಎಚ್ಚರಿಕೆ ಸಂದೇಶ ನೀಡಲು ನಿರ್ಧರಿಸಿದ್ದಾರೆನ್ನಲಾಗಿದೆ. ನೀವು ಈ ವಿಚಾರದಲ್ಲಿ ಭಾಗಿಯಾಗದಿದ್ದರೂ ಮಧ್ಯವರ್ತಿಗಳ ಹಾವಳಿಯಿಂದ ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ. ನಿಮ್ಮ ಸುತ್ತಮುತ್ತ ಇರುವಂತಹ ಮಧ್ಯವರ್ತಿಗಳ ಬಗ್ಗೆ ಎಚ್ಚರಿಕೆ ವಹಿಸಿ. ಈ ವಿಚಾರವನ್ನು ಹೈಕಮಾಂಡ್ ಗಂಭೀರವಾಗಿ ಪರಿಗಣಿಸಿದೆ ಎಂದು ಎಚ್ಚರಿಸಲಿದ್ದಾರೆ ಎಂದು ಹೇಳಲಾಗಿದೆ

ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಸೀನಿಯರ್ ನ್ಯಾಷನಲ್ ಯೋಗ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್‌ಗೆ ಚಾಲನೆ

ಉದ್ವೇಗ ತಡೆಗೆ ಯೋಗ ಮಾಡಿ: ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳು





ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಸೀನಿಯರ್ ನ್ಯಾಷನಲ್ ಯೋಗ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್‌ಗೆ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳು ಚಾಲನೆ ನೀಡಿದರು. ಮತ್ತೊಂದು ಚಿತ್ರದಲ್ಲಿ ನೃತ್ಯ ಪ್ರದರ್ಶನ ಕಾಣಬಹುದು

ಮೈಸೂರು,ಅ.9(ಜಿಎ)–ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಯೋಗ ಫೆಡರೇಷನ್ ಆಫ್ ಇಂಡಿಯಾ ಸಂಸ್ಥೆ 50ನೇ ಸುವರ್ಣ ಸಂಭ್ರಮ ಹಾಗೂ ಕರ್ನಾಟಕ ರಾಜ್ಯ ಅಮೆಚೂರ್ ಯೋಗ ಕ್ರೀಡಾ ಸಂಘ, ಗ್ಲೋಬಲ್ ಯೋಗ ಫೋರಮ್, ಮೈಸೂರು ಜಿಲ್ಲಾ ಯೋಗ ಕ್ರೀಡಾ ಫೌಂಡೇಷನ್ ಹಾಗೂ ಮೈಸೂರು ವಿವೇಕಾನಂದ ಯೋಗ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳ ಸಹಯೋಗದಲ್ಲಿ ಇಂದಿನಿಂದ ಆರಂಭವಾದ ಸೀನಿಯರ್ ನ್ಯಾಷನಲ್ ಯೋಗ ಸ್ಪೋರ್ಟ್ಸ್ ಚಾಂಪಿಯನ್ ಶಿಪ್‌ಗೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಚಾಲನೆ ನೀಡಿದರು.

ನಂತರ ಆಶೀರ್ವಚನ ನೀಡಿದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಸಣ್ಣ ಸಣ್ಣ ವಿಚಾರಗಳಿಗೂ ಇಂದು ಎಲ್ಲರೂ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಈ ರೀತಿಯ ಸಮಸ್ಯೆಗಳಿಗೆ ಯೋಗ ಸಹಕಾರಿಯಾಗಿದ್ದು, ಎಲ್ಲವನ್ನು ನಿಯಂತ್ರಿಸಲು ಸಾಥ್ ನೀಡುತ್ತದೆ. ಸಣ್ಣ ಪುಟ್ಟ ವಿಷಯಕ್ಕೂ ಕೋಪಗೊಳ್ಳುವುದರಿಂದ ಉತ್ತಮವಾದ ಉಸಿರಾಟದ ಕ್ರಿಯೆಯನ್ನು ಕಳೆದುಕೊಳ್ಳುತ್ತೇವೆ. ಎಲ್ಲಾ ವಿಚಾರಗಳಿಗೂ ಕೋಪ ಮಾಡಿಕೊಳ್ಳುವ, ಉದ್ವೇಗಕ್ಕೊಳಗಾಗುವುದನ್ನು ಕಡಿಮೆ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು.

590ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗಿ

ಇಂದಿನಿಂದ ಅ.12ರವರೆಗೆ ನಡೆಯುವ ಸ್ಪರ್ಧೆಯಲ್ಲಿ ಮಹಾರಾಷ್ಟ್ರ, ತಮಿಳುನಾಡು, ಒಡಿಸಾ, ಅಸ್ಸಾಂ, ಬಿಹಾರ್, ಕೇರಳ, ಆಂಧ್ರಪ್ರದೇಶ, ಕರ್ನಾಟಕ ಸೇರಿದಂತೆ 25 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಂದ 590ಕ್ಕೂ ಹೆಚ್ಚು ಯೋಗ ಪಟುಗಳು ಪಾಲ್ಗೊಂಡಿದ್ದರು. 145 ಆಕರ್ಷಕ ಯೋಗ, ಜೋಡಿ ಯೋಗ, ರಿದಮಿಕ್ ಯೋಗ ಮತ್ತು ಫ್ರೀ ಫ್ಲೋ ಯೋಗ ಸ್ಪರ್ಧೆಗಳು ನಡೆಯಲಿವೆ. 175 ರಾಷ್ಟ್ರೀಯ ಯೋಗ ನಿರ್ಣಾಯಕರು ಮತ್ತು ಅಧಿಕಾರಿಗಳು ಪಾಲ್ಗೊಂಡಿದ್ದರು.

ಸಾಂಸಾರಿಕ ಜೀವನದಲ್ಲಿ ಸ್ವಾಸ್ಥ್ಯ ಜೀವನ ನಡೆಸಲು ಯೋಗ ಸಹಕಾರಿಯಾಗಿದೆ. ಕಾಲಹರಣ ಮಾಡದೇ ಸಮಯಕ್ಕೆ ಮಹತ್ವ ನೀಡಬೇಕು. ಉತ್ತಮ ಜೀವನಕ್ಕೆ ಏಕಾಗ್ರತೆ ಬಹಳ ಮುಖ್ಯವಾಗಿದ್ದು, ಯೋಗದ ಮೊರೆ ಹೋಗಬೇಕು. ಆತ್ಮ ಅರ್ಪಣೆ ಮಾಡಿಕೊಳ್ಳಬೇಕು. ಅದಕ್ಕೂ ಮೊದಲು ದೇಹದ ಸ್ವಾಸ್ಥ್ಯ ಕಾಪಾಡಿಕೊಳ್ಳಬೇಕು ಎಂದರು.

ಭಾರತದಲ್ಲಿ ಮೊದಲು 1976ರಲ್ಲಿ ನಾನು ಯೋಗ ಪರಿಚಯಿಸಲು ಮುಂದಾದಾಗ ಇಲ್ಲಿನ ಜನರು ಅಪಹಾಸ್ಯ ಮಾಡಿದರು. ಆದರೆ, ಅಮೇರಿಕ, ಆಸ್ಟ್ರೇಲಿಯಾ, ವೆಸ್ಟ್ ಇಂಡೀಸ್ ಸೇರಿದಂತೆ ನಾನಾ ದೇಶಗಳಲ್ಲಿ ಯೋಗವನ್ನು ಕಲಿತುಕೊಂಡರು. ಈಗ ಎಲ್ಲರೂ ಯೋಗ ಯೋಗ ಎಂದು ಜಪ ಮಾಡುತ್ತಿದ್ದಾರೆ. ಭಾರತದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ಯೋಗಕ್ಕೆ ಪ್ರಾತಿನಿಧ್ಯ ನೀಡುವ ಮೂಲಕ ವಿಶೇಷ ಕೊಡುಗೆ ನೀಡಿದ್ದಾರೆ ಎಂದು ತಿಳಿಸಿದರು.

ಈ ವೇಳೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಭಾರತ ಸಂಪೂರ್ಣ ಆರ್ಥಿಕ ಅಭಿವೃದ್ಧಿ ರಾಷ್ಟ್ರವಾಗಿಸಲು ಮುನ್ನಡೆಯುತ್ತಿದ್ದು, ಅಂತಹ ಅಭಿವೃದ್ಧಿಗೆ ತಳಹದಿಯಾಗಿ ಭಾರತೀಯ ಸಂಸ್ಕೃತಿ ಮತ್ತು ಮನೋಶಕ್ತಿಯಿದೆ. ಅದಕ್ಕೆ ಯೋಗವೇ ಪ್ರಮುಖ ಕಾರಣವಾಗಿದ್ದು, ಬೇರೇನೂ ಅಲ್ಲ ಎಂದರು.

ಆಧುನಿಕ ಯೋಗ ಜಾಗತಿಕ ಹರಡುವಿಕೆಯ ಮೇಲೆ ಪ್ರಭಾವ ಬೀರಿದ್ದು, ಅದರ ಅಭ್ಯಾಸದಿಂದ ಕ್ರಿಯಾತ್ಮಕವಾಗಿ ವಿಕಸನಗೊಂಡಿದೆ. ಭಾರತೀಯರು ತಮ್ಮ ಜೀವನವನ್ನು ನಡೆಸುವ ವಿಧಾನ ಮತ್ತು ಆಧ್ಯಾತ್ಮಿಕತೆಯು ಯೋಗಾಭ್ಯಾಸದಿಂದ, ಯೋಗದ ತಾತ್ವಿಕ ಆಧಾರದಿಂದ ಬಂದಿದೆ. ಈ ಅಂಶವನ್ನು ನಾವು ಆ ತಿಳುವಳಿಕೆಯೊಂದಿಗೆ ಮುಂದುವರೆಸಬೇಕಿದೆ ಎಂದರು.

ಆಧುನಿಕ ಯೋಗ ಹುಟ್ಟಿದ್ದು ಮೈಸೂರಿನಲ್ಲಿ. ಅದರ ಭಾಗವಾಗಿ ಆಧುನಿಕ ಯೋಗ ಪಿತಾಮಹ ಟಿ.ಕೃಷ್ಣಮಾಚಾರ್ಯರು ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಯೋಗಾಭ್ಯಾಸ ಮಾಡುತ್ತಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಆ ಸಮಯದಲ್ಲಿ ಸ್ಥಾಪಕ ಕುಲಪತಿಯಾಗಿದ್ದರು. ಬಳಿಕ ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜು ಯೋಗಾಭ್ಯಾಸ ತರಬೇತಿ ಆರಂಭಿಸಿದ ಟಿ.ಕೃಷ್ಣಮಾಚಾರ್ಯರು ಬಿ.ಕೆ.ಎಸ್. ಐಯ್ಯಂಗಾರ್ ಮತ್ತು ಪಟ್ಟಾಭಿ ಜೋಯಿಸ್‌ರಿಗೆ ಯೋಗ ತರಬೇತಿ ನೀಡಿ ಯೋಗದಲ್ಲಿ ಮೈಸೂರನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯಲು ಸಾಧ್ಯವಾಗಿದೆ ಎಂದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಯೋಗ ಅಭ್ಯಾಸದಿಂದ ಏಕಾಗ್ರತೆ ಹಾಗೂ ಮನಸ್ಸಿನ ಶಾಂತಿ ಹೆಚ್ಚು ವೃದ್ಧಿಸುತ್ತದೆ. ಯೋಗ ದೈಹಿಕವಾಗಿ, ಮಾನಸಿಕವಾಗಿ, ಮನುಷ್ಯನ ಮಾನವೀಯ ಗುಣಕ್ಕೂ ಒತ್ತು ನೀಡಲಿದೆ. ಯುವಕರು ವಿದ್ಯಾರ್ಥಿ ಜೀವನದಿಂದಲೇ ಯೋಗ ಅಭ್ಯಾಸ ಮಾಡುವ ಕಡೆಗೆ ಒತ್ತು ನೀಡಬೇಕು. ನಾನು ಉನ್ನತ ಶಿಕ್ಷಣ ಸಚಿವನಾಗಿದ್ದಾಗ ಶಾಲಾ ಕಾಲೇಜುಗಳಲ್ಲಿ ಯೋಗ ಶಿಕ್ಷಣವನ್ನು ಆರಂಭಿಸಿ ಕಡ್ಡಾಯ ಶಿಕ್ಷಣವನ್ನಾಗಿಸಲು ಕಾರ್ಯಚಟುವಟಿಕೆಗಳು ನಡೆದಿದ್ದವು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ದತ್ತಪೀಠಂನ ದತ್ತ ವಿಜಯಾನಂದ ಸ್ವಾಮೀಜಿ, ಫೆಡರೇಷನ್ ಆಫ್ ಇಂಡಿಯಾದ ಮುಖ್ಯಸ್ಥ ಅಶೋಕ್‌ಕುಮಾರ್ ಅಗರವಾಲ್, ಸಿಇಒ ಇಂದು ಅಗರ್ವಾಲ್, ಅಧ್ಯಕ್ಷ ಡಾ.ಅನಿರುದ್ಧ್ ಗುಪ್ತಾ, ವಿವಿಧ ಯೋಗ ಸಂಸ್ಥೆಗಳ ಪದಾಧಿಕಾರಿಗಳಾದ ಮೈಸೂರು ಮಂಜುನಾಥ್, ವಾಸುದೇವ್ ಭಟ್, ಶ್ರೀಹರಿ, ಡಾ.ಗುರುರಾಜ್, ಕೆ.ಪ್ರಭು, ಪ್ರೊ.ಎಂ.ಜಿ.ಅಮರನಾಥ್, ಡಾ.ಪಿ.ಎನ್.ಗಣೇಶ್‌ಕುಮಾರ್, ಎ.ನಟರಾಜು ಉಪಸ್ಥಿತರಿದ್ದರು.

ಅಕ್ರಮ ಗಣಿಗಾರಿಕೆ: ರಿಕವರಿ ಆಯುಕ್ತರನ್ನಾಗಿ ಮಾಜಿ ಐಎಎಸ್ ಅಧಿಕಾರಿ ಕೃಷ್ಣರಾವ್ ನೇಮಕ

ಬೆಂಗಳೂರು, ಅ.9– ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಆಸ್ತಿಗಳನ್ನು ಜಪ್ತಿ ಮತ್ತು ಮುಟ್ಟುಗೋಲು ಪ್ರಕ್ರಿಯೆಗಳ ಮೇಲ್ವಿಚಾರಣೆ ಮಾಡಲು ಕರ್ನಾಟಕ ಸರ್ಕಾರ ನಿವೃತ್ತ ಐಎಎಸ್ ಅಧಿಕಾರಿ, ಮಾಜಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ.ವಿ.ಕೃಷ್ಣರಾವ್ ಅವರನ್ನು ರಿಕವರಿ ಆಯುಕ್ತರನ್ನಾಗಿ ನೇಮಿಸಿ, ಆದೇಶ ಹೊರಡಿಸಿದೆ.

ಅಕ್ರಮ ಗಣಿಗಾರಿಕೆ ಮತ್ತು ಅಪರಾಧ ಆದಾಯ ಕಾಯ್ದೆ 2025ಕ್ಕೆ ಸಂಬಂಧಿಸಿದಂತೆ ಆಸ್ತಿಯನ್ನು ಜಪ್ತಿ ಮತ್ತು ವಶಪಡಿಸಿಕೊಳ್ಳಲು ಕರ್ನಾಟಕ ವಸೂಲಾತಿ ಆಯುಕ್ತರ ನೇಮಕಾತಿ ನಿಯಮಗಳ ಅಡಿಯಲ್ಲಿ ನೇಮಿಸಲಾಗಿದೆ ಎಂದು ಅದು ಹೇಳಿದೆ.

ಸೆ.9ರಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಕಾನೂನುಬಾಹಿರ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ಅಧಿನಿಯಮ, 2025ಕ್ಕೆ ಸಹಿ ಹಾಕಿದ್ದಾರೆ. ಈ ಕಾಯ್ದೆಯು ರಾಜ್ಯದಾದ್ಯಂತ ಜಪ್ತಿ ಮತ್ತು ಮುಟ್ಟುಗೋಲು ಪ್ರಕ್ರಿಯೆಗಳನ್ನು ಮೇಲ್ವಿಚಾರಣೆ ಮಾಡಲು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಗಿಂತ ಕಡಿಮೆಯಿಲ್ಲದ ಹಿರಿಯ ಅಧಿಕಾರಿಯನ್ನು ವಸೂಲಾತಿ ಆಯುಕ್ತರಾಗಿ ನೇಮಕ ಮಾಡುವುದಕ್ಕೆ ಅವಕಾಶ ನೀಡುತ್ತದೆ.

ಕಾಯ್ದೆಯಡಿ ವಸೂಲಾತಿ ಆಯುಕ್ತರು ಅಕ್ರಮ ಗಣಿಗಾರಿಕೆಯಿಂದ ಸಂಪಾದಿಸಿದ ಚರ ಮತ್ತು ಸ್ಥಿರ ಆಸ್ತಿಗಳನ್ನು ವಶಪಡಿಸಿಕೊಳ್ಳುವ, ಅಧೀನ ಅಧಿಕಾರಿಗಳನ್ನು ಮೇಲ್ವಿಚಾರಣೆ ಮಾಡುವ ಮತ್ತು ಸಿವಿಲ್ ನ್ಯಾಯಾಲಯಕ್ಕೆ ಸಮಾನವಾದ ಅಧಿಕಾರವನ್ನು ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ. ಇತ್ತೀಚೆಗೆ ಹೊರಡಿಸಲಾದ ಸಂಬಂಧಿತ ಆದೇಶದಲ್ಲಿ, ಸರ್ಕಾರವು ಕೃಷ್ಣರಾವ್ ಅವರ ವೇತನ ಮತ್ತು ಸೇವಾ ನಿಯಮಗಳನ್ನು ನಿಗದಿಪಡಿಸಿದೆ.

ಅವರು ಮಾಸಿಕ 2,95,256 ರೂ. ವೇತನವನ್ನು ಪಡೆಯಲಿದ್ದು, ಇದರಲ್ಲಿ 1,04,006 ರೂ. ಮೂಲ ವೇತನ, ಜೊತೆಗೆ ಅವರ ಕೊನೆಯ ವೇತನವಾದ 2,25,000 ರೂ.ಗಳ ಮೇಲೆ ಲೆಕ್ಕಹಾಕಿದ ತುಟ್ಟಿಭತ್ಯೆ ಮತ್ತು ಮನೆ ಬಾಡಿಗೆ ಭತ್ಯೆಗಳು ಸೇರಿವೆ.

ದಸರಾ ಫಲಪುಷ್ಪ ಪ್ರದರ್ಶನ ಸ್ಪರ್ಧೆಯಲ್ಲಿ ಎಸ್‌ಡಿಎಂ–ಐಎಂಡಿಗೆ ಪ್ರಥಮ ಬಹುಮಾನ



ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮ್ಯಾನೇಜ್ಮೆಂಟ್ ಡೆವಲಪ್ಮೆಂಟ್ ಇನ್ಸ್ಟಿಟ್ಯೂಟ್ ದಸರಾ ಫಲಪುಷ್ಪ ಪ್ರದರ್ಶನ ಸ್ಪರ್ಧೆಯ ಶೈಕ್ಷಣಿಕ ಸಂಸ್ಥೆಗಳ ವರ್ಗದಲ್ಲಿ ಪ್ರಥಮ ಬಹುಮಾನವನ್ನು ಗಳಿಸಿದೆ. ಕರ್ನಾಟಕ ಸರ್ಕಾರದ ತೋಟಗಾರಿಕಾ ಇಲಾಖೆ ವತಿಯಿಂದ ಆಯೋಜಿಸಲಾದ ಈ ಸ್ಪರ್ಧೆಯಲ್ಲಿ 2004ರಿಂದಲೇ ಎಸ್‌ಡಿಎಂ–ಐಎಂಡಿ ನಿರಂತರವಾಗಿ ಪ್ರಶಸ್ತಿಗಳನ್ನು ಗಳಿಸಿ ಪರಿಸರ ಸ್ನೇಹದ ಪರಂಪರೆಯನ್ನು ಮುಂದುವರಿಸಿದೆ. ಸಂಸ್ಥೆಯ ತೋಟಗಾರಿಕಾ ತಂಡದೊಂದಿಗೆ ಡಾ.ಪ್ರಸಾದ್ ಎಸ್.ಎನ್., ನಿರ್ದೇಶಕರು, ಪ್ರೊ.ಸಿ.ವಿ.ಶ್ರೀಧರ್, ಮ್ಯಾನೇಜರ್, ಆಡಳಿತ ಮತ್ತು ಸಹ ಪ್ರಾಧ್ಯಾಪಕರು ಹಾಗೂ ನಂಜಯ್ಯ, ತೋಟಗಾರಿಕಾ ಅಧಿಕಾರಿ ಉಪಸ್ಥಿತರಿದ್ದರು.

ನೆರೆದಿದ್ದವರ ರಂಜಿಸಿದ ಡಾ. ವಿಷ್ಣುವರ್ಧನ್ ನಟನೆಯ ಗೀತೆಗಳ ಗಾಯನ ಕಾರ್ಯಕ್ರಮ



ಸಂಗೀತ ಸಂಜೆ ಕಾರ್ಯಕ್ರಮವನ್ನು ಸೌಂಡ್ ಎನ್ ರಿದಮ್ ಆರ್ಕೆಸ್ಟ್ರಾದ ಗಾಯಕಿಯರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು

ಮೈಸೂರು, ಅ.9(ವಿವಿಹೆಚ್)– ಸೌಂಡ್ ಎನ್ ರಿದಮ್ ಆರ್ಕೆಸ್ಟ್ರಾ ಅಂಡ್ ಡಿಜಿಟಲ್ ರೆಕಾರ್ಡಿಂಗ್ ಸ್ಟುಡಿಯೋ ವತಿಯಿಂದ ಮೈಸೂರಿನ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ಕನ್ನಡದ ಖ್ಯಾತ ನಟ ದಿವಂಗತ ಡಾ. ವಿಷ್ಣುವರ್ಧನ್ ಅವರ ಜನ್ಮದಿನೋತ್ಸವ ಹಾಗೂ ಅವರಿಗೆ ಕರ್ನಾಟಕ ರತ್ನ ಗೌರವ ಸಂದ ಸಂಬಂಧ ಗುರುವಾರ ಆಯೋಜಿಸಲಾಗಿದ್ದ ಡಾ.ವಿಷ್ಣುವರ್ಧನ್ ಸಿನಿಮಾ ಗೀತೆಗಳ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಕನ್ನಡದ ಹಾಡುಗಳು ಮೊಳಗಿದವು.

ವಿಷ್ಣುವರ್ಧನ್ ಅವರ ನಟನೆಯ ಸುಮಾರು 30ಕ್ಕೂ ಅಧಿಕ ಚಲನಚಿತ್ರ ಗೀತೆಗಳನ್ನು, 20ಕ್ಕೂ ಅಧಿಕ ಗಾಯಕ, ಗಾಯಕಿಯರು ಸೇರಿ ಸಾದರಪಡಿಸುವ ಮೂಲಕ ವಿಷ್ಣುವರ್ಧನ್ ಅವರಿಗೆ ನುಡಿನಮನ ಸಲ್ಲಿಸಲಾಯಿತು.

ಸಿಂಹಾದ್ರಿಯ ಸಿಂಹ ಚಿತ್ರದ 'ಕಲ್ಲಾದರೆ ನಾನು ಬೇಲೂರಿನ ಗುಡಿಯಲಿ ಇರುವೆ...', ಅವರ ಹೆಜ್ಜೆ ಚಿತ್ರದ 'ಬಂದೆಯಾ ಬಾಳಿನ ಬೆಳಕಾಗಿ..', ಬಂಗಾರದ ಜಿಂಕೆ ಚಿತ್ರದ 'ಒಲುವೆ ಸಿರಿಯಾ ಕಂಡು..', ಸೂರಪ್ಪ ನಾಯಕ ಚಿತ್ರದ 'ಯಾರು ಕಾಣದ ಸಪ್ತಸಾಗರ ನನ್ನ ಚೆಲುವೆ...', ಕದಂಬ ಚಿತ್ರದ 'ಯಾಮಿನಿ.. ಯಾರಮ್ಮ ನೀನು ಯಾಮಿನಿ..', ಸೂರ್ಯವಂಶ ಚಿತ್ರದ 'ಸೇವಂತಿಯೇ..', ಮತ್ತೆ ಹಾಡಿತು ಕೋಗಿಲೆ ಚಿತ್ರದ 'ಬಾ.. ನನ್ನ ಸಂಗೀತ' ಹಾಡುಗಳನ್ನು ಹಾಡಿದ ಗಾಯಕರು ನೆರೆದಿದ್ದವರ ಮನ ತಣಿಸಿದರು.

ಕಾರ್ಯಕ್ರಮದಲ್ಲಿ ಸಂಗೀತ ನಿರ್ದೇಶಕ ರವಿಶಂಕರ್, ಗಾಯಕರಾದ ಡಾ.ಶಿವಕುಮಾರ್, ಡಾ.ಮಂಜುಳಾದೇವಿ, ಅನುರಾಧ, ಡಾ.ಮನು, ರೇಖಾ, ಮೇರಿ, ಗೀತಾ, ನವನೀತ್, ಮುತ್ತುರಾಜ್, ಸರಿಗಮಪ ಖ್ಯಾತಿಯ ಯೋಗಶ್ರೀ ಉಪಸ್ಥಿತರಿದ್ದರು.

ಆತ್ಮ ನಿರ್ಭರತೆ ಯಶಸ್ಸು ವಿಶ್ವಾದ್ಯಂತ ಪ್ರತಿಧ್ವನಿಸುತ್ತಿದೆ

ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಸುಬ್ಬಣ್ಣ ಶ್ಲಾಘನೆ



ವರುಣಾ ಕ್ಷೇತ್ರ ವ್ಯಾಪ್ತಿಯ ಮೈಸೆಮ್ ಇಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ಆತ್ಮನಿರ್ಭರ ಭಾರತ ಕಾರ್ಯಾಗಾರದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸುಬ್ಬಣ್ಣ ಮಾತನಾಡಿದರು.

ಮೈಸೂರು, ಅ.9(ಎಂಕೆ)– ದೇಶಾದ್ಯಂತ ವಿವಿಧ ಕ್ಷೇತ್ರಗಳಲ್ಲಿ ಆತ್ಮನಿರ್ಭರತೆಯ ಸಾಧನೆಯ ಯಶಸ್ಸು ವಿಶ್ವದಾದ್ಯಂತ ಪ್ರತಿಧ್ವನಿಸುತ್ತಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸುಬ್ಬಣ್ಣ ಹೇಳಿದರು.

ವರುಣಾ ಕ್ಷೇತ್ರ ವ್ಯಾಪ್ತಿಯ ಮೈಸೆಮ್ ಇಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ಆತ್ಮನಿರ್ಭರ ಭಾರತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಪ್ರಧಾನಿ ಮೋದಿಯವರು ಎಲ್ಲಾ ಸಾಮಾಜಿಕ ಕ್ಷೇತ್ರಗಳಲ್ಲಿಯೂ ಸ್ವಾವಲಂಬನೆಯ ಪರಿಕಲ್ಪನೆಯನ್ನು ನನಸು ಮಾಡುತ್ತಾ ಬಂದಿದ್ದಾರೆ ಎಂದು ಶ್ಲಾಘಿಸಿದರು.

ಜಿಲ್ಲಾ ಸಹ ಸಂಚಾಲಕ ಶರತ್ ಪುಟ್ಟಬುದ್ದಿ ಮಾತನಾಡಿ, ದೇಶದ ಪ್ರತಿಯೊಬ್ಬ ನಾಗರಿಕರೂ ಸ್ವದೇಶಿ ಉತ್ಪನ್ನಗಳ ಬಳಕೆ, ಸ್ವದೇಶಿ ನೀತಿಯ ಆಧಾರದ ಮೇಲೆ ಸಾಮಾಜಿಕ ಜೀವನವನ್ನು ರೂಢಿಸಿಕೊಳ್ಳುವ ಪ್ರತಿಜ್ಞೆಯನ್ನು ಆತ್ಮನಿರ್ಭರ ಭಾರತ ಸಂಕಲ್ಪ ಅಭಿಯಾನದ ಮೂಲಕ ಕೈಗೊಳ್ಳಬೇಕೆಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಸೂಚಿಸಿದ್ದು, ಅದರಂತೆ ನಾವೆಲ್ಲರೂ ಸಂಕಲ್ಪ ಮಾಡಬೇಕು ಎಂದರು.

2014ರಲ್ಲಿ 686 ಕೋಟಿ ರೂ. ಇದ್ದ ರಕ್ಷಣಾ ಸಾಮಗ್ರಿಗಳ ರಫ್ತು, 2025 ರಲ್ಲಿ 23,622 ಕೋಟಿಯಷ್ಟಾಗಿದೆ. 2 ಲಕ್ಷ ಕೋಟಿ ರೂ. ಮೌಲ್ಯದ ಫೋನ್‌ಗಳನ್ನು ರಫ್ತು ಮಾಡುವಲ್ಲಿ ಭಾರತವು ಯಶಸ್ವಿಯಾಗಿದೆ. ಕೋವಿಡ್ ಸಂದರ್ಭದಲ್ಲಿ ವ್ಯಾಕ್ಸಿನ್ ತಯಾರಿಕೆ ಲಕ್ಷಾಂತರ ಜೀವಗಳನ್ನು ಉಳಿಸಲು ನೆರವಾಯಿತು ಎಂದು ಹೇಳಿದರು.

ವರುಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ನಗರ್ಲೆ ಮಹದೇವಸ್ವಾಮಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಮಾಜಿ ಜಿಪಂ ಸದಸ್ಯ ಸದಾನಂದ, ಮುಖಂಡರಾದ ಗುರುಸ್ವಾಮಿ, ಕೀಳನಪುರ ಮಾದಪ್ಪ, ಹದಿನಾರು ನಂಜುಂಡಸ್ವಾಮಿ, ಕೂಡನಹಳ್ಳಿ ಶಂಕರ್, ದಂಡೀಕೆರೆ ಶ್ರೀಧರ್, ಅಲಗಂಚಿ ಶಿವಯ್ಯ, ಲಕ್ಷ್ಮಿ, ಚೋರನಹಳ್ಳಿ ಗುರುಮೂರ್ತಿ, ನರಸಿಂಹ ನಾಯಕ ಮತ್ತಿತರರಿದ್ದರು.

ದೇವಾಲಯದ ಉದ್ಯಾನಕ್ಕೆ ಬಹುಮಾನ



ಮೈಸೂರಿನ ಕನ್ನೇಗೌಡನಕೊಪ್ಪಲು ಶ್ರೀ ಆದಿಶಕ್ತಿ ಬಂದಂತಮ್ಮ ಕಾಳಮ್ಮ ದೇವಸ್ಥಾನ ಆವರಣದ ಉದ್ಯಾನವನವನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಿದ್ದು, ಮೈಸೂರು ದಸರಾ ಮಹೋತ್ಸವದ ಫಲಪುಷ್ಪ ಪ್ರದರ್ಶನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ದಕ್ಕಿದೆ. ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ದೇವಸ್ಥಾನದ ಸೇವಾ ಸಮಿತಿ ಅಧ್ಯಕ್ಷ ಬಾಲು, ಪ್ರಮಾಣ ಪತ್ರ ಹಾಗೂ ಟ್ರೋಫಿ ಸ್ವೀಕರಿಸಿದರು. ಈ ವೇಳೆ ರಂಗಪ್ಪ, ಮಾದಪ್ಪ ಮತ್ತಿತರರಿದ್ದರು.

ಬೆಳಗ್ಗೆ ಸುರಿದು ಬಿಡುವು ನೀಡಿದ್ದ ಮಳೆರಾಯ ರಾತ್ರಿ ಸುರಿದಿದ್ದೇ ಆಯ್ತು



ಮೈಸೂರು, ಅ.9– ಮೈಸೂರಲ್ಲಿ ಗುರುವಾರ ಬೆಳ್ಳಂಬೆಳಗ್ಗೆ ಅಬ್ಬರಿಸಿದ್ದ ಮಳೆ, ರಾತ್ರಿಯೂ ಸುರಿದು ಸಾರ್ವಜನಿಕರನ್ನು ಹೈರಾಣಾಗಿಸಿತು. ರಾತ್ರಿ 8 ಗಂಟೆ ಸುಮಾರಿಗೆ ಶುರುವಾದ ಮಳೆ, ಕೆಲಕಾಲ ಜೋರಾಗಿತ್ತು. ನಂತರ ಸಣ್ಣದಾಗಿ ಸುರಿಯಲಾರಂಭಿಸಿತು. ಜೋರು ಮಳೆಯಾದ ವೇಳೆ ರಸ್ತೆಗಳೆಲ್ಲಾ ಜಲಾವೃತಗೊಂಡಿದ್ದವು. ತಗ್ಗು ಪ್ರದೇಶದಲ್ಲಿ ಭಾರೀ ಪ್ರಮಾಣದಲ್ಲಿ ನೀರು ನಿಂತಿತ್ತು. ದ್ವಿಚಕ್ರ ವಾಹನ ಸವಾರರು ಪರದಾಡಿದರು. ಕೆಲವರು ವಾಹನ ನಿಲ್ಲಿಸಿ, ಅಂಗಡಿ ಮುಂಗಟ್ಟುಗಳ ಮುಂದೆ ಆಶ್ರಯ ಪಡೆದರು.

ಖುಷಿಗೆ ತಣ್ಣೀರು: ದಸರಾ ದೀಪಾಲಂಕಾರ ಕಣ್ತುಂಬಿಕೊಳ್ಳಲು ಹಾಗೂ ದಸರಾ ವಸ್ತು ಪ್ರದರ್ಶನ ವೀಕ್ಷಣೆಗೆ ಆಗಮಿಸಿದ್ದ ಸಾರ್ವಜನಿಕರಿಗೆ ಕೆಲಕಾಲ ತೊಂದರೆ ಉಂಟಾಯಿತು. ಮಳೆ ಜೋರಾದಾಗ ಕೆಲವೆಡೆ ವಿದ್ಯುತ್ ದೀಪಾಲಂಕಾರವೂ ಆಫ್ ಆಗಿತ್ತು. ಕೆಲವರು ನಿರಾಸೆಯಿಂದ ಮಳೆಯಲ್ಲೇ ನೆನೆಯುತ್ತ ಮನೆಯತ್ತ ಸಾಗಿದರು. ಮುಂಜಾಗ್ರತೆಯಿಂದ ಕೊಡೆ ತಂದಿದ್ದವರು ಮಳೆಯಲ್ಲೂ ಮಳಿಗೆಗಳ ವೀಕ್ಷಣೆ ಮುಂದುವರೆಸಿದರು. ವ್ಯಾಪಾರಿಗಳು ದೊಡ್ಡ ಛತ್ರಿ, ಟಾರ್ಪಲ್ ಕಟ್ಟಿಕೊಂಡಿದ್ದರೂ ವ್ಯಾಪಾರ ಕಡಿಮೆಯಾಗಿತ್ತು. ಬೀದಿ ಬದಿಯಲ್ಲಿ ಹೂ, ತರಕಾರಿ ಮಾರಾಟ ಮಾಡುವವರು ನಷ್ಟ ಅನುಭವಿಸಿದರು. ಚಾಟ್ಸ್, ಫಾಸ್ಟ್‌ಫುಡ್‌ಗಳಲ್ಲಿ ವ್ಯಾಪಾರ ಸಾಧಾರಣವಾಗಿತ್ತು.

ಬೆಳಗ್ಗೆ ಸುರಿದ ಭಾರೀ ಮಳೆಯಿಂದ ದೊಡ್ಡ ಮೋರಿಗಳು ತುಂಬಿ ಹರಿದು ಹಲವು ಮನೆಗಳಿಗೆ ನೀರು ತುಂಬಿತ್ತು. ಹಲವು ಬಡಾವಣೆಗಳಲ್ಲಿ ಮ್ಯಾನ್‌ಹೋಲ್ ಉಕ್ಕಿ ಹರಿದು ಸಾರ್ವಜನಿಕರು ತೊಂದರೆ ಅನುಭವಿಸಿದರು. ಕೆಲ ಗಂಟೆಗಳ ನಂತರ ಮಳೆ ಬಿಡುವು ನೀಡಿದ್ದರಿಂದ ನಿಟ್ಟುಸಿರು ಬಿಟ್ಟಿದ್ದ ಜನರಿಗೆ ರಾತ್ರಿ ಮತ್ತೆ ಆತಂಕ ಎದುರಾಯಿತು.

ಬಂಡಿಪಾಳ್ಯ ಎಪಿಎಂಸಿ ಆವರಣದಲ್ಲಿ ಹಸಿ ಕಸದಿಂದ ಬಯೋಗ್ಯಾಸ್ ಉತ್ಪಾದನೆಗೆ ಸರ್ಕಾರ ಗ್ರೀನ್ ಸಿಗ್ನಲ್

ಶೂನ್ಯ ತ್ಯಾಜ್ಯ ಮಾರುಕಟ್ಟೆಯನ್ನಾಗಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ; ಉಳಿದ ತ್ಯಾಜ್ಯ ಗೊಬ್ಬರವಾಗಿ ಪರಿವರ್ತನೆ



ಮೈಸೂರು, ಅ.9(ಎಂಕೆ)– ಮೈಸೂರು–ನಂಜನಗೂಡು ರಸ್ತೆಯ ಬಂಡಿಪಾಳ್ಯ ಕೃಷಿ ಉತ್ಪನ್ನ ಮಾರುಕಟ್ಟೆ(ಎಪಿಎಂಸಿ) ಆವರಣದಲ್ಲಿ ಕೊಳೆತು ಗೊಬ್ಬರವಾಗುತ್ತಿರುವ ಹಸಿ ತ್ಯಾಜ್ಯವನ್ನು ಇಂಧನವಾಗಿ ಪರಿವರ್ತಿಸಲು ರಾಜ್ಯ ಸರ್ಕಾರ ಗ್ರೀನ್ ಸಿಗ್ನಲ್ ನೀಡಿದೆ.

ಮಾರುಕಟ್ಟೆಯಲ್ಲಿ ಪ್ರತಿನಿತ್ಯ ಸಂಗ್ರಹವಾಗುವ ಹಸಿಕಸದಿಂದ ಬಯೋಗ್ಯಾಸ್ ಉತ್ಪಾದಿಸಲು ರೂಪಿಸಿರುವ ಕ್ರಿಯಾ ಯೋಜನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದ್ದು, ಈ ಮೂಲಕ ಎಂಪಿಎಂಸಿಯನ್ನು ಶೂನ್ಯ ತ್ಯಾಜ್ಯ ಮಾರುಕಟ್ಟೆಯನ್ನಾಗಿ ಪರಿವರ್ತಿಸುವ ಕಾರ್ಯ ಸದ್ಯದಲ್ಲಿಯೇ ಆರಂಭವಾಗಲಿದೆ.

> ಎಪಿಎಂಸಿ ಆವರಣದಲ್ಲಿ ಬಯೋಗ್ಯಾಸ್ ಘಟಕ ಸ್ಥಾಪನೆಯಿಂದ ಕಸವನ್ನು ಹೊರಗಡೆ ಎಸೆಯುವುದು ತಪ್ಪುತ್ತದೆ. ಇಲ್ಲಿಯೇ ಹಸಿ ಕಸವನ್ನು ರೀ ಜನರೇಟ್ ಮಾಡಿ, ಗ್ಯಾಸ್ ಉತ್ಪಾದನೆ ಬಳಿಕ ಉಳಿಯುವ ತ್ಯಾಜ್ಯವನ್ನು ಸಹ ನರ್ಸರಿ ಗಿಡಗಳ ಬಳಕೆಗೆ ಗೊಬ್ಬರವಾಗಿ ಬಳಸಲಾಗುವುದು.
> – ಕುಮಾರಸ್ವಾಮಿ, ಕಾರ್ಯದರ್ಶಿ, ಎಪಿಎಂಸಿ

ಎಪಿಎಂಸಿ ಆವರಣದಲ್ಲಿ ಒಂದು ಕಡೆ ತರಕಾರಿ ಮತ್ತು ಹಣ್ಣುಗಳ ಮಾರಾಟದ ಆವರಣವಿದ್ದರೆ, ಮತ್ತೊಂದು ಕಡೆ ಕಚೇರಿಯೊಂದಿಗೆ ದಿನಸಿ ಪದಾರ್ಥಗಳ ಮಾರಾಟ ಮಳಿಗೆಗಳೊಂದಿಗೆ ದವಸ, ಧಾನ್ಯಗಳ ಮಾರಾಟ ಪ್ರಾಂಗಣವಿದೆ. ನಿತ್ಯ ಸಂಗ್ರಹವಾಗುವ 25 ರಿಂದ 30 ಟನ್ ಕಸವನ್ನು ಎಪಿಎಂಸಿ ಆವರಣದಲ್ಲಿನ ಘಟಕದಲ್ಲಿ ಸಂಸ್ಕರಿಸಿ ಎರೆಹುಳು ಗೊಬ್ಬರವನ್ನಾಗಿ ಸಿದ್ಧಪಡಿಸಿ ಮಾರಾಟ ಮಾಡಲಾಗುತ್ತಿದೆ. ಈಗ ಅದೇ ಹಸಿ ತ್ಯಾಜ್ಯವನ್ನು ಇಂಧನವನ್ನಾಗಿಸಲು 50 ಟಿಪಿಡಿ ಸಾಮರ್ಥ್ಯದಲ್ಲಿ ಬಯೋ ಸಿಎನ್‌ಜಿ ಘಟಕ ಸ್ಥಾಪಿಸಲಾಗುತ್ತಿದೆ.

ಸುಮಾರು 1 ಎಕರೆ ಪ್ರದೇಶದಲ್ಲಿ ಖಾಸಗಿ ಸಹಭಾಗಿತ್ವದೊಂದಿಗೆ ಅಂದಾಜು 24 ಲಕ್ಷ ರೂ.ಗಳಲ್ಲಿ ಬಯೋಗ್ಯಾಸ್ ಘಟಕ ನಿರ್ಮಾಣವಾಗಲಿದ್ದು, ತರಕಾರಿ ತ್ಯಾಜ್ಯವನ್ನು ವಾಹನಗಳಿಗೆ ಇಂಧನವನ್ನಾಗಿಸಲು ನಿರ್ಧರಿಸಿದೆ. ಬಯೋಗ್ಯಾಸ್ ತಯಾರಿಕೆ ನಂತರ ಉಳಿದ ತ್ಯಾಜ್ಯವನ್ನು ಸಹ ಗೊಬ್ಬರವನ್ನಾಗಿ ಬಳಕೆ ಮಾಡಲಾಗುವುದು ಎಂದು ಎಪಿಎಂಸಿ ಕಾರ್ಯದರ್ಶಿ ಕುಮಾರಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಹಂಚಿಕೆ ನಿರ್ಧಾರವಾಗಿಲ್ಲ: ಖಾಸಗಿ ಸಹಭಾಗಿತ್ವದಲ್ಲಿ ಬಯೋಗ್ಯಾಸ್ ಘಟಕ ನಿರ್ಮಾಣ ಮಾಡಲಾಗುತ್ತಿದ್ದು, ತಯಾರಾಗುವ ಬಯೋ ಗ್ಯಾಸ್‌ನಲ್ಲಿ ಎಷ್ಟೆಷ್ಟು ಪ್ರಮಾಣವನ್ನು ಹಂಚಿಕೊಳ್ಳಬೇಕು. ಎಷ್ಟು ವರ್ಷಗಳ ಅಗ್ರಿಮೆಂಟ್ ಆಗಬೇಕು ಎಂಬುದು ಇನ್ನೂ ನಿರ್ಧಾರವಾಗಿಲ್ಲ. ಸರ್ಕಾರದ ಮಟ್ಟದಲ್ಲಿ ಅನುಮೋದನೆ ದೊರೆತಿದ್ದು, ಅನುದಾನ ಹಣಕಾಸು ಇಲಾಖೆ ಮೂಲಕ ವರ್ಗಾವಣೆಯಾಗಬೇಕಿದೆ ಎಂದು ಮಾಹಿತಿ ನೀಡಿದರು.

ಮೈಸೂರು ಮಾನ್ಸೂನ್ ರೇಸ್

11ನೇ ದಿನ, ಶುಕ್ರವಾರ, 10–10–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.30 ಗಂಟೆಗೆ

I. ಮಂಡ್ಯ ಪ್ಲೇಟ್ –1600 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1 ನ್ಯಾಚುರಲ್ ಪ್ಲೈ 2. ವಾರಿಯರ್ ವುಮನ್

II. ಬೇಲೂರ್ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಅಮೇಜಿಂಗ್ ಅಟ್ರಾಕ್ಷನ್ 2. ಅಕಂತಾ

III. ಒರಿಜಿನಲ್ ವೇಲ್ ಟ್ರೋಫಿ–1600 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1 ಮಿಸ್ಟಿ ಕೋಸ 2 ಸ್ಟಾರ್ ವಿನ್‌ಸ್ಕಿ


IV ಮೈಸೂರ್ ದಸರಾ ಸ್ಪ್ರಿಟ್ ಚಾಂಪಿಯನ್‌ಶಿಪ್ –1200 ಮೀ. 3 ವರ್ಷ (ಟರ್ಮ್ಸ್). ಮ.4.00ಕ್ಕೆ
1. ಮಿ ರೋಪಿ 2. ಇಂಪಿರಿಯಲ್ ಬ್ಲೂ

V. K.T. ಶ್ಯಾಮಯ್ಯಗೌಡ ಮೆಮೋರಿಯಲ್ ಟ್ರೋಫಿ–1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1 ಕ್ರಾಸ್ ವಾಟರ್ 2. ವಂದ್ಯ ದೇವನ್

VI. ಭರಚುಕ್ಕಿ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮೈಸೂರ್ ಬೇಸ್ಡ್ ಹಾರ್ಸ್. ಸಂ.5.00ಕ್ಕೆ
1 ಸಿಯನ್ನ ಪ್ರಿನ್ಸ್ 2 ಡಿ ರೋಮನ್ ರೀಜನ್ಸ್

ದಿನದ ಅತ್ಯುತ್ತಮ	ಮಿರೋಫಿ
ಡಬ್ಬಲ್	ಮಿಸ್ಟಿ ಕೋಸ, ಕ್ರಾಸ್ ವಾಟರ್
ಜಾಕ್‌ಪಾಟ್	2, 3, 4, 5 ಮತ್ತು 6
ಮಿನಿ ಜಾಕ್‌ಪಾಟ್	3, 4, 5 ಮತ್ತು 6
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	4, 5 ಮತ್ತು 6
ಎಕ್ಸ್‌ಆಕ್ಟ್	1 ರಿಂದ 6

ಟಿಪ್‌ಸ್ಟರ್ ಪಿಜಿಸಿ


ಶ್ರೀಯುತ ಶ್ರೀಧರ್ ರವರು
ಮಾಜಿ ಉಪ ಮಹಾಪೌರರು ಹಾಗೂ ಮಾಜಿ ನಗರಪಾಲಿಕೆ ಸದಸ್ಯರು,
ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಇವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು
ಶ್ರೀಧರ್ ರವರ ಸ್ನೇಹಿತರು ಹಾಗೂ ಬಂಧುಮಿತ್ರರು


Jewels Of India Bangalore
Exhibition & Sale
ಭಾರತದ ಅತಿದೊಡ್ಡ
ಆಭರಣ ಉತ್ಸವ
ಇಂದಿನಿಂದ ಪ್ರಾರಂಭವಾಗುತ್ತದೆ
10 - 11 - 12
OCTOBER
2025
Tripura Vasini
Palace Grounds
Bengaluru
Gold | Diamond | Silver
Guest of Honour
Samantha
Ruth Prabhu
ಒಂದೇ ಸೂರಿನಡಿಯಲ್ಲಿ 100 ಕ್ಕೂ ಹೆಚ್ಚು ಆಭರಣ ಮಾರಾಟಗಾರರು.
Scan the QR Code to Register
VIP ಪಾಸ್ ಗಳನ್ನು ಖರೀದಿಸಲು,
ನಮ್ಮ ವೆಬ್ ಸೈಟ್ ಗೆ ಭೇಟಿ ನೀಡಿ ಹಾಗೂ
ವಿಶೇಷ ಅನುಕೂಲಗಳನ್ನು ಪಡೆಯಿರಿ
FREE GOLD COIN*
JOI
ಎಕ್ಸ್‌ಪೋದಲ್ಲಿರುವ
Jewels Of India
ಸ್ಟಾಲ್‌ಗೆ ಭೇಟಿ ನೀಡಿ ಮತ್ತು
ಖಚಿತವಾದ ಉಚಿತ ಚಿನ್ನದ
ನಾಣ್ಯವನ್ನು ಪಡೆಯಿರಿ
*Conditions Apply


ಮಾಜಿ ಮಹಾನಗರಪಾಲಿಕೆ ಸದಸ್ಯರು ಹಾಗೂ ನಂಜನಗೂಡು ಅಯ್ಯಪ್ಪಸ್ವಾಮಿ ದೇವಸ್ಥಾನದ ಗುರುಸ್ವಾಮಿಗಳಾದ
ಶ್ರೀ ಪಿ.ದೇವರಾಜು ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಜನಾನುರಾಗಿ ಸ್ನೇಹಜೀವಿಯಾದ ನಿಮಗೆ ತಾಯಿ ಚಾಮುಂಡೇಶ್ವರಿ, ಆಯುರಾರೋಗ್ಯ, ಐಶ್ವರ್ಯ,
ಉನ್ನತ ರಾಜಕೀಯ ಅಧಿಕಾರ ಕೊಟ್ಟು ಕಾಪಾಡಲಿ ಎಂದು ಹಾರೈಸುತ್ತೇವೆ.
ಶುಭಕೋರುವವರು :
ಮಾಲೀಕರು: ಪಿ.ಟಿ.ಬೋರ್ಡಿಂಗ್ ಮತ್ತು ಲಾಡ್ಜಿಂಗ್, ಗುರುರಾಜ ವೈನ್ಸ್, ಮಹೇಶ್ವರಿ ಸಂಧ್ಯಾ ವೈನ್ಸ್,
ಸುಂದರ್ ವೈನ್ಸ್ ಮತ್ತು ಕಿಂಗ್ಸ್ ಟೌನ್ ಗಾರ್ಡನ್ ರೆಸ್ಟೋರೆಂಟ್ ನಂಜನಗೂಡು.
GRAPHIC WORLD
9535370787